ಗುರುವಾರ, ಏಪ್ರಿಲ್ 3, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani





SHOWROOMS: KARNATAKA: BENGALURU: RENAULT **BANNERGHATTA ROAD** Ph: 8546820204, RENAULT **MYSORE ROAD** Ph: 8527240549 & 7026666922, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626 & 7353760555, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, 9071767600 & 8884498993, RENAULT **YESWANTHPUR** Ph: 9311832962 & 9311832968. RENAULT **TUMKUR** Ph: 7353764337.

ಮುಖ್ಯಮಂತ್ರಿಯವರೇ ಎ.ಸಿ ಕೊಠಡಿ ಬಿಟ್ಟು ಹೊರಬನ್ನಿ, ಜನರ ಕಷ್ಟ ತಿಳಿದುಕೊಳ್ಳಿ: ಬಿ.ವೈ.ವಿಜಯೇಂದ್ರ ಕಿಡಿ

‘ಬೆಲೆ ಏರಿಕೆ ಬೇಗೆಯಲ್ಲಿ ಬೇಯುತ್ತಿರುವ ಜನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಗಳೇ ನಿಮ್ಮ ಹವಾನಿಯಂತ್ರಿತ ಕೊಠಡಿಯಿಂದ ಹೊರ ಬನ್ನಿ. ಒಳಗೇ ಕುಳಿತಿದ್ದರೆ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಬಡ– ಮಧ್ಯಮ ವರ್ಗದ ಜನರ ಕಷ್ಟದ ಅರಿವು ನಿಮಗಾಗುವುದಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಆರಂಭವಾದ ಅಹೋರಾತ್ರಿ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಪೆಟ್ರೋಲ್, ಡೀಸೆಲ್, ಹಾಲಿನ ದರ, ವಿದ್ಯುತ್, ಕಸ, ಸರ್ಕಾರಿ ಆಸ್ಪತ್ರೆಗಳ ಶುಲ್ಕವೂ ಸೇರಿ ಎಲ್ಲ ರೀತಿಯ ಸೇವೆಗಳ ಮೇಲೂ ದರ ಏರಿಕೆ ಮಾಡಿದ್ದಾರೆ. ನಿನ್ನೆ ರಾತ್ರಿಯಷ್ಟೇ ಡೀಸೆಲ್ ಬೆಲೆ ₹2 ಹೆಚ್ಚಿಸಿದ್ದಾರೆ. ಈ ಮೂಲಕ ನಾಡಿನ ಜನರ ಸಹನೆ ಪರೀಕ್ಷೆ ಮಾಡಲು ಸರ್ಕಾರ ಮುಂದಾಗಿದೆ’ ಎಂದರು.

‘ಮುಖ್ಯಮಂತ್ರಿಯವರಿಗೆ ಕುರ್ಚಿಯ ಅಭದ್ರತೆ ಕಾಡುತ್ತಿರಬಹುದು. ನೀವು ಕೇವಲ ಬೆಂಗಳೂರಿನ ಮುಖ್ಯಮಂತ್ರಿ ಅಲ್ಲ. ರಾಯಚೂರು, ಕೊಪ್ಪಳ, ಬೆಳಗಾವಿ ಸೇರಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಸಚಿವರ ಜೊತೆ ಪ್ರವಾಸ ಮಾಡಿ. ಹಿಂದೆ ರಾಜ– ಮಹಾರಾಜರು ಮಾರುವೇಷದಲ್ಲಿ ತೆರಳಿ ಪ್ರಜೆಗಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬಳಿಕ ಜನರಿಗೆ ಅನುಕೂಲ ಆಗುವ ಯೋಜನೆ ಜಾರಿಗೊಳಿಸುತ್ತಿದ್ದರು. ಒಂದು ವೇಳೆ ನಿಮಗೆ ಕುರ್ಚಿಯ ಅಭದ್ರತೆ ಕಾಡುತ್ತಿದ್ದರೆ, ಡಿ.ಕೆ.ಶಿವಕುಮಾರ್ ಅವರನ್ನು ಜೊತೆಗೆ ಕರೆದುಕೊಂಡು ಹೋಗಿ. ರಾಜ್ಯದ ಜನರು ಸಂತೋಷವಾಗಿದ್ದಾರಾ ಎಂಬುದನ್ನು ತಿಳಿದುಕೊಳ್ಳಿ’ ಎಂದರು.

‘ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಕಾನೂನು ಬಾಹಿರವಾಗಿ ಶೇ 4 ಮೀಸಲಾತಿ ನೀಡಿದ್ದಾರೆ. ಮತ್ತೊಂದು ಕಡೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ಮೀಸಲಿಟ್ಟ ಎಸ್‌ಇಎಸ್‌ಪಿ ಟಿಎಸ್‌ಪಿ ಹಣವನ್ನು ನಿರಂತರವಾಗಿ ದುರುಪಯೋಗ ಮಾಡಿಕೊಂಡಿದ್ದಾರೆ. ಆದ್ದರಿಂದ ಜನರ ಆಕ್ರೋಶಕ್ಕೆ ಧ್ವನಿಯಾಗಲು ಇದೇ 7ರಿಂದ ರಾಜ್ಯವ್ಯಾಪಿ ಜನಾಕ್ರೋಶ ಯಾತ್ರೆ ಮಾಡಲಿದ್ದೇವೆ’ ಎಂದು ವಿಜಯೇಂದ್ರ ಹೇಳಿದರು.

ವಿರೋಧಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ಬಜೆಟ್‌ನಲ್ಲಿ ಯಾವುದೇ ತೆರಿಗೆ ತೋರಿಸದೇ ಇದೀಗ ಬೆಲೆ ಏರಿಕೆ ಮಾಡಲಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಶೇ 60 ಕಮಿಷನ್ ಪಡೆದುಕೊಳ್ಳುತ್ತಿದೆ. ಸ್ಮಾರ್ಟ್ ಮೀಟರ್‌ನಲ್ಲಿ ₹15,000 ಕೋಟಿ ಹಗರಣ ನಡೆದಿದೆ. ಸಿದ್ದರಾಮಯ್ಯ ಹೆಸರಿಗಷ್ಟೇ ಮುಖ್ಯಮಂತ್ರಿ. ಸರ್ಕಾರವೇ ಗಾಲಿ ಕುರ್ಚಿಯಲ್ಲಿದೆ’ ಎಂದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಮುಖಂಡರಾದ ಬಿ. ವೈ ವಿಜಯೇಂದ್ರ, ಆರ್ ಅಶೋಕ್, ಛಲವಾದಿ ನಾರಾಯಣಸ್ವಾಮಿ ಅಹೋರಾತ್ರಿ ಪ್ರತಿಭಟನೆ ಸ್ಥಳದಲ್ಲೇ ಮಲಗಿದರು
ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಗ್ಯಾರಂಟಿ ನೀಡುವ ಸರ್ಕಾರ. ಕರ್ನಾಟಕ ದಲ್ಲಿ ಬಿಜೆಪಿಯ ಸರ್ಕಾರ ಮುಂದಿನ ದಿನಗಳಲ್ಲಿ ಬರಲಿದೆ
ಸುಧಾಕರ ರೆಡ್ಡಿ
ರಾಜ್ಯ ಬಿಜೆಪಿ ಸಹ ಉಸ್ತುವಾರಿ

‘ಈ ಸರ್ಕಾರ ಹೆಚ್ಚು ದಿನ ನಡೆಯಬಾರದು’

‘ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಆರಂಭವಾಗಿರುವ ಅಹೋರಾತ್ರಿ ಧರಣಿ ತಾರ್ಕಿಕ ಅಂತ್ಯ ಮುಟ್ಟುವವರೆಗೆ ನಿಲ್ಲಿಸಬಾರದು. ರಾಜ್ಯವ್ಯಾಪಿ ಹೋರಾಟ ನಡೆಸಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

‘ಅಜೀರ್ಣ ಆಗುವಷ್ಟು ಬಹುಮತ ಕೊಟ್ಟ ಕಾರಣ ಜನರ ಹಿತ ಮರೆತು ಈ ಸರ್ಕಾರ ಸರ್ವಾಧಿಕಾರ ಮೆರೆಯುತ್ತಿದೆ. ಬೆಲೆ ಏರಿಕೆಯಿಂದ ಜನ ಕಂಗೆಟ್ಟಿದ್ದಾರೆ. ಈ ಸರ್ಕಾರ ಹೆಚ್ಚು ದಿನ ನಡೆಯದಂತೆ ಹೋರಾಟ ಮಾಡಬೇಕಿದೆ. ಸರ್ಕಾರದ ವೈಫಲ್ಯದ ವಿರುದ್ಧ ಮನೆಗೆ ಮನೆಗೆ ಹೋಗಿ ಜಾಗೃತಿ ಮೂಡಿಸಬೇಕು’ ಎಂದರು.

ಶಾಸಕರ ಅಮಾನತು ಆದೇಶ ವಾಪಸ್‌ಗೆ ಆಗ್ರಹ

ಬಿಜೆಪಿಯ 18 ಶಾಸಕ ಅಮಾನತು ಆದೇಶವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ಬಿಜೆಪಿ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಕೆಂಗಲ್ ಹನುಮಂತಯ್ಯ ಪ್ರತಿಮೆ ಮುಂದೆ ಬುಧವಾರ ಪ್ರತಿಭಟನೆ ನಡೆಸಿದರು.



ಈ ವೇಳೆ ಮಾತನಾಡಿದ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು, ‘ಹನಿಟ್ರ್ಯಾಪ್ ಪ್ರಕರಣ ಕುರಿತು ಸಿಬಿಐ ಅಥವಾ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಶಾಸಕರು ಸಭಾಧ್ಯಕ್ಷರ ಪೀಠದ ಬಳಿ ಧರಣಿ ನಡೆಸಿದ್ದರು. ಯಾವುದೇ ಒಂದು ತನಿಖೆಗೆ ಸರ್ಕಾರ ಒಪ್ಪಿದ್ದರೂ ಪ್ರತಿಭಟನೆ ಕೈಬಿಡುತ್ತಿದ್ದೆವು. ಆದರೆ ಸಭಾಧ್ಯಕ್ಷರು ಸೌಜನ್ಯಕ್ಕೂ ಶಾಸಕರ ಕರೆದು ಮಾತನಾಡಿಸಲಿಲ್ಲ. ಅಮಾನತು ಆದೇಶ ವಾಪಸ್ ಪಡೆಯದಿದ್ದರೆ ತೀವ್ರ ಹೋರಾಟ ನಡೆಸುತ್ತೇವೆ’ ಎಂದು ಎಚ್ಚರಿಸಿದರು. ಬಳಿಕ ಸಭಾಧ್ಯಕ್ಷರ ಕಚೇರಿಗೆ ಮನವಿಪತ್ರ ನೀಡಿದರು.

ಬೆಂಗಳೂರಿನಲ್ಲಿ ಚದರಡಿಗೆ ಮಾಮೂಲಿ ಫಿಕ್ಸ್ ಮಾಡಿದ್ದು ಯಾರು? ಹೆದರಬೇಡ ಅಶೋಕಣ್ಣ, ಗಟ್ಟಿಯಾಗಿ ಡಿ.ಕೆ. ಶಿವಕುಮಾರ ಅಂತ ಹೇಳಣ್ಣ
ಸಿ.ಟಿ.ರವಿ
ವಿಧಾನಪರಿಷತ್ ಸದಸ್ಯ

ಜನತೆ ಮತ್ತು ಪಕ್ಷದ ಹಿತದೃಷ್ಟಿಯಿಂದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದೇನೆ. ವ್ಯಕ್ತಿ ಮುಖ್ಯವಲ್ಲ. ವಿಷಯಾಧಾರಿತ ಹೋರಾಟವನ್ನು ಬೆಂಬಲಿಸುತ್ತೇನೆ
ಬಿ.ಪಿ.ಹರೀಶ್
ಹರಿಹರ ಶಾಸಕ

ಸುದ್ದಿ 2 ನಿಮಿಷ

ಇದೇ 27ರಂದು 42,345 ಮನೆ ಹಂಚಿಕೆ: ಸಚಿವ ಜಮೀರ್

ಬೆಂಗಳೂರು: ‘ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ‘ಸರ್ವರಿಗೂ ಸೂರು’ ಯೋಜನೆಯಡಿ ಬಡ ಕುಟುಂಬಗಳಿಗೆ ನಿರ್ಮಿಸಲಾಗುತ್ತಿರುವ 1.82 ಲಕ್ಷ ಮನೆಗಳ ಪೈಕಿ, ಎರಡನೇ ಹಂತದಲ್ಲಿ 42,345 ಮನೆಗಳನ್ನು ಏಪ್ರಿಲ್ 27ರಂದು ಹುಬ್ಬಳ್ಳಿಯಲ್ಲಿ ಹಂಚಿಕೆ ಮಾಡಲಾಗುವುದು’ ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ಮಂಡಳಿಯ ಸಭಾಂಗಣದಲ್ಲಿ ಈ ಕುರಿತು ಪೂರ್ವಭಾವಿ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಮೊದಲ ಹಂತದಲ್ಲಿ, ಕಳೆದ ವರ್ಷ ಫೆಬ್ರುವರಿಯಲ್ಲಿ 36,789 ಮನೆ ಹಂಚಿಕೆ ಮಾಡಲಾಗಿತ್ತು’ ಎಂದರು.

‘ಹುಬ್ಬಳ್ಳಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಸಚಿವರು, ಶಾಸಕರು ಭಾಗವಹಿಸಲಿದ್ದಾರೆ’ ಎಂದರು.

‘ಮುಖ್ಯಮಂತ್ರಿ ಹಂಚಿಕೆ ಮಾಡಲಿರುವ ಮನೆಗಳನ್ನು ಮೂಲಸೌಕರ್ಯ ಸಹಿತ ಒಂದು ವಾರದಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಜಮೀರ್ ಹೇಳಿದರು.

‘2013ರಿಂದ 2023ರವರೆಗೆ 1.82 ಲಕ್ಷ ಮನೆ ನಿರ್ಮಾಣ ಯೋಜನೆ ರೂಪಿಸಲಾಗಿತ್ತು. ಫಲಾನುಭವಿಗಳ ವಂತಿಗೆ ಪಾವತಿ ಕಷ್ಟವಾಗಿ ಮನೆಗಳು ಅರ್ಧಕ್ಕೆ ನಿಂತಿತ್ತು. ಮುಖ್ಯಮಂತ್ರಿ ಅವರಿಗೆ ಸಮಸ್ಯೆ ಮನವರಿಕೆ ಮಾಡಿಕೊಟ್ಟು ಫಲಾನುಭವಿಗಳ ವಂತಿಗೆ ತಲಾ ₹ 4 ಲಕ್ಷವನ್ನು ಸರ್ಕಾರವೇ ಭರಿಸಿ ಮನೆ ನಿರ್ಮಾಣ ಪೂರ್ಣಗೊಳಿಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

‘ಕುಡಿಯುವ ನೀರಿಗೆ ಆದ್ಯತೆ’

ಬೆಂಗಳೂರು: ‘ಬೇಸಿಗೆ ಸಮಯದಲ್ಲಿ ಜನರಿಗೆ ಕುಡಿಯುವ ನೀರು ಪೂರೈಸುವುದು ನಮ್ಮ ಮೊದಲ ಆದ್ಯತೆ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಪ್ರತಿನಿಧಿಗಳು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ ಅವರ ನೇತೃತ್ವದಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಭೇಟಿ, ನಾರಾಯಣಪುರ ಬಸವ ಸಾಗರ ಜಲಾಶಯದ ಬಲದಂಡೆ ಹಾಗೂ ಎಡದಂಡೆಯಿಂದ ಬೆಳೆಗಳಿಗೆ ಏಪ್ರಿಲ್ 15ರವರೆಗೆ ನೀರು ಹರಿಸಬೇಕು ಎಂದು ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಶಿವಕುಮಾರ್, ‘ಬೆಳೆಗೆ ನೀರು ಹರಿಸುವಂತೆ ಸಚಿವರು, ಶಾಸಕರು, ರೈತಸಂಘದ ಪ್ರತಿನಿಧಿಗಳು ಮನವಿ ಮಾಡಿದ್ದಾರೆ. ಎರಡನೇ ಬೆಳೆ ಹಾಕಬೇಡಿ ಎಂದರೂ ಈ ಭಾಗದ ರೈತರು ಬೆಳೆ ಹಾಕಿದ್ದಾರೆ. ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಯ ಜನ ಕಾಲುವೆಗೆ ನೀರು ಹರಿಸುವಂತೆ ಗಲಾಟೆ ಮಾಡುತ್ತಿದ್ದಾರೆ. ಹೀಗಾಗಿ ಕೃಷ್ಣಾ ನೀರಿನ ವಿಚಾರವಾಗಿ ಮಹಾರಾಷ್ಟ್ರ ಮುಖ್ಯಮಂತ್ರಿಗೆ ನಮ್ಮ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ’ ಎಂದರು.

ಮನವಿ ಪತ್ರದ ಸಾರಾಂಶ: ‘ನಾರಾಯಣಪುರ ಬಸವಸಾಗರ ಜಲಾಶಯದ ಬಲದಂಡೆ ಹಾಗೂ ಎಡದಂಡೆ ವ್ಯಾಪ್ತಿಯ 89 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಏಪ್ರಿಲ್ 15ರವರೆಗೆ ನೀರು ಹರಿಸಬೇಕು. ಜಲಾಶಯದಲ್ಲಿ ಕೃಷಿಗಾಗಿ 6.60 ಟಿಎಂಸಿ ಅಡಿ ನೀರು ಕಾಯ್ದಿರಿಸಲಾಗಿದೆ. ಅದನ್ನು ಹರಿಸಿದರೆ ಮಾತ್ರ ರೈತರಿಗೆ ಅವರು ಬೆಳೆದಿರುವ ಬೆಳೆ ಕೈ ಸೇರುತ್ತದೆ’ ಎಂದು ಮನವಿ ಪತ್ರದಲ್ಲಿದೆ.

‘ಬಿಜೆಪಿಯವರು ರೈತ ವಿರೋಧಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರಿಗೆ ನೆರವಾಗಲು ರಾಜ್ಯ ಸರ್ಕಾರ ಹಾಲಿನ ದರ ಏರಿಸಿದ್ದು, ಇದನ್ನು ವಿರೋಧಿಸುತ್ತಿರುವ ಬಿಜೆಪಿಯವರು ರೈತ ವಿರೋಧಿಗಳು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಡಿ.ಕೆ. ಶಿವಕುಮಾರ್

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜನರ ಮೇಲೆ ಅವರಿಗೆ ಕಾಳಜಿ ಇದ್ದರೆ, ಪೆಟ್ರೋಲ್, ಡೀಸೆಲ್, ಜಾನುವಾರುಗಳಿಗೆ ಹಾಕುವ ಬೂಸಾ ದರಗಳನ್ನು ಇಳಿಸಲಿ’ ಎಂದರು.

‘ಬೆಂಗಳೂರಿನಲ್ಲಿ ಕುಡಿಯುವ ನೀರಿನ ಶುಲ್ಕ ಪ್ರತಿ ಲೀಟರ್‌ಗೆ ಕನಿಷ್ಠ 1 ಪೈಸೆ ಏರಿಕೆ ಮಾಡಬೇಕಾಗಿದೆ. ಜಲ ಮಂಡಳಿ ವಾರ್ಷಿಕ ₹1 ಸಾವಿರ ಕೋಟಿ ನಷ್ಟ ಅನುಭವಿಸುತ್ತಿದೆ. ಮುಂದಿನ ಹಂತಗಳ ಯೋಜನೆ ಕೈಗೆತ್ತಿಗೊಳ್ಳಬೇಕಾದರೆ ದರ ಏರಿಕೆ ಅನಿವಾರ್ಯವಾಗಿದೆ’ ಎಂದರು.

‘ಕಸದ ವಿಚಾರದಲ್ಲಿ ಬಿಜೆಪಿ ಸರ್ಕಾರ 2022ರಲ್ಲೇ ದುಬಾರಿ ಸೆಸ್ ವಿಧಿಸಿತ್ತು. ನಾವು ಕಡಿಮೆ ಮಾಡುತ್ತಿದ್ದೇವೆ. ಈ ಬಗ್ಗೆ ಜಾಹೀರಾತು, ಪತ್ರಿಕಾ ಪ್ರಕಟಣೆ ಹೊರಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ದೂರಿದರು.

ಎಚ್.ಡಿ. ಕುಮಾರಸ್ವಾಮಿ ಅವರ ಟೀಕೆಗೆ ಪ್ರತಿಕ್ರಿಯಿಸಿ, ‘ಕುಮಾರಸ್ವಾಮಿ ಅವರ ಸಹೋದರ ಹಾಲು ಒಕ್ಕೂಟದ ಅಧ್ಯಕ್ಷರು. ಅವರು ಹಾಸನದಲ್ಲಿ ₹ 4 ಕಡಿಮೆ ಮಾಡಿ ಹಾಲು ನೀಡಲಿ’ ಎಂದರು.

ಹುಬ್ಬಳ್ಳಿ ವರದಿ: ‘ಬಿಜೆಪಿಯಿಂದ ಉಚ್ಚಾಟನೆಗೊಂಡ ಶಾಸಕ ಬಸನಗೌಡ ಪಾಟೀಲ ಕಾಂಗ್ರೆಸ್‌ಗೆ ಬರುವುದೆಲ್ಲ ಸುಳ್ಳು. ನಮಗ್ಯಾಕೆ ಅವರ ವಿಚಾರ. ಅವರುಂಟು, ಅವರ ಪಕ್ಷ ಉಂಟು’ ಎಂದು ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಂಪುಟ ಪುನರ್‌ರಚನೆ ಸಿ.ಎಂ ಮತ್ತು ವರಿಷ್ಠರಿಗೆ ಬಿಟ್ಟದ್ದು. ಸಂಪುಟ ಸರ್ಜರಿ ಆಗಲ್ಲ. ಮಾಧ್ಯಮದವರಿಗೆ ಯಾರೋ ಸುಳ್ಳು ಮಾಹಿತಿ ಕೊಟ್ಟಿದ್ದಾರೆ’ ಎಂದರು.

‘ಆರೆಸ್ಸೆಸ್ ಆಕ್ರೋಶಕ್ಕೆ ಬಿಜೆಪಿ ಉತ್ತರಿಸಲಿ’

‘ಬಿಜೆಪಿಯವರು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟಿಸುವ ಮೊದಲು, ಕೇಂದ್ರದ ನೀತಿಗಳನ್ನು ಟೀಕಿಸಿದ್ದ ಆರೆಸ್ಸೆಸ್ ಬಗ್ಗೆ ಮಾತನಾಡಲಿ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಆರೆಸ್ಸೆಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಹೇಳಿಕೆ ಲಗತ್ತಿಸಿ ‘ಎಕ್ಸ್’ ವೇದಿಕೆಯಲ್ಲಿ ಅವರು, ‘ಕೇಂದ್ರ ಸರ್ಕಾರದ ನೀತಿಗಳನ್ನು ಆರೆಸ್ಸೆಸ್ ಕಟುವಾಗಿ ಟೀಕಿಸಿತ್ತು. ಈ ಬಗ್ಗೆ ರಾಜ್ಯದ ಬಿಜೆಪಿ ನಾಯಕರಿಗೆ ಅರಿವಿದೆಯೇ’ ಎಂದೂ ಪ್ರಶ್ನಿಸಿದ್ದಾರೆ.

‘ಅರಿವು ಇಲ್ಲ ಎಂದಾದರೆ ಕೇಶವಕೃಪಾಕ್ಕೆ ತೆರಳಿ ಆರೆಸ್ಸೆಸ್‌ನ ಆಕ್ರೋಶದ ಬಗ್ಗೆ ತಿಳಿದುಕೊಂಡು ರಾಜ್ಯದ ಜನತೆಗೆ ಉತ್ತರಿಸುವ ದಮ್ಮು, ತಾಕತ್ತು ಪ್ರದರ್ಶಿಸಲಿ’ ಎಂದಿದ್ದಾರೆ.

ಬಿಜೆಪಿ ನಡೆಗೆ ಜೆಡಿಎಸ್ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಬಿಜೆಪಿ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ವಿಚಾರ ಮೈತ್ರಿ ಪಕ್ಷಗಳ ನಡುವೆ ವೈಮನಸ್ಸಿಗೆ ಕಾರಣವಾಗಿದೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಎನ್‌ಡಿಎ ಅಂಗಪಕ್ಷವಾಗಿರುವ ಜೆಡಿಎಸ್ ಅನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ರಾಜ್ಯ ಬಿಜೆಪಿ ನಾಯಕರು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಬೆಲೆ ಏರಿಕೆ, ಭ್ರಷ್ಟಾಚಾರದಲ್ಲಿ ಸಿಲುಕಿರುವ ರಾಜ್ಯ ಸರ್ಕಾರದ ವಿರುದ್ಧ ಎರಡೂ ಪಕ್ಷಗಳು ಒಗ್ಗಟ್ಟಾಗಿ ಹೋರಾಟ ನಡೆಸಬೇಕಿತ್ತು. ದೊಡ್ಡಮಟ್ಟದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸುವ ಮೊದಲು ಮೈತ್ರಿ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಧರಣಿ ಕುರಿತು ಜೆಡಿಎಸ್ ಶಾಸಕರಿಗೂ ಆಹ್ವಾನ ನೀಡಿಲ್ಲ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣದ ವಿರುದ್ಧ ನಡೆದ ಪಾದಯಾತ್ರೆ ಯಲ್ಲೂ ಇದೇ ಧೋರಣೆ ತೋರಿದ್ದರು. ನಂತರ ಕೇಂದ್ರ ನಾಯಕರು ಎಚ್.ಡಿ. ಕುಮಾರಸ್ವಾಮಿ ಅವರ ಮನ ವೊಲಿಸಿದ್ದರು ಎಂದರು.

‘ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ಬಿಸಾಡುವ ಬಿಜೆಪಿ ನಾಯಕರ ಮನೋಭಾವನ್ನು ಆ ಪಕ್ಷದ ವರಿಷ್ಠರ ಗಮನಕ್ಕೆ ತರಲಾಗುವುದು. ಮುಂದಿನ ದಿನಗಳಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡು ಒಟ್ಟಿಗೆ ಹೋಗುವಂತೆ, ರಾಜ್ಯ ಸರ್ಕಾರದ ವಿರುದ್ಧ ಜಂಟಿ ಹೋರಾಟ ನಡೆಸುವಂತೆ ತಾಕೀತು ಮಾಡಲಾಗುವುದು’ ಎಂದು ಹೇಳಿದರು.

‘ಗೊಂದಲವಿದ್ದರೆ ಬಗೆಹರಿಸಿಕೊಳ್ಳುತ್ತೇವೆ’

ಬೆಂಗಳೂರು: ‘ಬಿಜೆಪಿ– ಜೆಡಿಎಸ್ ಮಧ್ಯೆ ಸಣ್ಣ ಪುಟ್ಟ ಗೊಂದಲ ಇದ್ದರೆ ಮಾತನಾಡಿಕೊಂಡು ಬಗೆಹರಿಸಿಕೊಳ್ಳುತ್ತೇವೆ ಮತ್ತು ಸಮನ್ವಯ ಸಮಿತಿ ರಚನೆಯ ಅಗತ್ಯವಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಜೆಡಿಎಸ್ ನಾಯಕ ಸುರೇಶ್‌ಬಾಬು ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯ ಸರ್ಕಾರ ಬೆಲೆ ಏರಿಕೆ ಮಾಡಿದರೆ ತಕ್ಷಣವೇ ಅದಕ್ಕೆ ಸ್ಪಂದಿಸಬೇಕಾದುದು ವಿರೋಧಪಕ್ಷಗಳ ಕರ್ತವ್ಯ. ಇತ್ತೀಚೆಗೆ ಗ್ರೇಟರ್ ಬೆಂಗಳೂರು ವಿಚಾರದಲ್ಲಿ ಜೆಡಿಎಸ್ ಪ್ರತ್ಯೇಕ ಹೋರಾಟ ಮಾಡಿತ್ತು. ಬೆಲೆ ಏರಿಕೆ ವಿರುದ್ಧವೂ ಹೋರಾಟ ಮಾಡುವುದಾಗಿ ಅವರು ಹೇಳಿಕೆ ನೀಡಿದ್ದರು. ಈ ವಿಷಯದಲ್ಲಿ ಉಂಟಾಗಿರುವ ಸಣ್ಣಪುಟ್ಟ ಗೊಂದಲಗಳನ್ನು ನಿವಾರಿಸಿಕೊಳ್ಳುತ್ತೇವೆ’ ಎಂದು ವಿಜಯೇಂದ್ರ ಹೇಳಿದರು.ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ‘ನಮ್ಮ ಪಕ್ಷದ ಹೋರಾಟ ನಾವು ಮಾಡುತ್ತೇವೆ. ಅವರ ಪಕ್ಷದ ವತಿಯಿಂದ ಅವರು ಹೋರಾಟ ಮಾಡುತ್ತಾರೆ. ವಿಧಾನಸಭೆ ಚುನಾವಣೆ ವೇಳೆ ಹೊಂದಾಣಿಕೆ ಹೋರಾಟ ಮಾಡುತ್ತೇವೆ. ನಮ್ಮ ನಡುವೆ ಹೀಗೆಯೇ ಮಾತುಕತೆ ನಡೆದಿದೆ’ ಎಂದರು.

ಹೆದ್ದಾರಿಗೆ ₹24 ಸಾವಿರ ಕೋಟಿ ಅನುದಾನ: ಗಡ್ಕರಿಗೆ ಮನವಿ

ನವದೆಹಲಿ: ಕರ್ನಾಟಕದ ವಿವಿಧ ಹೆದ್ದಾರಿ ಯೋಜನೆಗಳಿಗೆ ಅನುಮೋದನೆ ಕೋರಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಮನವಿ ಸಲ್ಲಿಸಿದರು.

ಸಂಚಾರ ದಟ್ಟಣೆ ಹೆಚ್ಚಿರುವ ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿಗಾಗಿ ವಿವಿಧ ಯೋಜನೆಗಳನ್ನು ಮಂಜೂರು ಮಾಡಬೇಕೆಂದು ಕೋರಿದರು.

ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲು ಸಭೆ ನಡೆಸಲಾಗುತ್ತಿದೆ.ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದೆ ಎಂದು ಗಡ್ಕರಿ ಅವರ ಗಮನಕ್ಕೆ ತಂದರು.

ರಾಜ್ಯದ ಪ್ರಸ್ತಾವ

- ಮೈಸೂರಿನ ರಾಷ್ಟ್ರೀಯ ಹೆದ್ದಾರಿ -275ರಲ್ಲಿ 9 ಗ್ರೇಡ್ ಸಪರೇಟರ್‌ಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿ
- ರಾಷ್ಟ್ರೀಯ ಹೆದ್ದಾರಿ -75ರ ಶಿರಾಡಿ ಘಾಟಿಯಲ್ಲಿ ಸುರಂಗ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಬೇಕು
- ಪುಣೆ- ಬೆಂಗಳೂರು ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್‌ವೇ ನಿರ್ಮಿಸಬೇಕು.
- 2025–26ರ ಯೋಜನೆಯಲ್ಲಿ ರಾಜ್ಯದ ಹೆದ್ದಾರಿ ಕಾಮಗಾರಿಗಳ ಮೊತ್ತ ₹24 ಸಾವಿರ ಕೋಟಿಗೆ ಹೆಚ್ಚಿಸಬೇಕು
- ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನ ರಾಷ್ಟ್ರೀಯ ಹೆದ್ದಾರಿ- 44 ರಲ್ಲಿ ಮೇಲ್ಸೇತುವೆ ನಿರ್ಮಿಸಬೇಕು.
- ತಾತ್ವಿಕವಾಗಿ ಘೋಷಿಸಿರುವ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಯಾಗಿ ಮೇಲ್ದರ್ಜೆಗೇರಿಸಬೇಕು
- ಬೆಂಗಳೂರು ನಗರದಲ್ಲಿ ಮೈಸೂರು ರಸ್ತೆಯನ್ನು ಸಂಪರ್ಕಿಸುವ ಸುರಂಗದ ನಿರ್ಮಾಣ ಮತ್ತು ಹೊಸೂರು ರಸ್ತೆ ಮಾರ್ಗ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ ಮತ್ತು ಹಳೆ ಮದ್ರಾಸ್ ರಸ್ತೆಯಲ್ಲಿ ಸುರಂಗನಿರ್ಮಿಸಬೇಕು.
- ಕಲಬುರ್ಗಿ-ವಾಡಿ-ಯಾದಗಿರಿ-ಕಂದೆಚೂರ್-ಜಡ್ ಚೇರ್ಲಾ ವಿಭಾಗದಲ್ಲಿ ಚತುಷ್ಪಥ ರಸ್ತೆ ನಿರ್ಮಾಣ.
- ಯಾದಗಿರಿ ಜಿಲ್ಲೆಯಲ್ಲಿ ರಾ.ಹೆ 150ಎಯಲ್ಲಿ ಭೀಮರಾಯನಗುಡಿ ಮತ್ತು ಶಹಾಪುರ ಪಟ್ಟಣಕ್ಕೆ ಗ್ರೀನ್ ಫೀಲ್ಡ್ ಸಂಯೋಜಿತ ಬೈಪಾಸ್ ಯೋಜನೆ ಕೈಗೆತ್ತಿಕೊಳ್ಳಬೇಕು

ಮೂವರ ಹತ್ಯೆಗೈದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು (ಚಿಕ್ಕಮಗಳೂರು): ಖಾಂಡ್ಯ ಹೋಬಳಿ ಮಾಗಲು ಗ್ರಾಮದಲ್ಲಿ ವ್ಯಕ್ತಿಯೊಬ್ಬ ಮಗಳು ಸೇರಿ ನಾಲ್ವರ ಮೇಲೆ ಗುಂಡು ಹಾರಿಸಿದ್ದು, ಮೂವರು ಮೃತಪಟ್ಟಿದ್ದಾರೆ. ಕೊನೆಗೆ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸಂಗಮೇಶ್ವರಪೇಟೆಯ ಪೂರ್ಣಪ್ರಜ್ಞ ಶಾಲೆಯಲ್ಲಿ ವಾಹನ ಚಾಲಕನಾಗಿದ್ದ ರತ್ನಾಕರ ಮಂಗಳವಾರ ರಾತ್ರಿ ಅತ್ತೆ ಜ್ಯೋತಿ (50), ಮಗಳು ಮೌಲ್ಯ (6) ಮತ್ತು ನಾದಿನಿ ಸಿಂಧೂರ (24) ಮೇಲೆ ಗುಂಡು ಹಾರಿಸಿದ್ದಾನೆ. ನಾದಿನಿಯ ಗಂಡ ಅವಿನಾಶ್ ಕಾಲಿಗೂ ಗುಂಡು ತಗುಲಿದ್ದು, ಬಾಳೆಹೊನ್ನೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇದಕ್ಕೂ ಮೊದಲು, ರತ್ನಾಕರ ವಿಡಿಯೊ ಒಂದನ್ನು ಹರಿಬಿಟ್ಟಿದ್ದು, ‘ಕುಟುಂಬದವರು ನನಗೆ ಮೋಸ ಮಾಡಿದ್ದಾರೆ. ಪತ್ನಿ ಎರಡು ವರ್ಷದಿಂದ ನನ್ನಿಂದ ದೂರವಾಗಿದ್ದಾಳೆ’ ಎಂದು ಹೇಳಿದ್ದರು.

‘ಜ್ಯೋತಿ ಅವರ ಮಗಳು ಸ್ವಾತಿ ಅವರನ್ನು ರತ್ನಾಕರ ಮದುವೆಯಾಗಿದ್ದ. ರತ್ನಾಕರನಿಂದ ದೂರವಾಗಿದ್ದ ಸ್ವಾತಿ ಉಡುಪಿಯಲ್ಲಿ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಮಗಳು ಮೌಲ್ಯ ಜತೆಗೆ ರತ್ನಾಕರ ಸಂಗಮೇಶ್ವರ ಪೇಟೆಯಲ್ಲಿ ವಾಸವಾಗಿದ್ದ. ಮಂಗಳವಾರ ರಾತ್ರಿ ಮಗು ಸಮೇತ ಮಾಗಲು ಗ್ರಾಮಕ್ಕೆ ಬಂದಿದ್ದ. ಮೊದಲಿಗೆ ಅತ್ತೆ ಜ್ಯೋತಿ ತಲೆಗೆ ಗುಂಡು ಹಾರಿಸಿದ್ದು, ತಕ್ಷಣ ಮಗಳ ಬೆನ್ನಿಗೆ, ನಂತರ ನಾದಿನಿ ಸಿಂಧೂರ ಬೆನ್ನಿಗೆ ಗುಂಡು ಹಾರಿಸಿದ. ಅದೇ ಸಂದರ್ಭದಲ್ಲಿ ನನ್ನ ಮೇಲೂ ಗುಂಡು ಹಾರಿಸಿದ. ಆದರೆ, ಬಲಗಾಲಿಗೆ ತಗುಲಿದ್ದರಿಂದ ಪ್ರಾಣ ಉಳಿದಿದೆ’ ಎಂದು ಅವಿನಾಶ್ ಪೊಲೀಸರಿಗೆ ದೂರು ನೀಡಿದ್ದಾರೆ.

ಬಾಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಕೌಟುಂಬಿಕ ಕಲಹವೇ ಘಟನೆಗೆ ಕಾರಣ ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದರು.

ಪ್ರತಿಭಟನೆ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ತಕ್ಷಣ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿ ಮುಂಭಾಗದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು. ಕಾರ್ಯಕರ್ತೆಯರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು
– ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ರಾಮದುರ್ಗ: ವಿರಳ ಚಿಟ್ಟುಕೋಳಿ ಪತ್ತೆ

ರಾಮದುರ್ಗ (ಬೆಳಗಾವಿ ಜಿಲ್ಲೆ): ರಾಮದುರ್ಗದ ಸುತ್ತಲೂ ಇರುವ ಬೆಟ್ಟಗಳ ಸಾಲಿನಲ್ಲಿ ಅತ್ಯಂತ ವಿರಳ ಬಣ್ಣದ ಚಿಟ್ಟುಕೋಳಿ ಪತ್ತೆಯಾಗಿದೆ. ಹವ್ಯಾಸಿ ಜೇಡಗಳ ಅಧ್ಯಯನಕಾರ ಶಶಿಕಾಂತ ಕಂಬನ್ನವರ ಅವರಿಗೆ ಕಾಣಸಿಕ್ಕಿದೆ.

ಕೆಪಿಟಿಸಿಎಲ್ ಅಧಿಕಾರಿ ಶಶಿಕಾಂತ ಅವರು ಜೇಡಗಳ ಅಧ್ಯಯನ ಮಾಡುವಾಗ, ಕಂಡ ಈ ಕೋಳಿಗೆ ಇಂಗ್ಲಿಷ್‌ನಲ್ಲಿ ‘ಪೆಂಟೆಡ್ ಸ್ಪರ್‌ಫೌಲ್’ ಎಂದು ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು ‘ಗ್ಯಾಲೋಪರ್ಡಿಕ್ಸ್ ಲುನುಲಾಟಾ’. ಬೆಟ್ಟಗಳ ಪೊದೆ ಪ್ರದೇಶದಲ್ಲಿ ಇರುವ ಈ ಹಕ್ಕಿಯು ತುಂಬಾ ಸೂಕ್ಷ್ಮ ಮತ್ತು ನಾಚಿಕೆಯುಳ್ಳದ್ದು. ಗೋಚರಿಸುವುದು ವಿರಳ.

‘ಈ ಹಕ್ಕಿಯು ಫೆಸಂಟ್ ಕುಟುಂಬಕ್ಕೆ ಸೇರಿದೆ. ಗಂಡು ಹಕ್ಕಿಗಳು ಹೆಚ್ಚು ಪ್ರಕಾಶಮಾನವಾದ ಬಣ್ಣ ಹೊಂದಿದ್ದರೆ, ಹೆಣ್ಣು ಹಕ್ಕಿಗಳು ಗಂಡಿಗಿಂತ ಮಂದ ವರ್ಣ ಹೊಂದಿರುತ್ತವೆ. ತುಂಬಾ ವೇಗವಾಗಿ ಓಡುತ್ತವೆ’ ಎಂದು ಶಶಿಕಾಂತ ಕಂಬನ್ನವರ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

7ರಂದು ವೈರಮುಡಿ ಬ್ರಹ್ಮೋತ್ಸವ

ಮೇಲುಕೋಟೆ (ಮಂಡ್ಯ ಜಿಲ್ಲೆ): ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಕ್ಷೇತ್ರದಲ್ಲಿ ಏ.7ರಂದು ವೈರಮುಡಿ ಬ್ರಹ್ಮೋತ್ಸವ ನಡೆಯಲಿದೆ. ಲಕ್ಷಾಂತರ ಭಕ್ತರು ಸೇರುವ ನಿರೀಕ್ಷೆಯಿದ್ದು, ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಂಡಿದೆ.

ಇಲ್ಲಿನ ಚೆಲುವನಾರಾಯಣ ಸ್ವಾಮಿ ದೇವಾಲಯದ ಸಂಪ್ರದಾಯದಂತೆ, ಬುಧವಾರ ರಾತ್ರಿ ಅಂಕುರಾರ್ಪಣೆಯೊಂದಿಗೆ ಬ್ರಹ್ಮೋತ್ಸವಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ಬ್ರಹ್ಮೋತ್ಸವದ ದಿನ ಮಂಡ್ಯ ಜಿಲ್ಲಾ ಖಜಾನೆಯಿಂದ ವಜ್ರಖಚಿತ ವೈರಮುಡಿ ಕಿರೀಟ ಹಾಗೂ ಗಂಡಭೇರುಂಡ ಪದಕ ಸೇರಿದ ಕೋಟ್ಯಂತರ ರೂಪಾಯಿ ಮೌಲ್ಯದ ಆಭರಣಗಳನ್ನು ತಂದು ಶ್ರೀದೇವಿ, ಭೂದೇವಿಯರೊಂದಿಗೆ ಗರುಢಾರೂಢನಾದ ಚಲುವನಾರಾಯಣಸ್ವಾಮಿಗೆ ಅಲಂಕಾರ ಮಾಡಲಾಗುತ್ತದೆ.

‘ವೈರಮುಡಿ ಬ್ರಹ್ಮೋತ್ಸವ ಲೋಕ ಕಲ್ಯಾಣಾರ್ಥವಾಗಿ ಸಡಗರದಿಂದ ಜರುಗಲಿದೆ. ಈ ಬಾರಿಯೂ ಮುಖ್ಯಮಂತ್ರಿ ₹10 ಕೋಟಿ ವಿಶೇಷ ಅನುದಾನ ನೀಡಿದ್ದಾರೆ’ ಎಂದು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ.

ಬೆಳಗಾವಿ: ಬಸ್‌ನಲ್ಲಿ ಚಾಲಕ ಆತ್ಮಹತ್ಯೆ

ಬೆಳಗಾವಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ 2ನೇ ಘಟಕದಲ್ಲಿದ್ದ ಬಸ್‌ನಲ್ಲೇ ಚಾಲಕ, ಹಳೇ ಗಾಂಧಿನಗರದ ನಿವಾಸಿ ಬಾಲಚಂದ್ರ ಶಿವಪ್ಪ ತುಕ್ಕೋಜಿ (48) ಬುಧವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಹಾಪುರ-ವಡಗಾವ್ ಬಸ್ಸಿನ ಚಾಲಕರಾಗಿದ್ದರು.

‘ರಜೆ ಸಿಗದ ಕಾರಣ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪತ್ನಿ ಶಿಲ್ಪಾ ಆರೋಪಿಸಿದ್ದರು. ಆದರೆ, ಬಾಲಚಂದ್ರ ಅವರ ತಾಯಿ ಯಲ್ಲವ್ವ ಅವರು ಮಾರ್ಕೆಟ್ ಠಾಣೆಗೆ ದೂರು ನೀಡಿದ್ದು, ‘ಪುತ್ರನ ಸಾವಿಗೆ ಪತ್ನಿ ಶಿಲ್ಪಾ ಮತ್ತು ಅವರ ತಾಯಿ ಶಕುಂತಲಾ 10 ವರ್ಷಗಳಿಂದ ನೀಡುತ್ತಿದ್ದ ಕಿರುಕುಳವೇ ಕಾರಣ’ ಎಂದು ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಸಾರಿಗೆ ಸಂಸ್ಥೆಯ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ ಹುದ್ದಾರ, ‘ಬಾಲಚಂದ್ರ ಮಾರ್ಚ್ 29 ಮತ್ತು 30ರಂದು ಕರ್ತವ್ಯಕ್ಕೆ ಹಾಜರಾಗಿಲ್ಲ. ಆದರೂ ರಜೆ ಎಂದು ಪರಿಗಣಿಸಲಾಗಿದೆ. ಮಾರ್ಚ್ 31 ಹಾಗೂ ಏಪ್ರಿಲ್ 1ರಂದು ಕರ್ತವ್ಯಕ್ಕೆ ಹಾಜರಾಗಿದ್ದರು. ಹೀಗಾಗಿ, ಆತ್ಮಹತ್ಯೆಗೆ ರಜೆ ಕೊಡದಿರುವುದು ಕಾರಣ ಎಂಬುದು ಸುಳ್ಳು’ ಎಂದಿದ್ದಾರೆ.

ಕರ್ತವ್ಯ ಲೋಪ ಎಸಗಿದ ಪೊಲೀಸರ ವಿರುದ್ಧ ಕ್ರಮ: ಎಚ್ಚರಿಕೆ

ರೌಡಿ ಚಟುವಟಿಕೆ ಮಟ್ಟ ಹಾಕಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಗೂಂಡಾಗಿರಿ ನಡೆಸುತ್ತಿರುವ ರೌಡಿಗಳ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಮಟ್ಟ ಹಾಕಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ಸೂಚನೆ ನೀಡಿದರು.

ಇಲ್ಲಿನ ಕೋರಮಂಗಲದ ಪೊಲೀಸ್ ಕವಾಯತು ಮೈದಾನದಲ್ಲಿ ಬುಧವಾರ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಪದಕಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

‘ರೌಡಿ ಚಟುವಟಿಕೆಗೆ ಕಡಿವಾಣ ಹಾಕಲು ಪೊಲೀಸರಿಗೆ ಬೇಕಾದ ಎಲ್ಲ ರೀತಿಯ ನೆರವನ್ನೂ ರಾಜ್ಯ ಸರ್ಕಾರ ನೀಡಲಿದೆ. ಪೊಲೀಸರ ಬೇಡಿಕೆ ಈಡೇರಿಸಲೂ ಸರ್ಕಾರ ಸಿದ್ಧ ಇದೆ. ಸರ್ಕಾರವು ಸದಾ ಪೊಲೀಸರೊಂದಿಗೆ ಇರುತ್ತದೆ. ಆದರೆ, ಕರ್ತವ್ಯ ಲೋಪವನ್ನು ಮಾತ್ರ ಸಹಿಸುವುದಿಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಪೊಲೀಸ್ ಬೀಟ್ ವ್ಯವಸ್ಥೆಯನ್ನೂ ರಾಜ್ಯದಲ್ಲಿ ಇನ್ನಷ್ಟು ಪರಿಣಾಮಕಾರಿ ಆಗಿ ನಿರ್ವಹಿಸಬೇಕು’ ಎಂದು ಸೂಚನೆ ನೀಡಿದರು.

‘ಜರ್ಮನಿ ದೇಶದ ಪ್ರಧಾನಿ ಹಾಗೂ ಪ್ರತಿನಿಧಿಗಳು, ರಾಜ್ಯದ ಪೊಲೀಸರ ಕೌಶಲ ಮತ್ತು ವೃತ್ತಿಪರತೆಯನ್ನು ಶ್ಲಾಘಿಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಅಪರಾಧಗಳ ಸಂಖ್ಯೆ ಇಳಿಮುಖ ಆಗುತ್ತಿದೆ. ಇನ್ನಷ್ಟು ಕಡಿಮೆ ಮಾಡಲು ಪ್ರಯತ್ನಿಸಬೇಕು’ ಎಂದು ಹೇಳಿದರು.

‘ತಂತ್ರಜ್ಞಾನದ ಬೆಳವಣಿಗೆಯಿಂದ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಅದೇ ತಂತ್ರಜ್ಞಾನದ ಸಾಧ್ಯತೆಗಳನ್ನು ಬಳಸಿಕೊಂಡು ಸೈಬರ್ ಅಪರಾಧಗಳನ್ನು ಕಡಿಮೆ ಮಾಡಬೇಕು. ಅಲ್ಲದೇ ವಂಚಕರನ್ನೂ ಬಂಧಿಸಬೇಕು’ ಎಂದು ಸೂಚನೆ ನೀಡಿದರು.

‘ಡ್ರಗ್ಸ್ ಮುಕ್ತ ರಾಜ್ಯ ಮಾಡುವುದು ಸರ್ಕಾರದ ಗುರಿ. ಮಾದಕ ವಸ್ತು ಜಾಲವನ್ನು ಪೊಲೀಸರು ಬೇರು ಸಹಿತ ಕಿತ್ತು ಹಾಕಲು ಪಣ ತೊಡಬೇಕು’ ಎಂದು ಕರೆ ನೀಡಿದರು.

‘ಕಾನೂನು ಸುವ್ಯವಸ್ಥೆ, ಹೂಡಿಕೆ, ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಒಂದಕ್ಕೊಂದು ನೇರ ಸಂಬಂಧ ಇದೆ. ನಿರುದ್ಯೋಗ ಬಹಳ ದೊಡ್ಡ ಸಮಸ್ಯೆ ಆಗುತ್ತಿದೆ. ಇದನ್ನು ನಿರ್ವಹಿಸಬೇಕಾದರೆ ಕಾನೂನು ಸುವ್ಯವಸ್ಥೆ , ಶಾಂತಿ ಪಾಲನೆ ಉತ್ತಮವಾಗಿರಬೇಕು’ ಎಂದು ಹೇಳಿದರು.

ಗೃಹ ಸಚಿವ ಜಿ. ಪರಮೇಶ್ವರ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾಶಂಕರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಹಾಜರಿದ್ದರು.

ಬುಧವಾರ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರೂ ಆಗಿರುವ ರಾಜ್ಯ ಗುಪ್ತಚರ ವಿಭಾಗದ ನಿರ್ದೇಶಕ ಹೇಮಂತ್ ಎಂ. ನಿಂಬಾಳ್ಕರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿನ್ನದ ಪದಕವನ್ನು ತೊಡಿಸಿದರು. ಅಲೋಕ್ ಮೋಹನ್ ಹಾಜರಿದ್ದರು.

ಪೊಲೀಸ್ ಇಲಾಖೆ ಮತ್ತು ಸಿಬ್ಬಂದಿಯ ಅನುಕೂಲಕ್ಕೆ ಬಜೆಟ್‌ನಲ್ಲಿ ಘೋಷಿಸಿರುವ ಎಲ್ಲ ಯೋಜನೆಗಳು ಜಾರಿಯಾಗಲಿವೆ
ಸಿದ್ದರಾಮಯ್ಯ
ಮುಖ್ಯಮಂತ್ರಿ

ರಾಜ್ಯದಲ್ಲಿ ಡ್ರಗ್ಸ್ ಮಾರಾಟ ದಂಧೆಗೆ ಕಡಿವಾಣ ಹಾಕಬೇಕು. ಮಹಿಳೆಯರ ಸುರಕ್ಷತೆಗೆ ಪೊಲೀಸರು ಹೆಚ್ಚಿನ ಒತ್ತು ನೀಡಬೇಕು
ಜಿ.ಪರಮೇಶ್ವರ
ಗೃಹ ಸಚಿವ

ಮೂರು ವರ್ಷದ ಪದಕ ಪ್ರದಾನ

ಮೂರು ವರ್ಷಗಳಿಂದ ಬಾಕಿ ಉಳಿದಿದ್ದ ಮುಖ್ಯಮಂತ್ರಿ ಪದಕವನ್ನು ಬುಧವಾರ ನಡೆದ ಕಾರ್ಯಕ್ರಮದಲ್ಲಿ ಒಟ್ಟಿಗೆ ವಿತರಣೆ ಮಾಡಲಾಯಿತು.

2022, 2023 ಹಾಗೂ 2024ನೇ ಸಾಲಿನ ಮುಖ್ಯಮಂತ್ರಿ ಪದಕ ಪುರಸ್ಕೃತರು ಹಾಗೂ ರಾಜ್ಯ, ನೆರೆ ರಾಜ್ಯದ ನಕ್ಸಲರು ಶರಣಾಗತಿಯಾಗಿ ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಶ್ರಮಿಸಿದ ರಾಜ್ಯ ಗುಪ್ತಚರ ವಿಭಾಗ, ನಕ್ಸಲ್ ನಿಗ್ರಹ ಪಡೆಯ ಅಧಿಕಾರಿ ಮತ್ತು ಸಿಬ್ಬಂದಿಗೂ ಇದೇ ವೇಳೆ ಸಿದ್ದರಾಮಯ್ಯ ಅವರು ಪದಕವನ್ನು ಪ್ರದಾನ ಮಾಡಿದರು. ಒಟ್ಟು 464 ಸಿಬ್ಬಂದಿಗೆ ಪದಕ ವಿತರಣೆ ಮಾಡಲಾಯಿತು. ಪದಕಗಳನ್ನು ಪಡೆದವರು ಬೇರೆಯವರಿಗೆ ಪ್ರೇರಣೆ ಆಗಬೇಕು. ಸಿ.ಎಂ ಪದಕ ಪಡೆಯಲು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಗುರುವಾರ, ಏಪ್ರಿಲ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 92 | ಪುಟ 14

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೆದ್ದಾರಿ ಅಭಿವೃದ್ಧಿ ಎಷ್ಟು?

5,461 ಕಿ.ಮೀ. 2024–25ರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಹೆದ್ದಾರಿಯ ಒಟ್ಟು ಉದ್ದ

₹2.50 ಲಕ್ಷ ಕೋಟಿ ಹೆದ್ದಾರಿ ಮೂಲ ಸೌಕರ್ಯ ಅಭಿವೃದ್ಧಿಗೆ ವೆಚ್ಚವಾದ ಮೊತ್ತ

₹28,724 ಕೋಟಿ ಆಸ್ತಿ ನಗದೀಕರಣದ ಮೂಲಕ ಸಂಗ್ರಹಿಸಿರುವ ಮೊತ್ತ

(ಆಧಾರ: ಎನ್‌ಎಚ್‌ಎಐ ಮಾಹಿತಿ)

ಆಳ–ಅಗಲ ಖಾಸಗಿ ತೆಕ್ಕೆಗೆ ಮತ್ತಷ್ಟು ವಿಮಾನ ನಿಲ್ದಾಣಗಳು

ಶಿವರಾಜ್ ಪಾಟೀಲ, ಕುಂ.ವೀ.ಗೆ ನಾಡೋಜ ಗೌರವ 5

ತೆಲಂಗಾಣ ಸಿ.ಎಂ ಮಾತಿಗೆ 'ಸುಪ್ರೀಂ' ಕಿಡಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,617 ▲	23,332 ▲	₹95,890 (ಬೆಂಗಳೂರು) ▲	₹1.05 ಲಕ್ಷ (ಬೆಂಗಳೂರು) ▼	85.52 ▼

ಇನ್‌ಸ್ಪೆಕ್ಟರ್‌ಗೆ ಸಿ.ಎಂ ಚಿನ್ನದ ಪದಕದ 'ಗರಿ': 'ಲೋಕಾ'ಕ್ಕೆ ಹೆದರಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಪಾತ್ರರಾಗಿದ್ದ ಇನ್‌ಸ್ಪೆಕ್ಟರ್ ಎ.ವಿ. ಕುಮಾರ್ ಅವರು ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಲೋಕಾಯುಕ್ತ ಪೊಲೀಸರು ನಡೆಸಿದ ಕಾರ್ಯಾಚರಣೆಯಿಂದ ತಪ್ಪಿಸಿಕೊಂಡಿದ್ದಾರೆ.

ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎ.ವಿ. ಕುಮಾರ್, ಈ ಸಾಲಿನ ಮುಖ್ಯಮಂತ್ರಿಯ ಚಿನ್ನದ ಪದಕಕ್ಕೆ ಆಯ್ಕೆಯಾಗಿದ್ದರು. ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅವರು ಪದಕ ಸ್ವೀಕರಿಸಬೇಕಿತ್ತು. ಆದರೆ, ಕುಮಾರ್ ವಿರುದ್ಧ ದಾಖಲಾಗಿದ್ದ ದೂರಿನ ಸಂಬಂಧ ಲೋಕಾಯುಕ್ತ ಪೊಲೀಸರು ಮಂಗಳವಾರ ರಾತ್ರಿ, ಅವರ ಮನೆ ಮೇಲೆ ದಾಳಿಗೆ ಮುಂದಾಗಿದ್ದರು.

'ಸಿವಿಲ್ ಗುತ್ತಿಗೆದಾರ ಚನ್ನೇಗೌಡ ಮತ್ತು ಅವರ ಪತ್ನಿ ಅನುಷಾ ವಿರುದ್ಧ ಸೋಮಶೇಖರ್ ಆರಾಧ್ಯ ಎಂಬುವವರು ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ 2024ರ ಜನವರಿಯಲ್ಲಿ ದೂರು ದಾಖಲಿಸಿದ್ದರು. ಈ ಇಬ್ಬರೂ ತಮ್ಮ ವಸತಿ ಕಟ್ಟಡವನ್ನು ಭೋಗ್ಯಕ್ಕೆ ನೀಡುತ್ತೇವೆಂದು ₹60 ಲಕ್ಷ ಪಡೆದುಕೊಂಡಿದ್ದರು. ಆದರೆ ಮನೆಯನ್ನೂ ನೀಡದೆ, ಹಣವನ್ನೂ ಪೂರ್ತಿ ಹಿಂದಿರುಗಿಸದೆ ವಂಚಿಸಿದ್ದಾರೆ. ಕೊಲೆ ಬೆದರಿಕೆ ಹಾಕಿದ್ದಾರೆ ಎಂಬುದು ಅವರ ಆರೋಪವಾಗಿತ್ತು' ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

'ಅನುಷಾ ಅವರು ಸರ್ಕಾರಿ ನೌಕರಿಯಲ್ಲಿದ್ದು, ಪ್ರಕರಣ ಮುಂದುವರಿದರೆ ನೌಕರಿಗೆ ತೊಂದರೆಯಾಗುತ್ತದೆ ಎಂದು ಕುಮಾರ್ ಅವರು ಚನ್ನೇಗೌಡಗೆ ತಿಳಿಸಿದ್ದರು. ಜತೆಗೆ ದೂರುದಾರರ ಜತೆ ರಾಜಿ ಮಾಡಿಕೊಂಡರೆ ಪ್ರಕರಣ ಮುಗಿಸಬಹುದು. ಇದಕ್ಕಾಗಿ ಮನೆಯನ್ನು ತಾವು ಹೇಳಿದವರಿಗೆ ಬರೆದುಕೊಡಿ ಎಂದು ಕುಮಾರ್ ಬೇಡಿಕೆ ಇಟ್ಟಿದ್ದರು' ಎಂದಿವೆ.

'ಈ ಸಂಬಂಧ ಕುಮಾರ್ ಹಲವು ಬಾರಿ ಕರೆ ಮಾಡಿ ಒತ್ತಡ ಹೇರಿದರು. ₹4 ಕೋಟಿ ಮೌಲ್ಯದ ಕಟ್ಟಡವನ್ನು ಕೇವಲ ₹60 ಲಕ್ಷಕ್ಕೆ ಕೇಳಿದರು. ಮನೆ ನೋಡಿಕೊಂಡು ಬರಲು ತಮ್ಮ ಅಧೀನ ಸಿಬ್ಬಂದಿ ಮತ್ತು ಸಂಬಂಧಿಗಳನ್ನೂ ಕಳುಹಿಸಿದ್ದರು ಎಂದು ಚನ್ನೇಗೌಡ ಮತ್ತು ಅನುಷಾ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು' ಎಂದು ಮಾಹಿತಿ ನೀಡಿವೆ.

'ಕಟ್ಟಡದ ಮಾಲೀಕತ್ವವನ್ನು ತಮ್ಮವರಿಗೆ ವರ್ಗಾಯಿಸಿಕೊಳ್ಳುವುದರ ಸಂಬಂಧ

ಎ.ವಿ.ಕುಮಾರ್

ಕುಮಾರ್, ಮಂಗಳವಾರ ರಾತ್ರಿ ಸಭೆ ನಿಗದಿ ಮಾಡಿದ್ದರು. ಅದರಂತೆ ಚನ್ನೇಗೌಡ ನಾಗರಬಾವಿಯ ಹೋಟೆಲ್ ಒಂದಕ್ಕೆ ಬಂದಿದ್ದರು. ಕುಮಾರ್ ಅವರ ಮೂವರು ಸಂಬಂಧಿ ಮತ್ತು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಉಮೇಶ್, ಕಾನ್‌ಸ್ಟೆಬಲ್ ಅನಂತ್ ಸಹ ಹೋಟೆಲ್‌ಗೆ ಬಂದಿದ್ದರು. ಇದೇ ವೇಳೆ ದಾಳಿ ನಡೆಸಿ, ಐವರನ್ನು ವಶಕ್ಕೆ ಪಡೆಯಲಾಯಿತು. ಏಕಕಾಲದಲ್ಲಿ ಹೋಟೆಲ್ ಮತ್ತು ಕುಮಾರ್ ಅವರ ಮನೆಯಲ್ಲಿ ಶೋಧ ನಡೆಸಲಾಯಿತು. ಆದರೆ ಹೋಟೆಲ್‌ಗೆ ಹೊರಟಿದ್ದ ಕುಮಾರ್, ಇಲಾಖೆಯ ಅಧಿಕೃತ ಜೀಪನ್ನು ಮನೆಯ ಸಮೀಪದ ರಸ್ತೆಯಲ್ಲೇ ಬಿಟ್ಟು ಓಡಿಹೋದರು. ಅವರ ಬಂಧನಕ್ಕೆ ಕಾರ್ಯಾಚರಣೆ ರೂಪಿಸಿದ್ದು, ತಂಡ ರಚಿಸಲಾಗಿದೆ' ಎಂದು ತಿಳಿಸಿವೆ.

ದರ್ಶನ್ ಪ್ರಕರಣದಲ್ಲಿ ತನಿಖಾಧಿಕಾರಿ

ದರ್ಶನ್ ಮತ್ತು ಸಂಗಡಿಗರಿಂದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಎ.ವಿ.ಕುಮಾರ್ ಸಹಾಯಕ ತನಿಖಾಧಿಕಾರಿಯಾಗಿದ್ದರು. ದಕ್ಷತೆ ಮತ್ತು ಪ್ರಾಮಾಣಿಕತೆಯ ಕಾರಣಕ್ಕೆ ಅವರನ್ನು ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಆಯ್ಕೆ ಮಾಡಲಾಗಿತ್ತು.

ತನಿಖೆ ನಡೆಸುತ್ತೇವೆ: ಗೃಹ ಸಚಿವ

ಇನ್‌ಸ್ಪೆಕ್ಟರ್ ಕುಮಾರ್ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು ಎಂಬುದರ ಮಾಹಿತಿ ಸಿಕ್ಕಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಪೊಲೀಸರಿಗೆ ಪದಕ ಪ್ರದಾನ ಕಾರ್ಯಕ್ರಮದ ನಂತರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಪ್ರಕರಣದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ದೂರು ಮತ್ತು ಆರೋಪದ ಬಗ್ಗೆ ತನಿಖೆ ನಡೆಸಲಾಗುವುದು' ಎಂದಿದ್ದಾರೆ.

ರಿಯಲ್ ಎಸ್ಟೇಟ್ ವ್ಯವಹಾರ: ಪೊಲೀಸ್ ಠಾಣೆಗೆ ಬರುವ ರಿಯಲ್ ಎಸ್ಟೇಟ್ ವ್ಯಾಜ್ಯ–ಗಲಾಟೆಯನ್ನು ಪರಿಹರಿಸಿ, ಪ್ರತಿಯಾಗಿ ಹಣ ಅಥವಾ ನಿವೇಶನ ಪಡೆಯುವ ವ್ಯವಹಾರವನ್ನು ಕುಮಾರ್ ನಡೆಸುತ್ತಿದ್ದರು ಎಂಬುದು ಗೊತ್ತಾಗಿದೆ. ಕುಮಾರ್, ಕುಟುಂಬದವರು ಮತ್ತು ಸಂಬಂಧಿಗಳ ಹೆಸರಿನಲ್ಲಿ 18 ನಿವೇಶನಗಳು ಇದೆ. ನೆಲಮಂಗಲದ ಬಳಿ ಬಂಗಲೆ, ತೋಟದ ಮನೆ ಮತ್ತು 30 ಎಕರೆಯಷ್ಟು ಕೃಷಿಭೂಮಿ ಇರುವುದು ಪತ್ತೆಯಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ತಿದ್ದುಪಡಿ ಮಸೂದೆಯ ಪ್ರತಿ ಹರಿದು ಅಸಾದುದ್ದೀನ್ ಒವೈಸಿ ಸಾಂಕೇತಿಕ ಪ್ರತಿಭಟನೆ

ಲೋಕಸಭೆ: ವಕ್ಫ್ ಕೋಲಾಹಲ

ಪ್ರಜಾವಾಣಿ ವಾರ್ತೆ

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನವನ್ನು ದುರ್ಬಲಗೊಳಿಸುವ ಉದ್ದೇಶದಿಂದಲೇ ವಕ್ಫ್ ಕಾನೂನಿಗೆ ತಿದ್ದುಪಡಿ ತಂದಿದೆ ಎಂದು ವಿರೋಧ ಪಕ್ಷಗಳು ಲೋಕಸಭೆಯಲ್ಲಿ ಬುಧವಾರ ಒಕ್ಕೊರಲಿನಿಂದ ಆಕ್ರೋಶ ವ್ಯಕ್ತಪಡಿಸಿದವು.

ಕಾನೂನಿಗೆ ತಿದ್ದುಪಡಿ ತಂದಿರುವುದರ ಹಿಂದೆ ದೇಶದ ಅಲ್ಪಸಂಖ್ಯಾತ ಸಮುದಾಯದವರ ಹಕ್ಕು ಕಸಿದುಕೊಳ್ಳುವ ಉದ್ದೇಶ ಇದೆ ಎಂದು ಅವು ದೂರಿದವು. ಮಸೂದೆಯ ಬಗ್ಗೆ ಲೋಕಸಭೆಯಲ್ಲಿ 12 ತಾಸಿಗೂ ಹೆಚ್ಚು ಹೊತ್ತು ಚರ್ಚೆ ನಡೆಯಿತು. ಗೃಹ ಸಚಿವ ಅಮಿತ್ ಶಾ ಸೇರಿ 61 ಮಂದಿ ಚರ್ಚೆಯಲ್ಲಿ ಭಾಗಿಯಾದರು. ಮಸೂದೆಯನ್ನು ಸ್ಪೀಕರ್ ಓಂ ಬಿರ್ಲಾ ಮತಕ್ಕೆ ಹಾಕಿದರು. ಗುರುವಾರ ನಸುಕಿನ 1.30ರ ನಂತರವೂ ಕಲಾಪ ಮುಂದುವರಿದಿತ್ತು.

ಮಸೂದೆಯಲ್ಲಿ ಇರುವ, 'ಕನಿಷ್ಠ ಐದು ವರ್ಷಗಳಿಂದ ಇಸ್ಲಾಂ ಧರ್ಮವನ್ನು ಪಾಲಿಸುತ್ತಿರುವವರು ಮಾತ್ರ ವಕ್ಫ್‌ಗೆ ಆಸ್ತಿ ದಾನ ಮಾಡಬಹುದು' ಎಂಬಂತಹ ಅಂಶಗಳನ್ನು ವಿರೋಧ ಪಕ್ಷಗಳ ಸದಸ್ಯರು ಪ್ರಶ್ನಿಸಿದರು.

8ನೇ ಪುಟ ನೋಡಿ

ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಮಂಡನೆಯಾದ ಬುಧವಾರ ಉತ್ತರಪ್ರದೇಶದ ಮೀರಠ್‌ನ ಸೂಕ್ಷ್ಮ ಪ್ರದೇಶದಲ್ಲಿ ಪೊಲೀಸರು ಮುಂಜಾಗ್ರತೆಯಾಗಿ ಗಸ್ತು ನಡೆಸಿದರು — ಪಿಟಿಐ ಚಿತ್ರ

'ಮಸೂದೆ ವಿರುದ್ಧ ಕೋರ್ಟ್‌ಗೆ ಮೊರೆ'

ನವದೆಹಲಿ (ಪಿಟಿಐ): ವಕ್ಫ್ ತಿದ್ದುಪಡಿ ಮಸೂದೆಯು ಮುಸ್ಲಿಂ ಸಮುದಾಯದ ಹಕ್ಕುಗಳಿಗೆ ಧಕ್ಕೆ ತರುವ 'ಕರಾಳ ಕಾನೂನು' ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಟೀಕಿಸಿದೆ.

'ಈ ಮಸೂದೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು. ಅಲ್ಲದೆ, ಇದರ ವಿರುದ್ಧ ರಾಷ್ಟ್ರದಾದ್ಯಂತ ಬೀದಿಗಿಳಿದು ಹೋರಾಟ ನಡೆಸಲಾಗುವುದು' ಎಂದು ಮಂಡಳಿ ಬುಧವಾರ ತಿಳಿಸಿದೆ. ಎಐಎಂಪಿಎಲ್‌ಬಿ ಸದಸ್ಯ ಮೊಹಮ್ಮದ್ ಅದೀಬ್, 'ಇದು ಮುಸ್ಲಿಂ ಸಮುದಾಯದ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ' ಎಂದು ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ಅವರು ನಮ್ಮ ಆಸ್ತಿಯನ್ನು ಕಸಿದುಕೊಳ್ಳಬಹುದೆಂದು ಭಾವಿಸಿದ್ದಾರೆ. ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ. ಈ ಮಸೂದೆ ಹಿಂಪಡೆಯುವವರೆಗೂ ನಾವು ವಿರಮಿಸುವುದಿಲ್ಲ. ಮಸೂದೆ ಪರಿಶೀಲನೆಗಾಗಿ ರಚಿಸಲಾದ ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಸಭೆಯಲ್ಲೂ ಮಸೂದೆಯನ್ನು ವಿರೋಧಿಸಲಾಗಿದೆ' ಎಂದು ಅದೀಬ್ ಹೇಳಿದರು.

8ನೇ ಪುಟ ನೋಡಿ

'ಮತಬ್ಯಾಂಕ್ ಮೇಲೆ ಕಣ್ಣು'

ನವದೆಹಲಿ (ಪಿಟಿಐ): ವಕ್ಫ್ ಮಸೂದೆಯು ಮುಸ್ಲಿಮರ ಧಾರ್ಮಿಕ ವಿಷಯಗಳಲ್ಲಿ ಮತ್ತು ಅವರು ದಾನವಾಗಿ ನೀಡಿರುವ ಆಸ್ತಿಗಳ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸುತ್ತದೆ ಎಂಬ ಭೀತಿಯನ್ನು ಮತಬ್ಯಾಂಕ್ ಮೇಲೆ ಕಣ್ಣಿಟ್ಟು ಹರಡಲಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಹೇಳಿದರು.

ವಕ್ಫ್ ಮಸೂದೆ ಕುರಿತ ಚರ್ಚೆಯ ವೇಳೆ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ವಕ್ಫ್ ಪರಿಷತ್ತು ಮತ್ತು ಮಂಡಳಿಗಳಲ್ಲಿ ಮುಸ್ಲಿಮೇತರರು ಇರುವುದು ಆಸ್ತಿಗಳ ಆಡಳಿತವು ನಿಗದಿತ ಉದ್ದೇಶಕ್ಕೆ ಅನುಗುಣವಾಗಿ ನಡೆಯುವುದನ್ನು ಖಾತರಿಪಡಿಸುವುದಕ್ಕೆ ಮಾತ್ರ ಎಂದು ಸ್ಪಷ್ಟಪಡಿಸಿದರು.

ಅಲ್ಪಸಂಖ್ಯಾತರನ್ನು ಬೆದರಿಸುವ ಮೂಲಕ ಮತಬ್ಯಾಂಕ್ ಸೃಷ್ಟಿಸಲಾಗುತ್ತಿದೆ, ಅಲ್ಪಸಂಖ್ಯಾತರಲ್ಲಿ ಭೀತಿಯ ವಾತಾವರಣ ಸೃಷ್ಟಿಸಿ ದೇಶದಲ್ಲಿ ಗೊಂದಲ ಹರಡಲಾಗುತ್ತಿದೆ ಎಂದು ಕೂಡ ಅವರು ಹೇಳಿದರು.

2014ರ ಲೋಕಸಭಾ ಚುನಾವಣೆಗೂ ಮೊದಲು, ಅಂದರೆ 2013ರಲ್ಲಿ ತುಷ್ಟೀಕರಣದ ಉದ್ದೇಶದಿಂದ ವಕ್ಫ್ ಕಾನೂನನ್ನು 'ಅತಿ'ಯಾಗಿಸುವ ಕೆಲಸ ಮಾಡಲಾಗಿತ್ತು. ಆಗ ಕಾನೂನಿಗೆ ಬದಲಾವಣೆ ತರುವ ಕೆಲಸ ಮಾಡದೆ ಇದ್ದಿದ್ದರೆ, ಈಗ ಈ ತಿದ್ದುಪಡಿಯನ್ನು ಮಂಡಿಸುವ ಅಗತ್ಯ ಬಹುಶಃ ಇರುತ್ತಿರಲಿಲ್ಲ ಎಂದು ಶಾ ಹೇಳಿದರು.

ಯಾವ ಸಮುದಾಯವನ್ನು ತಪ್ಪುದಾರಿಗೆ ಎಳೆಯಲು ನೀವು ಬಯಸುತ್ತೀರಿ? ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಮುದಾಯವನ್ನೇ? ಮಂಗಲಪಾಂಡೆ ಜೊತೆ ಪ್ರಾಣತ್ಯಾಗ ಮಾಡಿದ ಸಮುದಾಯವನ್ನೇ?
ಗೌರವ್ ಗೊಗೊಯಿ, ಕಾಂಗ್ರೆಸ್ ಸಂಸದ

ಮುಸ್ಲಿಂ ಸಮುದಾಯದ ಸಂಸದರನ್ನೇ ಹೊಂದಿಲ್ಲದ ಪಕ್ಷವು (ಬಿಜೆಪಿ) ಆ ಸಮುದಾಯದ ಹಿತವನ್ನು ಕಾಯುತ್ತೇನೆ ಎಂದು ಹೇಳುತ್ತಿರುವುದು ಒಂದು ವ್ಯಂಗ್ಯ
ಎ. ರಾಜಾ, ಡಿಎಂಕೆ ಸಂಸದ

ಇಂದು ನೀವು ಮುಸ್ಲಿಮರ ವಿರುದ್ಧವಾಗಿದ್ದೀರಿ. ನಾಳೆ ನೀವು ಕ್ರೈಸ್ತರ ವಿರುದ್ಧ ಇರುತ್ತೀರಿ. ನಾಡಿದ್ದು ಸಿಖ್ಖರ ವಿರುದ್ಧ ಇರುವಿರಿ. ದೇಶಕ್ಕೆ ಶಾಂತಿ, ಸೌಹಾರ್ದ ಬೇಕಾಗಿದೆ
ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಸಂಸದ

ವಕ್ಫ್ ತಿದ್ದುಪಡಿ ಮಸೂದೆಯು ತಾರತಮ್ಯ, ಕೋಮುಪ್ರೇರಿತ ಮತ್ತು ಮುಸ್ಲಿಮರ ಸಾಂವಿಧಾನಿಕ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಇದನ್ನು ತಿರಸ್ಕರಿಸುತ್ತೇವೆ
ಮೊಹಮ್ಮದ್ ಅಲಿ ಮೊಹ್ಸಿನ್, ಎಐಎಂಪಿಎಲ್‌ಬಿ ಉಪಾಧ್ಯಕ್ಷ

ಎಐಎಂಪಿಎಲ್‌ಬಿ ಮತ್ತು ಇತರ ಮುಸ್ಲಿಂ ಸಂಘಟನೆಗಳು ಮಸೂದೆಯ ಬಗ್ಗೆ ತಮ್ಮ ಕಳವಳವನ್ನು ಜೆಪಿಸಿಗೆ ತಿಳಿಸಿದ್ದರೂ ಅದನ್ನು ಪರಿಗಣಿಸಿಲ್ಲ
ಮೌಲಾನಾ ಖಾಲಿದ್ ರಾಶಿ ಫರಂಗಿ, ಎಐಎಂಪಿಎಲ್‌ಬಿ ಕಾರ್ಯನಿರ್ವಾಹಕ ಸದಸ್ಯ

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಅಹೋರಾತ್ರಿ ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಬಿ. ವೈ ವಿಜಯೇಂದ್ರ, ಆರ್ ಅಶೋಕ, ಛಲವಾದಿ ನಾರಾಯಣಸ್ವಾಮಿ ಹಾಲಿನ ಕ್ಯಾನ್ ಹಿಡಿದು ಪಾಲ್ಗೊಂಡರು ಚಿತ್ರ: ಪ್ರಶಾಂತ್ ಎಚ್‌.ಜಿ.

ಬಿಜೆಪಿ ಅಹೋರಾತ್ರಿ ಧರಣಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ ವಿರೋಧಿಸಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದ ಆವರಣದಲ್ಲಿ ಬಿಜೆಪಿ ಬುಧವಾರ ಅಹೋರಾತ್ರಿ ಧರಣಿ ಆರಂಭಿಸಿದ್ದು, ಗುರುವಾರ ಮಧ್ಯಾಹ್ನದವರೆಗೆ ಧರಣಿ ನಡೆಯಲಿದೆ.

ಬೆಲೆ ಏರಿಕೆ ವಿರೋಧಿ ಘೋಷಣೆಗಳು, ಬೀದಿ ನಾಟಕ, ಬೆಲೆ ಏರಿಕೆ ಎಷ್ಟು ಮಾಡಲಾಗಿದೆ ಎಂಬುದನ್ನು ಸೂಚಿಸುವ ಫಲಕಗಳನ್ನು ಹಿಡಿದು ಬಿಜೆಪಿ ನಾಯಕರು ಪ್ರತಿಭಟಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ನಡೆದ ಈ ಧರಣಿಯಲ್ಲಿ ಪಕ್ಷದ ಪದಾಧಿಕಾರಿಗಳು, ಹಾಲಿ, ಮಾಜಿ ಶಾಸಕರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ಭಿನ್ನರ ಬಣದ ಜತೆ ಗುರುತಿಸಿಕೊಂಡಿರುವವರಲ್ಲಿ ಶಾಸಕ ಬಿ.ಪಿ.ಹರೀಶ್ ಮಾತ್ರ ಧರಣಿಯಲ್ಲಿ ಪಾಲ್ಗೊಂಡಿದ್ದರು. ಈ ಬಣದ ಬೇರೆ ಶಾಸಕರು,ನಾಯಕರು ಭಾಗವಹಿಸಿರಲಿಲ್ಲ.

'ಹಾಲು, ವಿದ್ಯುತ್, ಡೀಸೆಲ್, ಮೆಟ್ರೊ ಪ್ರಯಾಣ ಹಾಗೂ ಬಸ್ ಪ್ರಯಾಣ ದರ ಹೀಗೆ ಪ್ರತಿ ನಿತ್ಯವೂ ಒಂದಲ್ಲ ಒಂದರ ದರವನ್ನು ಏರಿಕೆ ಮಾಡುತ್ತಲೇ ಇದ್ದಾರೆ. ಹಾಲಿನ ದರ ಒಂದೇ ವರ್ಷದಲ್ಲಿ ಒಂದು ಲೀಟರ್‌ಗೆ ₹9 ಹೆಚ್ಚಿಸಿದ್ದಾರೆ. ವಿದ್ಯುತ್ ದರ ಪ್ರತಿ ಯೂನಿಟ್‌ಗೆ 36 ಪೈಸೆ ಹೆಚ್ಚಿಸಿದ್ದಾರೆ. ಹಿಂದೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಹಾಕಿಸಲು ರೈತರಿಗೆ ₹30 ಸಾವಿರ ವೆಚ್ಚ ಆಗುತ್ತಿತ್ತು. ಈಗ ₹2.5 ಲಕ್ಷಕ್ಕೆ ಏರಿಸಿದ್ದಾರೆ. ಮುದ್ರಾಂಕ ಶುಲ್ಕ, ಮಾರ್ಗಸೂಚಿ ದರವನ್ನು ಶೇ 100ರಿಂದ ಶೇ 1000ದಷ್ಟು ಏರಿಸಿದ್ದಾರೆ. ಜನರನ್ನು ನೆಮ್ಮದಿಯಿಂದ ಇರಲು ಬಿಡುತ್ತಿಲ್ಲ' ಎಂದು ಭಾಷಣಕಾರರು ಟೀಕಿಸಿದರು.

ಗ್ಯಾರಂಟಿಗಳಿಗಾಗಿ ರಾಜ್ಯದ ಮನೆ ಮನೆ ಲೂಟಿ ಆಗುತ್ತಿದೆ. ಸಚಿವರು ಕಮಿಷನ್‌ಗಾಗಿ ಅಂಗಡಿ ತೆರೆದಿದ್ದಾರೆ. ಸರ್ಕಾರದಲ್ಲಿ 136 ಜನ ಕಳ್ಳರು ಇದ್ದಾರೆ
ಆರ್.ಅಶೋಕ ವಿರೋಧ ಪಕ್ಷದ ನಾಯಕ

ಮುಖ್ಯಮಂತ್ರಿ ಸಿದ್ದರಾಮಯ್ಯ ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಈ ಸರ್ಕಾರದ ಮೂಗು ಹಿಡಿದು ಪಾಠ ಕಲಿಸಿ ಮನೆಗೆ ಕಳಿಸಬೇಕಾಗಿದೆ
ಬಿ.ಎಸ್.ಯಡಿಯೂರಪ್ಪ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸೋಮ, ಅಮಿತ್ ಶರಣು

ಪ್ರಜಾವಾಣಿ ವಾರ್ತೆ

ತುಮಕೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಕೊಲೆಗೆ ಸಂಚು ರೂಪಿಸಿದ ಪ್ರಕರಣದ ಪ್ರಮುಖ ಆರೋಪಿಗಳಾದ ರೌಡಿಶೀಟರ್ ಸೋಮ ಮತ್ತು ಅಮಿತ್ ಬುಧವಾರ ಕ್ಯಾತ್ಸಂದ್ರ ಠಾಣೆ ಪೊಲೀಸರಿಗೆ ಶರಣಾಗಿದ್ದಾರೆ.

ಈ ಪ್ರಕರಣದಲ್ಲಿ ಸೋಮ ಮೊದಲ ಆರೋಪಿ (ಎ1) ಮತ್ತು ಅಮಿತ್ ಮೂರನೇ ಆರೋಪಿ (ಎ3) ಆಗಿದ್ದಾರೆ. ಕೊಲೆ ಸಂಚಿನ ವಿಷಯ ಹೊರಬಂದ ನಂತರ ಪ್ರಮುಖ ಆರೋಪಿ ಸೋಮ ತಲೆ ಮರೆಸಿಕೊಂಡಿದ್ದ.

ಪ್ರಕರಣದ ತನಿಖೆಗೆ ರಚಿಸಿದ ವಿಶೇಷ ತಂಡವು ಆರೋಪಿಗಳಾದ ಭರತ್, ಯತೀಶ್, ಪುಷ್ಪಾ ಮತ್ತು ಯಶೋಧ ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿತ್ತು. ಇದೀಗ ಸೋಮ, ಅಮಿತ್ ಕ್ಯಾತ್ಸಂದ್ರ ಠಾಣೆ ಪೊಲೀಸರ ಮುಂದೆ ಶರಣಾಗಿದ್ದಾರೆ.

ಸೋಮ

ಅಮಿತ್

ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಇತರರ ವಿರುದ್ಧ ಪ್ರಕರಣ ದಾಖಲಾಗಿತ್ತು. ಸೋಮನಿಗೆ ₹5 ಲಕ್ಷ ಹಣ ವರ್ಗಾವಣೆ ಮಾಡಿದ ಆರೋಪದ ಮೇಲೆ ಮನು ಎಂಬುವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಮುಡಾ: ಇ.ಡಿ ತನಿಖೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರಾಗಿದ್ದ ಡಿ.ಬಿ ನಟೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಹೊರಡಿಸಿದ್ದ ಸಮನ್ಸ್ ರದ್ದುಪಡಿಸಿ ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶಕ್ಕೆ ತಡೆ ನೀಡಲು ನಿರಾಕರಿಸಿರುವ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ, ಪ್ರಕರಣದ ಇತರೆ ಆರೋಪಿಗಳ ವಿರುದ್ಧದ ತನಿಖೆಗೆ ಅನುಮತಿ ನೀಡಿದೆ.

'ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿ ಇ.ಡಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಲೇವಾರಿ ಮಾಡಿದೆ.

'ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಬೇಕು ಎಂಬ ಕೋರಿಕೆಯನ್ನು ಪುರಸ್ಕರಿಸಲಾಗದು. ಇದೇ ವೇಳೆ ಪ್ರಕರಣದಲ್ಲಿ ಇತರೆ ಆರೋಪಿಗಳ ವಿರುದ್ಧದ ತನಿಖೆಯನ್ನು ನಿರ್ಬಂಧಿಸಲೂ ಆಗದು. ನಟೇಶ್ ಅವರ ಮನೆಯಲ್ಲಿ ಶೋಧ ಕಾರ್ಯ ಕೈಗೊಂಡ ವೇಳೆ ವಶಪಡಿಸಿಕೊಂಡಿರುವ ದಾಖಲೆ ಹಾಗೂ ಅವರ ಹೇಳಿಕೆಯನ್ನು ತನಿಖೆಗೆ ಬಳಸಬಹುದು' ಎಂದು ನ್ಯಾಯಪೀಠ ವಿವರಿಸಿದೆ.

'ಪ್ರಶ್ನಿಸಲಾಗಿರುವ ಏಕಸದಸ್ಯ ಪೀಠದ ಆದೇಶಕ್ಕೆ ಹೊರತಾಗಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್‌ಎ) ಅಡಿಯಲ್ಲಿ ತನಿಖೆಗೆ ಅನುಮತಿ ನೀಡಲಾಗಿದೆ. ಹೀಗಾಗಿ, ಇ.ಡಿ ಕಾನೂನಿನ್ವಯ ತನಿಖೆ ನಡೆಸುವ ಅರ್ಹತೆ ಹೊಂದಿದೆ. ಈ ನೆಲೆಯಲ್ಲಿ ಮಧ್ಯಂತರ ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಪರಿಹಾರ ರೂಪದಲ್ಲಿ 14 ಬದಲಿ ನಿವೇಶನ ಹಂಚಿಕೆ ಮಾಡಿದಾಗ, ನಟೇಶ್ ಅವರು ಮುಡಾದ ಆಯುಕ್ತರಾಗಿದ್ದರು.

ಅಂಗಾಂಗ ದಾನ: ಕೇಂದ್ರದ ನೌಕರರಿಗೆ 42 ದಿನ ರಜೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ನೌಕರರು ಅಂಗಾಂಗ ದಾನ ಮಾಡಿದರೆ ಗರಿಷ್ಠ 42 ದಿನಗಳ ವಿಶೇಷ ಸಾಂದರ್ಭಿಕ ರಜೆ ಪಡೆಯಲು ಅವಕಾಶವಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಈ ಬಗ್ಗೆ ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

'ದಾನಿಗಳ ಅಂಗಾಂಗ ಪಡೆಯಲು ಯಾವುದೇ ರೀತಿಯ ಶಸ್ತ್ರಚಿಕಿತ್ಸೆ ಕೈಗೊಂಡಿದ್ದರೂ ಸರ್ಕಾರಿ ನೋಂದಾಯಿತ ವೈದ್ಯರ ಸಲಹೆಯಂತೆ ಈ ವಿಶೇಷ ಸಾಂದರ್ಭಿಕ ರಜೆಯ ಸೌಲಭ್ಯ ಕಲ್ಪಿಸಲಾಗಿದೆ' ಎಂದಿದ್ದಾರೆ.

'ಈ ಬಗ್ಗೆ 2023ರಲ್ಲೇ ಸಿಬ್ಬಂದಿ ಸಚಿವಾಲಯ ಆದೇಶ ಹೊರಡಿಸಿದೆ. ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದ ದಿನದಿಂದಲೇ ವಿಶೇಷ ಸಾಂದರ್ಭಿಕ ರಜೆಯನ್ನು ಪಡೆದುಕೊಳ್ಳಬಹುದು. ಅಗತ್ಯವಿದ್ದರೆ ವೈದ್ಯರ ಶಿಫಾರಸಿನಂತೆ ಶಸ್ತ್ರಚಿಕಿತ್ಸೆಗಿಂತ ಒಂದು ವಾರ ಮುನ್ನ ರಜೆ ತೆಗೆದುಕೊಳ್ಳಲು ಅವಕಾಶ ಇದೆ' ಎಂದು ವಿವರಿಸಿದ್ದಾರೆ.

ಹೊಸ ನಿಯಮ ಬದಲಿಗೆ ಹಳೆಯ ನಿಯಮ ಅನುಸರಣೆ

ಪ್ರಾಧ್ಯಾಪಕರ ಬಡ್ತಿಯಲ್ಲಿ ಅಕ್ರಮಕ್ಕೆ ಆಕ್ಷೇಪ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೆಲ ಸಹ ಪ್ರಾಧ್ಯಾಪಕರಿಗೆ ಬಡ್ತಿ ನೀಡಲು ಕಾಲೇಜು ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಂಡಿದೆ ಎಂದು ಆರೋಪಿಸಲಾಗಿದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಹಾಯಕ ಪ್ರಾಧ್ಯಾಪಕರಾಗಿ ನೇಮಕವಾದವರು ನಿಗದಿತ ಅವಧಿ ಪೂರ್ಣಗೊಳಿಸಿದ ನಂತರ ಯುಜಿಸಿಯ ಯಾವ ನಿಯಮದ ಅಡಿ ಸಹ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆಯುತ್ತಾರೋ, ಅದೇ ನಿಯಮ ಅಥವಾ ಅದಕ್ಕಿಂತ ನಂತರ ರೂಪಿಸಿದ ಹೊಸ ನಿಯಮಗಳ ಅನ್ವಯವೇ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ಪಡೆಯಬೇಕು ಎನ್ನುವುದು ನಿಯಮ. 2018ರ ಯುಜಿಸಿ ನಿಯಮಗಳ ಅನ್ವಯ 2021ರಲ್ಲಿ ಸಹ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಈಗ 2010ರ ಯುಜಿಸಿ ನಿಯಮಗಳನ್ನು ಬಳಸಿಕೊಂಡು ಪ್ರಾಧ್ಯಾಪಕ ಸ್ಥಾನಕ್ಕೆ ಬಡ್ತಿ ನೀಡಲು ಮುಂದಾಗಿರುವ ಇಲಾಖೆ, ಅರ್ಹತೆ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಳಿಸಿದೆ.

ಯುಜಿಸಿ ಕಾಲಕಾಲಕ್ಕೆ ನಿಯಮಗಳನ್ನು ಬದಲಾವಣೆ ಮಾಡುತ್ತಾ ಬರುತ್ತದೆ. ಆ ನಿಯಮಗಳಿಗೆ ಒಳಪಟ್ಟು ಉನ್ನತ ಶಿಕ್ಷಣದಲ್ಲಿನ ನೇಮಕಾತಿ, ಬಡ್ತಿ, ವೇತನ ಶ್ರೇಣಿಯನ್ನು ನಿಗದಿ ಮಾಡಲಾಗುತ್ತದೆ. ಹೊಸ ನಿಯಮಗಳು ಜಾರಿಯಾದಾಗ ಆ ನಿಯಮಗಳ ಅನ್ವಯವೇ ನೇಮಕಾತಿ, ಬಡ್ತಿ, ವೇತನ ನಗದೀಕರಣವನ್ನು ಬೋಧಕ, ಬೋಧಕೇತರ ಸಿಬ್ಬಂದಿ ಪಡೆಯುತ್ತಾರೆ.

ತಾವು ಸೌಲಭ್ಯ ಪಡೆದ ನಿಯಮ ಹಾಗೂ ಅದಕ್ಕಿಂತ ಮುಂದಿನ ಹೊಸ ನಿಯಮಗಳ ಅನ್ವಯ ಅಂಥವರಿಗೆ ಬಡ್ತಿ ನೀಡಬೇಕು. ಅದಕ್ಕಿಂತ ಹಿಂದಿನ ನಿಯಮ ಅನ್ವಯಿಸಿ, ಸೌಲಭ್ಯ ದೊರಕಿಸುವಂತಿಲ್ಲ. ಆದರೆ, ಕಾಲೇಜು ಶಿಕ್ಷಣ ಇಲಾಖೆಯ ಹೊಸ ನಡೆ ಅನುಮಾನಕ್ಕೆ ಕಾರಣವಾಗಿದೆ.

8ನೇ ಪುಟ ನೋಡಿ

ಅಂಕಿ ಅಂಶ

434 ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳು

9,000 ಕಾಯಂ ಬೋಧಕ ಸಿಬ್ಬಂದಿ

3,690 ಸಹ ಪ್ರಾಧ್ಯಾಪಕರು

ಅರ್ಜಿ ಪರಿಶೀಲನೆಗೆ ಸಹಾಯಕ ಪ್ರಾಧ್ಯಾಪಕರು

ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದವರ ಅರ್ಹತೆ ಪರಿಶೀಲನೆಗೆ ಸಹಾಯಕ ಪ್ರಾಧ್ಯಾಪಕರನ್ನು ಕಾಲೇಜು ಶಿಕ್ಷಣ ಇಲಾಖೆ ನೇಮಕ ಮಾಡಿಕೊಂಡಿದೆ.

ಬಡ್ತಿಗೆ ಸಲ್ಲಿಕೆಯಾದ ಅರ್ಜಿಗಳನ್ನು ಪರಿಶೀಲಿಸಲು ನಿಯಮದಂತೆ ವಿಶ್ವವಿದ್ಯಾಲಯಗಳ ವಿಷಯವಾರು ಪ್ರಾಧ್ಯಾಪಕರನ್ನು ನಿಯೋಜಿಸಬೇಕು. ಆದರೆ, 2017ರಲ್ಲಿ ಪ್ರಥಮ ದರ್ಜೆ ಕಾಲೇಜುಗಳಿಗೆ ನೇಮಕವಾದ ಮೂವರು ಸಹಾಯಕ ಪ್ರಾಧ್ಯಾಪಕರನ್ನು ಬಡ್ತಿ ಮತ್ತು ಸ್ಥಾನೀಕರಣ ವಿಭಾಗಕ್ಕೆ ನಿಯೋಜನೆ ಮಾಡಿಕೊಂಡು ಅವರಿಂದ ಅರ್ಜಿಗಳ ಪರಿಶೀಲನೆ ನಡೆಸಲಾಗಿದೆ ಎಂದು ಹಲವು ಸಹ ಪ್ರಾಧ್ಯಾಪಕರು ದೂರಿದ್ದಾರೆ.

ನಕಲಿ ಪಿಎಚ್‌.ಡಿ: ದೂರಿಗೂ ಇಲ್ಲ ಕ್ರಮ

ಬಹುತೇಕ ಸಹ ಪ್ರಾಧ್ಯಾಪಕರ ಪಿಎಚ್‌.ಡಿ ಪದವಿ ನಕಲಿ ಎನ್ನುವುದು ಸಾಬೀತಾಗಿದೆ. ಕೆಲವರು ಹಣಕೊಟ್ಟು ತಮ್ಮ ಹೆಸರಿನಲ್ಲಿ ಲೇಖನ ಬರೆಸಿದ್ದಾರೆ. ಐಎಸ್‌ಎಸ್‌ಎನ್ ಸಂಖ್ಯೆ ಇರುವ ಪ್ರಮಾಣಪತ್ರ ಪಡೆದಿದ್ದಾರೆ ಎನ್ನುವ ಹಲವು ದೂರುಗಳು ದಾಖಲೆ ಸಹಿತ ಕಾಲೇಜು ಶಿಕ್ಷಣ ಇಲಾಖೆಗೆ ಸಲ್ಲಿಕೆಯಾಗಿದ್ದರೂ ಈ ಕುರಿತು ಕ್ರಮ ಕೈಗೊಂಡಿಲ್ಲ. ಅಂಥವರಿಗೂ ಪದೋನ್ನತಿ ನೀಡಲಾಗುತ್ತಿದೆ ಎನ್ನುತ್ತಾರೆ ಸಹ ಪ್ರಾಧ್ಯಾಪಕ ಕಿರಣ್.

ಓಲಾ, ಉಬರ್, ರ‍್ಯಾಪಿಡೊ ಬೈಕ್ ಸೇವೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ‍್ಯಾಪಿಡೊ ತಮ್ಮ ಬೈಕ್ ಟ್ಯಾಕ್ಸಿ ಸೇವೆಯನ್ನು ಆರು ವಾರಗಳ ಒಳಗಾಗಿ ನಿರ್ಬಂಧಿಸಬೇಕು' ಎಂದು ಹೈಕೋರ್ಟ್ ಆದೇಶ ನೀಡಿದೆ.

'ಬೈಕ್ ಟ್ಯಾಕ್ಸಿ ಸೇವೆ ಮುಂದುವರಿಸುವ ಅನುಮತಿಗೆ ನಿರ್ದೇಶನ ನೀಡಬೇಕು' ಎಂದು ಕೋರಿ, 'ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್', 'ರೋಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್' ಮತ್ತು 'ಎಎನ್‌ಐ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್' ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.



'ಬೈಕ್ ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ನಿಯಂತ್ರಣ ಕ್ರಮಗಳನ್ನು ರೂಪಿಸಲು ಮತ್ತು ಸಾರಿಗೆಯೇತರ ವಾಹನಗಳನ್ನು ಸಾರಿಗೆ ವಾಹನಗಳನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲಾಗದು. ಹೀಗಾಗಿ, ಈ ಕುರಿತು ಮಾರ್ಗದರ್ಶಿ ಸೂತ್ರಗಳು ಜಾರಿಯಾಗುವ ತನಕ ಬೈಕ್ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಓಲಾ, ಉಬರ್ ಮತ್ತಿತರ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ನಿರ್ಬಂಧಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಬೈಕ್ ಟ್ಯಾಕ್ಸಿ ಸೇವೆ ಒದಗಿಸುವುದಕ್ಕೆ ಸಂಬಂಧಿಸಿದಂತೆ 2022ರ ಫೆಬ್ರುವರಿ 19ರಂದು ಸಾರಿಗೆ ಇಲಾಖೆ ಕಾರ್ಯದರ್ಶಿಗೆ ನೀಡಿರುವ ಮನವಿಯನ್ನು ಪರಿಗಣಿಸಲು ಮತ್ತು ಸಾರಿಗೆ ವಾಹನಗಳಾಗಿ ಪರವಾನಗಿಯ ನೋಂದಣಿ ಕೋರುವ ಮೋಟಾರ್ ಬೈಕ್‌ಗಳಿಗೆ ಅನುಮತಿ ನೀಡಲು ಸಾರಿಗೆ ಆಯುಕ್ತರಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ವ್ಯಕ್ತಿ ಸಾವು: ಸಿಪಿಐ, ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ರಾಯಚೂರು: 'ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪೊಲೀಸರ ಹಲ್ಲೆಯಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಪಿಐ ನಾಗರಾಜ ಮೆಕಾ ಹಾಗೂ ಪಿಎಸ್‌ಐ ಮಂಜುನಾಥ ಅವರನ್ನು ಅಮಾನತು ಮಾಡಲಾಗಿದೆ. ಪ್ರಕರಣವನ್ನು ಸಿಐಡಿ ತನಿಖೆಗೆ ಶಿಫಾರಸು ಮಾಡಲಾಗಿದೆ' ಎಂದು ಬಳ್ಳಾರಿ ವಲಯದ ಐಜಿಪಿ ಲೋಕೇಶಕುಮಾರ ತಿಳಿಸಿದರು.

ಕೌಟುಂಬಿಕ ಕಲಹದ ಕಾರಣ ಈಶ್ವರ ನಗರದ ನಿವಾಸಿ ಈರೇಶ ಅವರ ಪತ್ನಿ ನರಸಮ್ಮ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ವಿಚಾರಣೆ ನಡೆಸಿ ಆರೋಪಿಯನ್ನು ಬಿಡುಗಡೆ ಮಾಡಲಾಗಿತ್ತು. ನರಸಮ್ಮ 112ಕ್ಕೆ ಕರೆ ಮಾಡಿದ್ದರಿಂದ ಪಶ್ಚಿಮ ಠಾಣೆ ಪೊಲೀಸರು ಈರೇಶನನ್ನು ಮತ್ತೆ ವಿಚಾರಣೆಗೆ ಕರೆ ತಂದಿದ್ದರು. ನಂತರ ಅಸ್ವಸ್ಥಗೊಂಡಿದ್ದ ಈರೇಶನನ್ನು ರಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಬಳಿಕ ಅವರು ಕೊನೆಯುಸಿರೆಳೆದಿದ್ದರು.

‘ಸವಾಲು ಎದುರಿಸಲು ತಂತ್ರಜ್ಞಾನದ ನೆರವು’

ಬೆಂಗಳೂರು: ‘ತಂತ್ರಜ್ಞಾನದಿಂದ ಭವಿಷ್ಯದ ಸವಾಲು ಪರಿಹರಿಸಬಹುದು ಎಂದು ಇಸ್ರೊ ಮಾಜಿ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದರು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್‌ನ 50ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕ್ಯಾಂಪಸ್: ಬ್ರಿಟನ್ ವಿ.ವಿ ಒಲವು

ಬೆಂಗಳೂರು: ರಾಜ್ಯದಲ್ಲಿ ತನ್ನ ಕ್ಯಾಂಪಸ್ ಆರಂಭಿಸಲು ಆಸಕ್ತಿ ಹೊಂದಿರುವ ಬ್ರಿಟನ್‌ನ ಪೋರ್ಟ್ಸ್ ಮೌತ್ ವಿಶ್ವವಿದ್ಯಾಲಯದ ಉನ್ನತ ಮಟ್ಟದ ನಿಯೋಗವು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಚರ್ಚಿಸಿತು.

‘ಕ್ಯಾಂಪಸ್ ತೆರೆಯಲು ಜಮೀನು ಇತರೆ ಸೌಲಭ್ಯಗಳನ್ನು ಸರ್ಕಾರ ನೀಡಲಿದೆ. ಯುಜಿಸಿ ನಿಯಮಾವಳಿ ಪ್ರಕಾರ, ಜಾಗತಿಕವಾಗಿ ಮೊದಲ 500 ಸ್ಥಾನದಲ್ಲಿರುವ ಶಿಕ್ಷಣ ಸಂಸ್ಥೆಗಳು ಕ್ಯಾಂಪಸ್ ತೆರೆಯಲು ಅವಕಾಶವಿದೆ. ದಾಬಸ್‌ಪೇಟೆ-ದೊಡ್ಡಬಳ್ಳಾಪುರ ಬಳಿ ಅಸ್ತಿತ್ವಕ್ಕೆ ಬರುವ ‘ಕ್ವಿನ್ ಸಿಟಿ’ಯಲ್ಲಿ ಕ್ಯಾಂಪಸ್‌ಗೆ ಆದ್ಯತೆ ಸಿಗಲಿದೆ ಎಂದು ಸಚಿವರು ತಿಳಿಸಿದರು.

ಪೋರ್ಟ್ಸ್‌ಮೌತ್‌ವಿ.ವಿಕುಲಾಧಿಪತಿ, ಪ್ರೊ.ಬಾಬಿ ಮೆಹತಾ, ಐಎಸ್‌ಡಿಸಿ ನಿರ್ದೇಶಕ ಸುಬಿ ಕುರಿಯನ್ ಮತ್ತು ಇತರರು ನಿಯೋಗದಲ್ಲಿ ಇದ್ದರು.

ಪಾಳು ಬಿದ್ದ 400 ಫ್ಲ್ಯಾಟ್‌ಗಳು

ಪೌರಕಾರ್ಮಿಕರಿಗೆ ನಿರ್ಮಿಸಿರುವ ವಸತಿ ಸಮುಚ್ಚಯ, ಗೋಡೆಗಳಲ್ಲಿ ಬಿರುಕು

• ಕೆ.ಎಸ್.ಸುನಿಲ್

ಬೆಂಗಳೂರು: ಬಿರುಕು ಬಿಟ್ಟಿರುವ ಗೋಡೆಗಳು, ಕಿತ್ತುಹೋದ ವೈರ್‌ಗಳು, ಕಾಣೆಯಾದ ಬಲ್ಬುಗಳು, ಮದ್ಯದ ಬಾಟಲಿಗಳು, ಸುತ್ತಲೂ ಕಸದ ರಾಶಿ, ಎದೆಯೆತ್ತರ ಬೆಳೆದ ಗಿಡ–ಗಂಟಿಗಳು..

ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬಿಬಿಎಂಪಿ ಕಾಯಂ ಪೌರಕಾರ್ಮಿಕರಿಗೆ ದಾಸನಪುರ ಹೋಬಳಿ ಆಲೂರಿನಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯದ ಸ್ಥಿತಿ.

ನಗರದಿಂದ ಸುಮಾರು 25 ಕಿ.ಮೀ. ದೂರದಲ್ಲಿರುವ ಆಲೂರು ಗ್ರಾಮದಲ್ಲಿ ಆರು ಬ್ಲಾಕ್‌ಗಳಲ್ಲಿ 400 ಫ್ಲ್ಯಾಟ್‌ಗಳ (ಸಿಂಗಲ್ ಬಿಎಚ್‌ಕೆ) ವಸತಿ ಸಮುಚ್ಚಯವನ್ನು 2014-15ರಲ್ಲಿ ನಿರ್ಮಿಸಲಾಗಿದೆ. ಪ್ರತಿ ಫ್ಲ್ಯಾಟ್, ಒಂದು ಮಲಗುವ ಕೋಣೆ, ಅಡುಗೆ ಮನೆ ಮತ್ತು ಹಾಲ್ ಹೊಂದಿದೆ. ಆದರೆ, ಯೋಜನೆ ಪೂರ್ಣಗೊಂಡು ದಶಕ ಕಳೆದರೂ ವಸತಿ ಸಮುಚ್ಚಯದಲ್ಲಿ ಯಾರೂ ವಾಸಿಸುತ್ತಿಲ್ಲ. ಹಾಗಾಗಿ ಸಮುಚ್ಚಯದ ಆವರಣದ ಸುತ್ತ ಕಸದ ರಾಶಿ ಬಿದ್ದಿದೆ. ನಿರ್ವಹಣೆಯಿಲ್ಲದ್ದರಿಂದ, ಗೋಡೆಗಳು ಬಿರುಕು ಬಿಟ್ಟಿದ್ದು, ಅಡುಗೆ ಮನೆಯ ಸ್ಲ್ಯಾಬ್‌ಗಳು ಒಡೆದಿವೆ.

ಈ ಯೋಜನೆಗೆ ಪೌರಾಡಳಿತ ನಿರ್ದೇಶನಾಲಯ ಮತ್ತು ಬಿಬಿಎಂಪಿ ಅನುದಾನ ಒದಗಿಸಿವೆ. 10ರಿಂದ 15 ವರ್ಷ ಸೇವೆ ಸಲ್ಲಿಸಿರುವ, ಸ್ವಂತ ಮನೆಯಿಲ್ಲದ ಕಾಯಂ ಪೌರಕಾರ್ಮಿಕರನ್ನು ಯೋಜನೆಯ ಫಲಾನುಭವಿಗಳನ್ನಾಗಿ ಪರಿಗಣಿಸಲಾಗುತ್ತದೆ.

‘ಪೌರಕಾರ್ಮಿಕರಿಗೆ ನಿರ್ಮಿಸಿರುವ ಫ್ಲ್ಯಾಟ್‌ಗಳು ನಿರ್ವಹಣೆಯಿಲ್ಲದೆ ಪಾಳುಬಿದ್ದಿವೆ. ನಲ್ಲಿಗಳು, ವೈರ್‌ಗಳನ್ನು ಕಳವು ಮಾಡಲಾಗಿದೆ. ಯೋಜನೆ ಮುಗಿದು ಹಲವು ವರ್ಷಗಳಾಗಿವೆ. ಕೆಲವು ಪೌರಕಾರ್ಮಿಕರು ನಿವೃತ್ತರಾಗಿದ್ದಾರೆ. ಕಾರ್ಮಿಕರಿಗೆ ವಾಸದ ಭಾಗ್ಯ ದೊರೆತಿಲ್ಲ’ ಎಂದು ಪೌರಕಾರ್ಮಿಕರ ಪರಿವರ್ತನಾ ಸಂಘದ ಸಿ.ಎನ್.ಆನಂದ್ ಬೇಸರ ವ್ಯಕ್ತಪಡಿಸಿದರು.

‘ಫ್ಲ್ಯಾಟ್‌ಗಳಿಗೆ ನೀರು ಮತ್ತು ವಿದ್ಯುತ್ ಸೇರಿದಂತೆ ಮೂಲಸೌಕರ್ಯ ವ್ಯವಸ್ಥೆ ಕಲ್ಪಿಸುವ ಕೆಲಸ ಬಾಕಿಯಿದೆ. ವಸತಿ ಸಮುಚ್ಚಯದ ಜಾಗವನ್ನು ಕಸ ಸುರಿಯುವ ತಾಣವನ್ನಾಗಿ ಮಾಡಿಕೊಂಡಿದ್ದಾರೆ’ ಎಂದು ದೂರಿದರು.

‘ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಫ್ಲ್ಯಾಟ್‌ಗಳನ್ನು ದುರಸ್ತಿಗೊಳಿಸಬೇಕು. ಆಲೂರಿನಿಂದ ನಗರದ ಸ್ವಚ್ಛತಾ ಕೆಲಸಕ್ಕೆ ಪೌರಕಾರ್ಮಿಕರು ಬಂದು ಹೋಗಲು ಬಸ್ ಸೇವೆ ಕಲ್ಪಿಸಬೇಕು. ಫ್ಲ್ಯಾಟ್ ನೋಂದಣಿ ವೆಚ್ಚವನ್ನು ಬಿಬಿಎಂಪಿ ಭರಿಸಬೇಕು. ಫ್ಲ್ಯಾಟ್‌ಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಬೇಕು’ എಂದು ಅವರು ಒತ್ತಾಯಿಸಿದರು.

ಬಿಡಿಎ ನಿರ್ಮಿಸಿದ ವಸತಿ ಸಮುಚ್ಚಯ

ಆಯೋಗ ಬೇಸರ

ವಸತಿ ಸಮುಚ್ಚಯ ಪೂರ್ಣಗೊಂಡು ಹತ್ತು ವರ್ಷ ಕಳೆದರೂ ಬಿಬಿಎಂಪಿ ಕಾಯಂ ಪೌರಕಾರ್ಮಿಕರಿಗೆ ಹಂಚಿಕೆ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡದಿರುವುದಕ್ಕೆ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಬೇಸರ ವ್ಯಕ್ತಪಡಿಸಿದೆ.

ಈ ಸಂಬಂಧ ಬಿಡಿಎ ಮತ್ತು ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿರುವ ಆಯೋಗದ ಕಾರ್ಯದರ್ಶಿ ಚಂದ್ರಕಲಾ, ‘ನಿರ್ವಹಣೆಯ ಕೊರತೆಯಿಂದಾಗಿ ಗೋಡೆಗಳು ಬಿರುಕು ಬಿಟ್ಟಿವೆ. ಹಲವಾರು ಮನೆಗಳಲ್ಲಿ ಕಸ, ಕಡ್ಡಿ ತುಂಬಿಕೊಂಡಿದೆ. ಪೌರಕಾರ್ಮಿಕರು ಫ್ಲ್ಯಾಟ್‌ಗಳನ್ನು ಪಡೆಯಲು ಯೋಚಿಸಬೇಕಾದ ಸ್ಥಿತಿ ಬಂದಿದೆ. ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ, ನಿಯಮಾನುಸಾರ ಕಾಯಂ ಪೌರಕಾರ್ಮಿಕರಿಗೆ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡಿ, ಆಯೋಗದ ಅಧ್ಯಕ್ಷರಿಗೆ ವರದಿ ಸಲ್ಲಿಸಬೇಕು’ ಎಂದು ಸೂಚಿಸಿದ್ದಾರೆ.

‘ನೋಂದಣಿಗೆ ಫಲಾನುಭವಿಗಳ ಹಿಂದೇಟು’

‘ಫ್ಲ್ಯಾಟ್‌ಗಳನ್ನು ಪೌರಕಾರ್ಮಿಕರಿಗೆ ಹಂಚಿಕೆ ಮಾಡಲಾಗಿದೆ. ಆದರೆ, ಫಲಾನುಭವಿಗಳು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳುತ್ತಿಲ್ಲ. ನೋಂದಣಿ ಶುಲ್ಕ ₹66 ಸಾವಿರದಿಂದ ₹70 ಸಾವಿರ ಇದೆ. ಬಿಬಿಎಂಪಿ ವತಿಯಿಂದಲೇ ಶುಲ್ಕವನ್ನು ಭರಿಸುವಂತೆ ಪೌರಕಾರ್ಮಿಕರು ಹೇಳುತ್ತಿದ್ದಾರೆ’ ಎಂದು ಬಿಡಿಎ ಸಹಾಯಕ ಎಂಜಿನಿಯರ್ ಬಸವರಾಜು ಹೇಳಿದರು.

‘ಫ್ಲ್ಯಾಟ್ ವೆಚ್ಚ ₹11.20 ಲಕ್ಷ. ಇದನ್ನು ನಿರ್ಮಿಸಿ ಹತ್ತು ವರ್ಷ ಆಗಿದೆ. ಯಾರೂ ಬಂದು ವಾಸ ಮಾಡದ ಕಾರಣ ನಲ್ಲಿಗಳು, ಸಣ್ಣಪುಟ್ಟ ಸಾಮಗ್ರಿಗಳ ಕಳ್ಳತನ ಆಗಿದೆ. ಇದರಿಂದ ಬಿಡಿಎಗೆ ₹1 ಕೋಟಿ ನಷ್ಟವಾಗಿದೆ. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ನಿರ್ವಹಣೆ ಜವಾಬ್ದಾರಿ ನೀಡಲಾಗಿದೆ. ಫ್ಲ್ಯಾಟ್‌ಗಳನ್ನು ದುರಸ್ತಿ ಮಾಡಿಸಿ ಕೊಡಲಾಗುವುದು. ಪೌರಕಾರ್ಮಿಕರು ತಮ್ಮ ಹೆಸರಿಗೆ ಫ್ಲ್ಯಾಟ್ ನೋಂದಣಿ ಮಾಡಿಸಿಕೊಳ್ಳಬೇಕು ಅಷ್ಟೇ’ ಎಂದು ಹೇಳಿದರು.

ಬೆಂಗಳೂರು ವಿಭಜನೆಗೆ ವಿರೋಧ

ರಾಮನಗರ: ಬೆಂಗಳೂರು ಆಡಳಿತ ಮಸೂದೆ ಮೂಲಕ, ಬೆಂಗಳೂರನ್ನು ಏಳು ಭಾಗವಾಗಿ ವಿಭಜಿಸುವುದನ್ನು ಖಂಡಿಸಿ ಕನ್ನಡ ಚಳವಳಿ ಪಕ್ಷದ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬುಧವಾರ ಈಡುಗಾಯಿ ಒಡೆದು ಪ್ರತಿಭಟಿಸಿದರು.

ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು, ಅಖಂಡ ಬೆಂಗಳೂರಿಗೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ಹಾಗೇ ಉಳಿಸಬೇಕು ಎಂದು ಆಗ್ರಹಿಸಿದರು.

‘ಏಪ್ರಿಲ್ 26ರಂದು ರಾಜ್ಯದಾದ್ಯಂತ ಈಡುಗಾಯಿ ಒಡೆದು ಪ್ರತಿಭಟಿಸಲಾಗುವುದು ಎಂದು ವಾಟಾಳ್ ನಾಗರಾಜ್ ಅವರು ತಿಳಿಸಿದರು. .

‘ಗ್ಯಾರಂಟಿ ಹೆಸರಲ್ಲಿ ಸರ್ಕಾರದಿಂದ ವಸೂಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಬಡವರಿಂದ ಹಣ ವಸೂಲಿ ಮಾಡುವ ಕಾರ್ಯಕ್ಕೆ ಕೈಹಾಕಿದೆ’ ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಆರೋಪಿಸಿದ್ದಾರೆ.

‘ಐದು ಗ್ಯಾರಂಟಿಗಳ ಮೂಲಕ ಬಡವರ ಕಲ್ಯಾಣ ಮಾಡುತ್ತೇವೆಂದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಎರಡು ವರ್ಷಗಳು ತುಂಬುವುದರೊಳಗೆ ತಾನು ಕೊಟ್ಟ ಗ್ಯಾರಂಟಿ ಹಣಕ್ಕಿಂತ ಎರಡು ಪಟ್ಟು ಹಣವನ್ನು ಬಡವರಿಂದ ವಸೂಲು ಮಾಡುತ್ತಿದೆ. ಮೊದಲು ‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಶೇ 50 ರಷ್ಟು ಮತ್ತು ಬಸ್ ಪ್ರಯಾಣ ದರವನ್ನು ಶೇ 15 ರಷ್ಟು ಏರಿಸಲಾಯಿತು. ನಂತರ, ಆಸ್ಪತ್ರೆಗಳಲ್ಲಿನ ಸೇವಾ ಶುಲ್ಕ (ಶೇ 5 ರಷ್ಟು) ಸೇರಿ ವಿವಿಧ ದರವನ್ನು ಹೆಚ್ಚಿಸಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಸರ್ಕಾರಿ ಕಾಲೇಜುಗಳ ಪ್ರವೇಶ ಶುಲ್ಕ ಶೇ 10ರಷ್ಟು, ಆಸ್ತಿ ತೆರಿಗೆ ಶೇ 25ರಷ್ಟು, ಬಿತ್ತನೆ ಬೀಜಗಳ ಬೆಲೆ ಶೇ 60ರಷ್ಟು, ಎಲೆಕ್ಟ್ರಿಕ್ ವಾಹನಗಳ ತೆರಿಗೆ ಶೇ 10ರಷ್ಟು, ಬಿಯರ್ ದರ ಶೇ 60ರಷ್ಟು, ಆಸ್ತಿ ನೋಂದಣಿ ಶುಲ್ಕ ಶೇ 600ರಷ್ಟು, ವಾಹನ ನೋಂದಣಿ ಶುಲ್ಕ ಶೇ 10ರಷ್ಟು ಏರಿಸಿರುವ ಸರ್ಕಾರ, ಈಗ ಹಾಲು–ಮೊಸರಿನ ಬೆಲೆಯನ್ನು ಲೀಟರ್‌ಗೆ ₹4 ಹೆಚ್ಚಿಸಿದೆ. ಟೋಲ್ ದರದಲ್ಲಿ ಶೇ 5ರಷ್ಟು, ವಿದ್ಯುತ್ ದರವನ್ನು ಪ್ರತಿ ಕಿಲೊ ವಾಟ್‌ಗೆ (ನಿಗದಿತ ಶುಲ್ಕ) ₹ 120ರಿಂದ ₹145ಕ್ಕೆ ಏರಿಸಲಾಗಿದೆ. ಈ ದರ ಏರಿಕೆಯ ಬಿಸಿ ತಟ್ಟದ ಶಾಸಕರು ಹಾಗೂ ಮಂತ್ರಿಗಳು ತಮ್ಮ ಸಂಬಳ ಮತ್ತು ಭತ್ಯೆಯನ್ನು ಶೇ 50 ರಷ್ಟು ಹೆಚ್ಚಿಸಿಕೊಂಡಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ತಮ್ಮ ಆದಾಯದಲ್ಲಿ ಏನೇನೂ ಹೆಚ್ಚಳ ಕಾಣದಿರುವ ಬಹುತೇಕ ಸಾಮಾನ್ಯರಿಗೆ ಈ ಬೆಲೆ ಏರಿಕೆಯ ಬಿಸಿ ತಾಳಲಾರದಾಗಿದೆ. ಹೀಗಾಗಿ, ರಾಜ್ಯ ಸರ್ಕಾರವು ಎಲ್ಲ ಅಗತ್ಯ ವಸ್ತುಗಳ ಬೆಲೆಯನ್ನು ಕೂಡಲೇ ಇಳಿಸಬೇಕು’ ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

‘ಸುಧಾ’ ಓದಿರಿ


ಗುರುದೇವ

ಡಿ.ಬಿ.ರಜಿಯಾ

ಗುರುದೇವ, ರಜಿಯಾಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2024ನೇ ಸಾಲಿನ ‘ಸತ್ಯವತಿ ವಿಜಯರಾಘವ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿಗಳ ದತ್ತಿ ಪ್ರಶಸ್ತಿ’ಗೆ ಕನ್ನಡ ಪರ ಹೋರಾಟಗಾರ ಗುರುದೇವ ನಾರಾಯಣ ಕುಮಾರ ಮತ್ತು ಲೇಖಕಿ ಡಿ.ಬಿ.ರಜಿಯಾ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿ ತಲಾ ₹10 ಸಾವಿರ ನಗದು ಒಳಗೊಂಡಿದೆ. ಮೈಸೂರಿನ ಎ.ಪುಷ್ಪ ಅಯ್ಯಂಗಾರ್ ಅವರು ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಕನ್ನಡ ನಾಡು–ನುಡಿ, ಜಲ ಕುರಿತ ಚಿಂತಕರು, ಹೋರಾಟಗಾರರು ಅಥವಾ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನುಪಮ ಸೇವೆ ಸಲ್ಲಿಸಿದ ಇಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ತಂದೆ ಜಿ.ನಾರಾಯಣ ಕುಮಾರ್ ಅವರ ಮಾರ್ಗದರ್ಶನದಲ್ಲಿ ಚಳವಳಿಗಳಲ್ಲಿ ಪಾಲ್ಗೊಂಡ ಗುರುದೇವ್ ಅವರು, ಕನ್ನಡಪರಹೋರಾಟಗಳಲ್ಲಿಮುಂಚೂಣಿಯಲ್ಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–1/ಟೆಂಡರ್ ಪ್ರಕಟಣೆ ಸಂ.01/2025–26 ದಿನಾಂಕ: 02.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ: 4702–ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-2 & 3 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 02 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.40.34 (ಕನಿಷ್ಠ) & ರೂ.70.45 (ಗರಿಷ್ಠ)** ಇಎಂಡಿ: **ರೂ.80,700/– (ಕನಿಷ್ಠ) & ರೂ.1,41,000/– (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 06 ತಿಂಗಳು ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **02.04.2025 ಮಧ್ಯಾಹ್ನ 13.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **09.04.2025 ಮಧ್ಯಾಹ್ನ 13.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09.04.2025 ಮಧ್ಯಾಹ್ನ 13.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **11.04.2025 ಬೆಳಗ್ಗೆ 11.30** ಗಂಟೆಯವರೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ–2 & 3 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/25/ಎಸ್ಎಸ್‌ಸಿ/2025–26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP//ಭೂ.ಪ–ಆನ್‌ಲೈನ್/108/2024–25 ದಿನಾಂಕ: 18.03.2025.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಶ್ರೀ ಎಸ್.ಟಿ ಪೌಲ್ಸ್ ಪ್ರಾವಿನ್ಸ್ ಮೈಸೂರ್., ರವರು ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಶೆಟ್ಟೇರಹಳ್ಳಿ ಗ್ರಾಮದ ಸರ್ವೆ ನಂ.132ರಲ್ಲಿ 1–00ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಲ್ಲಿ **‘ಶೈಕ್ಷಣಿಕ ಸಂಸ್ಥೆ’** ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಎಲ್.ಆರ್.ಡಿ.ಇ, ಕಟ್ಟಡ, ನಂ.01, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/35/ಆಕಾರ್/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂ: ಕರಾಸಾ/ರಾನವಿ/ಸಂ/ವಾ/3066/3067/3068/24–25 ದಿನಾಂಕ: 28.03.2025

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 10 & ಸಂಧಾನ ಪ್ರಕಟಣೆ ಸಂಖ್ಯೆ: 11 & 12/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ, ಇವರು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ದೊಡ್ಡಮರಳವಾಡಿ, ಆನೇಕಲ್, ಕನಕಪುರ, ಕೋಡಿಹಳ್ಳಿ ಹಾಗೂ ಮಾಗಡಿ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ /ದ್ವಿಚಕ್ರ ಹಾಗೂ ಕಾರುಗಳ ನಿಲುಗಡೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ **ದಿ: 22.04.2025 ರಂದು 15:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ: 29.03.2025 ರಿಂದ ದಿನಾಂಕ: 21.04.2025ರ 15:00 ಗಂಟೆಗಳವರೆಗೆ** ಪಡೆಯಬಹುದು. ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಹಾರೋಹಳ್ಳಿ, ಆನೇಕಲ್, ಮಾಗಡಿ ಹಾಗೂ ಕೋಡಿಹಳ್ಳಿ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿ:25.04.2025 ರಂದು 11.00 ಗಂಟೆಗೆ** ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. **ದಿ:31.03.2025ರಿಂದ** ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ: 21.04.2025 ರಂದು 17.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ ಮೊಬೈಲ್ ಸಂಖ್ಯೆ: 7760990852.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ.

ವಾಸಾಸಂಇ/ವಾ.ಪ್ರ/039/ಎಂಎಎ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ&ಕ್ಯೂಸಿ) ವಿಭಾಗ, ದಾಸರಹಳ್ಳಿ ವಲಯ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು– 560 002.

ಸಂಖ್ಯೆ:ಕಾಪಾಅ(ಕ್ಯೂಎ&ಕ್ಯೂಸಿ)/ದಾಸರಹಳ್ಳಿ/ಟೆಂಡರ್/02/2025–26 ದಿನಾಂಕ:02.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ) (2ನೇ ಕರೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃ.ಬೆಂ.ಮ.ಪಾ), ಇವರು ಈ ಕೆಳಕಂಡ ಕಾಮಗಾರಿಗಳಿಗೆ ತದ್ರೂಪಿ ಕೆಲಸಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿ/ಸಂಸ್ಥೆಗಳಿಂದ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸಲು ಪ್ರಸ್ತಾವನೆ ಕೋರಿಕೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ದಾಸರಹಳ್ಳಿ ವಲಯದ ದಾಸರಹಳ್ಳಿ ಕ್ಷೇತ್ರದ ವಿವಿಧ ಪ್ರದೇಶಗಳಲ್ಲಿ ಬೃಹತ್ ನೀರು ಕಾಲುವೆಗಳಿಗೆ ಯು ಆಕಾರದ ಚರಂಡಿಗಳು, ಚೌಕಾಕೃತಿ ಚರಂಡಿ ಮತ್ತು ಕಲ್ವರ್ಟ್/ಸೇತುವೆಗಳನ್ನು ನಿರ್ಮಾಣ ಮಾಡಲು ಕಿರಿದಾದ ನೀರಿನ ವೆಂಟ್‌ಗಳನ್ನು ವಿಸ್ತರಣೆ/ಅಗಲೀಕರಣ ಮಾಡುವ ಕಾಮಗಾರಿಗಾಗಿ ಉಸ್ತುವಾರಿ ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು. ಪ್ಯಾಕೇಜ್ ದಾಹವ–01 (ಯೋಜನೆ ಸಂ.16, 17, 18 & 19) 2ನೇ ಕರೆ ಯೋಜನೆಯ ಮೊತ್ತ: ₹ 179.20 ಲಕ್ಷಗಳು, ಇಎಂಡಿ ಮೊತ್ತ: ₹ 4,480/–

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **03.04.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ **07.04.2025**ರ ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **15.04.2025**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **16.04.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
(ಕ್ಯೂಎ&ಕ್ಯೂಸಿ) ವಿಭಾಗ, ದಾಸರಹಳ್ಳಿ ವಲಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬೃಬೆಂಮಪಾ/ಮುಖ್ಯಆಯುಕ್ತರು/ಪಿಎಸ್‌ಆರ್(ಜಿ)/22/2025–2026 **ನಮೂನೆ–3** (ನಿಯಮ–3 ರ ಉಪ–ನಿಯಮ (3) ನೋಡಿ) ದಿನಾಂಕ: 02–04–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಅನುಮೋದಿತ ಮಹಾಯೋಜನೆ 2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಮಾರಗೊಂಡನಹಳ್ಳಿ, ಚನ್ನಸಂದ್ರ, ಕಲ್ಕೆರೆ, (ಹೊರಮಾವು ಜಂಕ್ಷನ್) ಮೂಲಕ ಕಲ್ಕೆರೆ ರಸ್ತೆ, ಕಿತ್ತಗನೂರು ಯಿಂದ ಹೊರವರ್ತುಲ ರಸ್ತೆಯ ಅಗಲೀಕರಣ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶವು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013 ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ / ಒಪ್ಪಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು : **ಬೆಂಗಳೂರು ನಗರ** ತಾಲ್ಲೂಕಿನ ಹೆಸರು : **ಬೆಂಗಳೂರು ಪೂರ್ವ** ಗ್ರಾಮದ ಹೆಸರು : **ಮಾರಗೊಂಡನಹಳ್ಳಿ**

Sl. No.	Sy.No/ Khatha No.	Type of Land		Nature of Land			Dimension of the Land / Plot & Extent in Sq.m		Boundaries of the Land / Plot				Building Details			Present Activity on Land / Building (Specify Specific activity such as Shop, Office, Factory, Apartment, Individual House etc.,	Market (guide -lines) value of the land Per Sq.m	Name and address of the owner of the Plot / Land for which DRC is to be issued
		Vacant	Built up	Agriculture	Converted undeveloped	Approved Layout / Developed Land Building Site	Dimension	Extent	North	South	East	West	Extent in Sq.m	Type of Construction and No. of Floors	Floor Area Ratio			
1	Sy. No. 63 Khatha No. 3644/63/65/1A	Vacant Land / Building		Agriculture Land			1574.35 Sqm		Remaining Land of Khatha No. 3644/63/65/1A	Road	Sy.No. 62	Road	None	None	None	Vacant	6,177/-	1) Sri R.S. Shazi Ulla Khan S/o. Late Shafee Ulla Khan, Residing at: 17/18, 14th Cross, Hennuru Gordan, Vaddara Palya, Hennuru Bande, Bengaluru - 560043.

Note: 1. In the Dimension of the land / plot and extent Column of the area is mentioned based on Hon'ble High Court of Karnataka in WP No: 8270/2021 Dated: 05.04.2022. and the Executed Relinquishment of Deed Dated: 12.04.2016 in the office of the Sub Register Shivajinagara.
2. This Notification issued under the Subject to the Condition of Review Petition on the Order of Hon'ble Supreme Court of Special Leave to Appeal (C) No. 21853/ 2022 and Connected Cases.
3. The area of Building as per Relinquishment Deed of 1511.35 Sq.m is included in land Area.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ–ವಿಭಾಗ / ಶಾಖೆ ಕಛೇರಿ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ. 208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ. ಪಾಲಿಕೆ, ಬೆಂಗಳೂರು – 560002

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕ.ನ.ನೀ.ಸ ಮತ್ತು ಒ.ಚ. ಮಂಡಳಿ ವಿಭಾಗ, “ಜಲಭವನ, 3ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029

ಟೆಂಡರ್ ಅಧಿಸೂಚನೆ (ಕೆಪಿಪಿಪಿ ಪೋರ್ಟಲ್ ಮೂಲಕ)

No. KWB/EE/BNG/TA/AE-3/NAG-HEB/01/2025-26 Dtd : 01.04.2025

ಕಾಮಗಾರಿಯ ವಿವರ : ಹೆಬ್ಬಗೋಡಿ ನಗರಸಭೆ ಶೇವಣಿ ಕೊಡುಗೆ ಆಧಾರದಡಿ ನಗರಸಭೆ ವ್ಯಾಪ್ತಿಯಲ್ಲಿ 6 ಸಂಖ್ಯೆ ಮೇಲ್ಮಟ್ಟದ ಸಂಗ್ರಹಗಾರಗಳನ್ನು ತೆರವುಗೊಳಿಸುವ ಕಾಮಗಾರಿ. ಇಂಡೆಂಟ್ ನಂ. **KUWSDB/2025-26/WS/WORK_INDENT333**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದು. .

ಸಹಿ/–ಕಾರ್ಯಪಾಲಕ ಅಭಿಯಂತರರು
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ವಿಭಾಗ, ಬೆಂಗಳೂರು

DIPR/CP/YC/20/2025-26

ಅಪರ ನಿರ್ದೇಶಕರ ಕಾರ್ಯಾಲಯ,

ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆ, ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01.

ಸಂಖ್ಯೆ:ಖ.ಅನಿ/ರಾ.ಪಿಂ.ಪಾ&ನಿ.ಖ/ಸಿಆ/01/2023–24 ದಿನಾಂಕ:29.03.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ 2025–26ರ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಸೇವೆಯನ್ನು ಮೇ 2025ರಿಂದ ನೀಡಲು ಅರ್ಹರ/ ಮಾನ್ಯತೆ ಪಡೆದಿರುವ ಬಿಡ್ಡುದಾರರಿಂದ / ಸಂಸ್ಥೆಗಳಿಂದ ದ್ವಿ–ಲಕೋಟೆಯ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1. **ಡಾಟಾ ಅನಾಲಿಸ್ಟ್–2,**
2. **ಡಾಟಾ ಎಂಟ್ರಿ ಆಪರೇಟರ್–4.**

ನಿಬಂಧನೆಗಳು ಹಾಗೂ ಷರತ್ತುಗಳಿಗೆ ಗಣಕ ಜಾಲತಾಣ **https://www.kppp.karnataka.gov.in** ನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. **ದೂರವಾಣಿ ಸಂಖ್ಯೆ: 080–22215073.**

ಸಹಿ/– ಉಪ ನಿರ್ದೇಶಕರು,
ಅಪರ ನಿರ್ದೇಶಕರ ಕಾರ್ಯಾಲಯ,
ರಾಜ್ಯ ಪಿಂಚಣಿ ಪಾವತಿ ಮತ್ತು ನಿರ್ವಹಣಾ ಖಜಾನೆ, ಬೆಂಗಳೂರು.

ವಾಸಸಂಇ/ಸಿಪಿ/ಎಎಎ/40/2024–25

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/71/2025
ದಿನಾಂಕ : 17–02–2025ಗೆ ತಿದ್ದುಪಡಿ

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು ಮತ್ತು ಮೈಸೂರು ಪ್ರದೇಶದಲ್ಲಿ ಹಲವಾರು ಉಪ ಮುಖ್ಯ ಇಂಜಿನಿಯರುಗಳ ವ್ಯಾಪ್ತಿಯಲ್ಲಿನ ವಿವಿಧ ನಿರ್ಮಾಣ ಸ್ಥಳಗಳು / ಸೆಕ್ಷನ್‌ಗಳಲ್ಲಿ ಯೋಜನಾ ಮೇಲ್ವಿಚಾರಣೆ ಸೇವೆಗಳನ್ನು ಒದಗಿಸುವುದಕ್ಕಾಗಿ ಯೋಜನಾ ನಿರ್ವಹಣೆ ಸೇವೆ ಏಜೆನ್ಸಿ (ಪಿಎಸ್‌ಎಸ್‌ಎ) ನೇಮಕಾತಿ. **(ಟೆಂಡರ್ ಉಲ್ಲೇಖ ಸಂ. ಪಿಎಸ್‌ಎಸ್‌ಎ–ಬಿಎನ್‌ಸಿ–ಎಂವೈಎಸ್)**	ರೂ. 27,63,34,528/-

ಮುಕ್ತಾಯದ ದಿನಾಂಕ	
ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
31–03–2025 (15:00 ಗಂಟೆಗಳು)	**15–04–2025 (15:00 ಗಂಟೆಗಳು)**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/879/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಎಕ್ಸ್‌ಟಿಎಲ್‌ಐಜಿಹೆಚ್‌ಟಿ_ಪಿಆರ್‌ಓಟಿಎಸ್‌ಯುಆರ್‌ಜಿಇ_ಹೆಚ್‌ಓಎಸ್‌ಯುಆರ್ ದಿನಾಂಕ : 26–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ – ಬೆಂಗಳೂರು ವಿಭಾಗ – ಬೆಂಗಳೂರು ವಿಭಾಗದ ಹೊಸೂರು ನಿಲ್ದಾಣದಲ್ಲಿ ಐಎಸ್/ಐಇಸಿ62305 ಮತ್ತು ಎನ್‌ಬಿಸಿ 2016 ಅನುಸಾರವಾಗಿ ಹೊರಾಂಗಣ ಲೈಟಿಂಗ್ ರಕ್ಷಣೆ ಮತ್ತು ಸರ್ಜ್ ಅರೆಸ್ಟರ್ ಒದಗಿಸುವುದು.	ರೂ. 17,19,246/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **17–04–2025 ರಂದು 14:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಬೆಂಗಳೂರು

ಪಿಯುಬಿ/883/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR SWRRLY SWRRLY

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-338/24/2024–25 ದಿನಾಂಕ:02/04/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋ– ರಿರುವ ಭೂ ಉಪಯೋಗ:
1	ಶ್ರೀ ಸೋಮಶೇಖರ್	ಬೆಂಗಳೂರು ದಕ್ಷಿಣ	ಕೆಂಗೇರಿ	ರಾಮೋಹಳ್ಳಿ	34/5	0–27.25	ವ್ಯವಸಾಯ	ವಸತಿ
2					34/8	0–7.50		
3					34/9	0–5.25		
4					34/10	0–10		
5					34/11	0–05		
6					34/12	0–10		
7					34/13	0–20		
8					34/14	0–15		
					ಒಟ್ಟು	2–20		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ’ ವಲಯದಿಂದ ‘ವಸತಿ’ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 45 ಯುಬಿಎಲ್ 2024–25
ದಿನಾಂಕ : 26–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಬೈಲುವದ್ದಿಗೇರಿ, ಮುನಿರಾಬಾದ್, ಕೊಪ್ಪಳ, ಗಿಣಿಗೇರಾ, ಭಾಣಾಪುರ, ಕಣಗಿನಹಾಳ, ಬಿಂಕದಕಟ್ಟಿ, ಹುಲಕೋಟಿ, ಅಣ್ಣಿಗೇರಿ, ಹೆಬಸೂರ, ಕುಸುಗಲ್, ಬಮ್ಮಾಪುರ, ಭೈರೀದೇವರಕೊಪ್ಪ, ಕ್ಯಾರಕೊಪ್ಪ, ಮುಗದ್, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಮಲ್ಲಾಪೂರ, ಹೊಳೆಆಲೂರು, ಮುಗಳಳ್ಳಿ ಹಾಲ್ಟ್ ಮತ್ತು ಆಲಮಟ್ಟಿ 21 ನಿಲ್ದಾಣಗಳಲ್ಲಿ ಎಸ್‌ಎಂ ರೆಸ್ಟ್ ರೂಮ್‌ಗಳನ್ನು ಒದಗಿಸುವುದು	ರೂ. 1,94,95,621/–
2	ಹುಬ್ಬಳ್ಳಿ ವಿಭಾಗ : ತಾವರಗಟ್ಟಿ, ಶಿವಥಾಣ, ದೂಧ್‌ಸಾಗರ, ಕರನ್‌ಜೋಲ್, ಸೊನಾಲಿಯಂ, ತಡವಾಳ, ಹೊಂಬಳ, ವ್ಯಾಸ ಕಾಲೋನಿ, ಕಂಬಾರಗಣವಿ, ಹರ್ಲಾಪುರ, ಸೊಂಪುರ ರೋಡ್, ಬನ್ನಿಕೊಪ್ಪ ಇಲ್ಲಿ ಶೌಚಾಲಯ ಸೌಲಭ್ಯದೊಂದಿಗೆ 4 ಮೀ. x 5 ಮೀ.ನ ಸ್ಟೇಷನ್ ಮಾಸ್ಟರ್‌ರ ರೆಸ್ಟ್ ರೂಮ್‌ನ್ನು ಒದಗಿಸುವುದು.	ರೂ. 1,32,31,434/–
3	ಹುಬ್ಬಳ್ಳಿ ವಿಭಾಗ : ಹಿರಿಯ ಡಿಇಎನ್/ಸೆಂಟ್ರಲ್/ಯುಬಿಎಲ್ ವ್ಯಾಪ್ತಿಯಲ್ಲಿನ ಹೊಂಬಳ ಡಿಪೋದಲ್ಲಿ ಬಲ್ಲಾಸ್ಟ್‌ನ ಸರಬರಾಜು **(ನೋಟ್ ಬಲ್ಲಾಸ್ಟ್ ಪ್ರಮಾಣಪತ್ರ)**	ರೂ. 4,81,02,000/–
4	ಹುಬ್ಬಳ್ಳಿ ವಿಭಾಗ : ನವಲೂರು ಯಾರ್ಡ್ : ನವಲೂರು ಯಾರ್ಡ್‌ನಲ್ಲಿ ಶಾರ್ಟ್ ಶಂಟಿಂಗ್ ನೆಕ್‌ನ 80ಮೀ.ಗೆ ಉದ್ದೇಶಿತ ವಿಸ್ತರಣೆ.	ರೂ. 34,18,575/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24–04–2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ

ಪಿಯುಬಿ/882/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR SWRRLY SWRRLY

ಪತ್ನಿ ಕೊಂದು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟಿದ್ದ ಪ್ರಕರಣ ● ಆರೋಪಿ ಹೇಳಿಕೆ

‘ಹೊಂದಾಣಿಕೆ ಸಮಸ್ಯೆ, ನಿತ್ಯ ಗಲಾಟೆ’

ಪ್ರಜಾವಾಣಿ ವಾರ್ತೆ

ರಾಕೇಶ್

ಗೌರಿ

ಅಪರಾಧ ಸುದ್ದಿಗಳು

ಬೆಂಗಳೂರು: ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡ ಕಮ್ಮನಹಳ್ಳಿಯಲ್ಲಿ ನಡೆದಿದ್ದ ಗೌರಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ರಾಕೇಶ್‌ನನ್ನು ಆರು ದಿನ ತಮ್ಮ ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು ವಿಚಾರಣೆ ತೀವ್ರಗೊಳಿಸಿದ್ದಾರೆ.

ಕೊಲೆಯಾದ ಗೌರಿ ಅವರ ಪತಿ ರಾಕೇಶ್‌ನನ್ನು ಬೆಂಗಳೂರು ಪೊಲೀಸರು ಪುಣೆಯಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ.

‘ಗೌರಿ ನಡವಳಿಕೆಯಿಂದ ಬೇಸರಗೊಂಡು ಕೊಲೆ ಮಾಡಿದ್ದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗೌರಿ ಅವರ ತಂದೆ ಬೆಳಗಾವಿಯವರು. ಗೌರಿ ಅವರಿಗೆ ಐದು ವರ್ಷವಿದ್ದಾಗ ಅವರ ತಂದೆ ಮೃತಪಟ್ಟಿದ್ದರು. ನಂತರ, ಇಡೀ ಕುಟುಂಬ ಮಹಾರಾಷ್ಟ್ರದಲ್ಲಿ ನೆಲಸಿತ್ತು. ಆಕೆಯನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದೆ. ಗೌರಿ ಅವರ ತಾಯಿ ಹಾಗೂ ತಮ್ಮ, ಮದುವೆಗೆ ವಿರೋಧಿಸಿದ್ದರು ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಗೊತ್ತಾಗಿದೆ.

‘ಮದುವೆಯಾದ ಆರಂಭದ ದಿನಗಳಲ್ಲೇ ನನ್ನ ಕುಟುಂಬದವರ ಜತೆಗೆ ಗೌರಿಗೆ ಹೊಂದಿಕೊಳ್ಳದೇ ಗಲಾಟೆ ಮಾಡುತ್ತಿದ್ದಳು. ಆರಂಭದಲ್ಲಿ ಮಹಾರಾಷ್ಟ್ರದಲ್ಲಿ ನೆಲಸಿದ್ದೆವು. ಬೆಂಗಳೂರಿಗೆ ಹೋಗಿ ಅಲ್ಲಿ ಕೆಲಸ ಮಾಡೋಣ ಎಂದು ಪದೇ ಪದೇ ಹೇಳುತ್ತಿದ್ದಳು. ಒಂದೂವರೆ ತಿಂಗಳ ಹಿಂದಷ್ಟೇ ಬೆಂಗಳೂರಿಗೆ ಬಂದು ದೊಡ್ಡ ಕಮ್ಮನಹಳ್ಳಿಯ ಬಾಡಿಗೆ ಮನೆ ಪಡೆದು ನೆಲಸಿದ್ದೆವು. ಆಕೆಗೆ ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಕೆಲಸ ಹುಡುಕಲು ಪತ್ನಿಗೆ ಸಹಾಯ ಮಾಡಿದ್ದೆ. ಆದರೂ ತನಗೆ ಸಹಾಯ ಮಾಡಿಲ್ಲ ಎಂಬುದಾಗಿ ಹೇಳಿ ಪದೇ ಪದೇ ಗಲಾಟೆ ಮಾಡುತ್ತಿದ್ದಳು ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

‘ನಾನು ಮನೆಯಿಂದಲೇ ಕಂಪನಿಯ ಕೆಲಸ ಮಾಡುತ್ತಿದ್ದೆ. ಮಾರ್ಚ್ 26ರಂದು ಗಲಾಟೆ ನಡೆದಿತ್ತು. ಪತ್ನಿ ಚಾಕುವಿನಿಂದ ಹಲ್ಲೆ ನಡೆಸಿದ್ದಳು. ನನ್ನ ಕುತ್ತಿಗೆಗೆ ಚಾಕು ಬಿದ್ದು, ಗಾಯವಾಗಿತ್ತು. ನಂತರ, ಅದೇ ಚಾಕು ತೆಗೆದುಕೊಂಡು ಸ್ವಯಂ ರಕ್ಷಣೆಗೆ ಆಕೆಗೆ ಚುಚ್ಚಿ ಕೊಲೆ ಮಾಡಿದೆ. ಕೊಲೆ ಮಾಡಿದ ಬಳಿಕ ಮೃತದೇಹವನ್ನು ಹೊರಕ್ಕೆ ಸಾಗಣೆ ಮಾಡಲು ಪ್ರಯತ್ನಿಸಿದ್ದೆ. ಅದು ಸಾಧ್ಯವಾಗದೇ ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟು ಪುಣೆಗೆ ಪರಾರಿ ಆಗಿದ್ದೆ. ಅಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದೆ’ ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ ಎಂದು ಗೊತ್ತಾಗಿದೆ.

ಪತ್ನಿ, ಮಕ್ಕಳ ಕೊಂದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಬ್ಬರು ಮಕ್ಕಳು, ಪತ್ನಿಯನ್ನು ಕೊಂದ ವ್ಯಕ್ತಿಯೊಬ್ಬರು ತಾವೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ತಡರಾತ್ರಿ ನಡೆದಿದೆ.

ನಗರದ ಹಳೇ ಜೇವರ್ಗಿ ರಸ್ತೆಯ ಗಾಬರೆ ಲೇಔಟ್‌ನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಈ ಘಟನೆ ನಡೆದಿದೆ. ಆತ್ಮಹತ್ಯೆಗೂ ಮುನ್ನ ಸಂತೋಷ್ ಕೊರಳಿ (45) ಅವರು ಪತ್ನಿ ಶೃತಿ (35), ಮಕ್ಕಳಾದ ಮುನಿಶ್ (9) ಹಾಗೂ ಮೂರು ತಿಂಗಳ ಮಗು ಅನಿಶ್‌ನನ್ನು ಕೊಲೆ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂತೋಷ್ ಅವರು ಜೆಸ್ಕಾಂನಲ್ಲಿ ಹಿರಿಯ ಸಹಾಯಕ ಲೆಕ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ಮುಖ್ಯಾಂಶಗಳು

- ಜೆಸ್ಕಾಂನ ಹಿರಿಯ ಸಹಾಯಕ ಲೆಕ್ಕಾಧಿಕಾರಿ ಆಗಿದ್ದರು
- 10 ವರ್ಷದ ಹಿಂದೆ ಮದುವೆ
- ಬಂಧುಗಳ ಸಂಪರ್ಕ ಇರಲಿಲ್ಲ

‘ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿ ಹಾಗೂ ಮಕ್ಕಳನ್ನು ಕತ್ತು ಹಿಸುಕಿ ಕೊಲೆ ಮಾಡಿರಬಹುದು. ನಂತರ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜತೆಗೆ ಡೆತ್ ನೋಟ್ ಸಹ ಬರೆದಿಟ್ಟಿದ್ದಾರೆ’ ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರು ಸ್ಥಳ ಪರಿಶೀಲಿಸಿದ ನಂತರ ಮಾಧ್ಯಮದವರಿಗೆ ತಿಳಿಸಿದರು.

‘ಸಂತೋಷ ಹಾಗೂ ಶೃತಿ 10 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿ ನಡುವೆ ಪದೇ ಪದೇ ಗಲಾಟೆ ಆಗುತ್ತಿತ್ತು. ಏಳು ವರ್ಷಗಳಿಂದ ಎರಡೂ ಕುಟುಂಬದವರ ಪಾಲಕರ ಹಾಗೂ ಸಂಬಂಧಿಕರ ಜತೆಗೆ ಕುಟುಂಬ ಸಂಪರ್ಕ ಹೊಂದಿರಲಿಲ್ಲ. ಬುಧವಾರ ಸಂತೋಷ ಅವರು ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದಂತೆ ಮತ್ತೆ ಗಲಾಟೆಯಾಗಿದೆ. ಕೌಟುಂಬಿಕ ಕಲಹಕ್ಕೆ ಈ ದುರಂತ ನಡೆದಿರಬಹುದು ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ತನಿಖೆ ಬಳಿಕ ಸತ್ಯಾಸತ್ಯತೆ ಗೊತ್ತಾಗಲಿದೆ’ ಎಂದು ತಿಳಿಸಿದರು.

ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಖಗವಸು ಹಾಕಿಕೊಂಡು ದಾಳಿ: ನಗ್ನಗೊಳಿಸಿ ಹಲ್ಲೆ

ಬೆಂಗಳೂರು: ಇಸ್ಪೀಟ್ ಆಡುತ್ತಿದ್ದ ಕೊಠಡಿಯ ಮೇಲೆ ಅಪರಿಚಿತರ ಗುಂಪು ದಾಳಿ ನಡೆಸಿ, ಕೊಠಡಿಯಲ್ಲಿ ಇದ್ದವರನ್ನು ನಗ್ನಗೊಳಿಸಿ ನಗದು ಹಾಗೂ ಚಿನ್ನಾಭರಣ ದೋಚಿ ಆರೋಪಿಗಳು ಪರಾರಿಯಾದ ಘಟನೆ ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬನಶಂಕರಿ ನಿವಾಸಿ ಟಿ.ರಮೇಶ್ (58) ಅವರು ನೀಡಿದ ದೂರು ಆಧರಿಸಿ ಆರು ಮಂದಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಪತ್ತೆಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

‘ದೂರುದಾರರು, ಮನೆಯನ್ನು ಬಾಡಿಗೆಗೆ ಕೊಡಿಸುವ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಗೆಳೆಯರಾದ ಮುರಳಿ, ಉಮಾಶಂಕರ್, ತಿಮ್ಮಣ್ಣ, ಕಿರಣ್, ಪುಟ್ಟಸ್ವಾಮಿ, ಬಾಬು ರೆಡ್ಡಿ, ನಾಗರಾಜ್, ಆನಂದ್, ಬೆಟ್ಟೇಗೌಡ, ರವಿಕುಮಾರ್, ಶೇಖರ್ ಹಾಗೂ ಗುಂಡು ಅವರ ಜತೆಗೆ ದೂರುದಾರರು ಬನಶಂಕರಿ ಎರಡನೇ ಹಂತದ 9ನೇ ಮುಖ್ಯರಸ್ತೆಯ ಬಿವಿಕೆ ಕ್ಲಬ್‌ಗೆ ಯುಗಾದಿ ಹಬ್ಬದಂದು ತೆರಳಿದ್ದರು. ಮದ್ಯ ಸೇವಿಸಿ ಎರಡನೇ ಮಹಡಿಯ 201ನೇ ಕೊಠಡಿಯಲ್ಲಿ ಇಸ್ಪೀಟ್ ಆಡುತ್ತಿದ್ದರು. ಅಂದು ಸಂಜೆ 6 ಗಂಟೆ ಸುಮಾರಿಗೆ 20ರಿಂದ 25 ವರ್ಷ ಒಳಗಿನ ಆರು ಮಂದಿಯ ತಂಡವು ಮುಖಗವಸು ಹಾಗೂ ಟೋಪಿ ಧರಿಸಿಕೊಂಡು ಬಂದು ದಾಳಿ ನಡೆಸಿತ್ತು. ಮಾರಕಾಸ್ತ್ರದ ಜತೆಗೆ ಬಂದಿದ್ದ ಆರೋಪಿಗಳು, ‘ಎಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನೇ ಇರಬೇಕು’ ಎಂದು ಎಚ್ಚರಿಸಿ ಹಲ್ಲೆ ನಡೆಸಿದರು. ಕೊಠಡಿಯಲ್ಲಿ ಇದ್ದವರ ಬಟ್ಟೆ ಬಿಚ್ಚಿಸಿ, ₹10 ಲಕ್ಷ ನಗದು ಹಾಗೂ 700 ಗ್ರಾಂ ಚಿನ್ನಾಭರಣವನ್ನು ದೋಚಿ ಪರಾರಿ ಆಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಜ್ಯೂಸ್ ಎಂದುಕೊಂಡು ರಾಸಾಯನಿಕ ಸೇವಿಸಿ ಬಾಲಕಿ ಸಾವು

ಬೆಂಗಳೂರು: ಜ್ಯೂಸ್ ಬಾಟಲಿಯಲ್ಲಿ ತುಂಬಿಟ್ಟಿದ್ದ ರಾಸಾಯನಿಕ ಕುಡಿದು, 14 ವರ್ಷದ ಬಾಲಕಿ ಮೃತಪಟ್ಟ ಘಟನೆ ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ದೀಪಾಂಜಲಿ ನಗರದಲ್ಲಿ ನಡೆದಿದೆ.

ನಿಧಿ ಕೃಷ್ಣ ಮೃತ ಬಾಲಕಿ.

‘ಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದ ನಿಧಿ ಕೃಷ್ಣ ಆರೋಗ್ಯಕ್ಕಾಗಿ ಅಲೋವೆರಾ ಜ್ಯೂಸ್ ಕುಡಿಯುತ್ತಿದ್ದಳು. ಬಾಟಲಿಯಲ್ಲಿದ್ದ ಅಲೋವೆರಾ ಜ್ಯೂಸ್ ಖಾಲಿ ಆಗಿತ್ತು. ಅದೇ ಬಾಟಲಿಯಲ್ಲಿ ಗಿಡಗಳಿಗೆ ಸಿಂಪಡಣೆ ಮಾಡುವ ರಾಸಾಯನಿಕವನ್ನು ಮನೆಯವರು ತುಂಬಿಟ್ಟಿದ್ದರು. ಅದನ್ನು ತಿಳಿಯದೆ ಜ್ಯೂಸ್ ಎಂದು ಭಾವಿಸಿ ರಾಸಾಯನಿಕವನ್ನು ಬಾಲಕಿ ಕುಡಿದಿದ್ದಳು. ಮಾರ್ಚ್ 14ರಂದು ಘಟನೆ ನಡೆದಿತ್ತು. ಅಸ್ವಸ್ಥವಾಗಿದ್ದ ಬಾಲಕಿಯನ್ನು ಮನೆಯವರು ಆಸ್ಪತ್ರೆಗೆ ದಾಖಲಿಸಿದ್ದರು. ಎರಡು ದಿನಗಳ ಹಿಂದೆ ಬಾಲಕಿ ಮೃತಪಟ್ಟಿದ್ದಾಳೆ’ ಎಂದು ಮೂಲಗಳು ತಿಳಿಸಿವೆ.

‘ಘಟನೆ ನಡೆದ ಸಂದರ್ಭದಲ್ಲಿ ತಾಯಿ ಮನೆಯಲ್ಲೇ ಇದ್ದರು. ತಂದೆ ಕೆಲಸಕ್ಕೆ ತೆರಳಿದ್ದರು. ಘಟನೆ ಕುರಿತು ಅವರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವಿಧಾನಸೌಧದ ಎದುರು ವಿಷ ಕುಡಿಯಲು ಯುವಕ ಯತ್ನ

ವಿಷ ಕುಡಿಯಲು ಯತ್ನಿಸಿದ ಯುವಕನನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು

ಬೆಂಗಳೂರು: ವಿಧಾನಸೌಧದ ಎದುರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಚನ್ನರಾಯಪಟ್ಟಣದ ಸಂಜಯ್ ಅವರನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದುಕೊಂಡರು.

‘ಮುಖಗವಸು ಧರಿಸಿ ಬುಧವಾರ ಸಂಜೆ ವಿಧಾನಸೌಧ ಎದುರು ಬಂದಿದ್ದ ಯುವಕ, ಬಾಟಲ್‌ವೊಂದನ್ನು ತಂದಿದ್ದ. ಅದರಲ್ಲಿ ವಿಷ ತಂದಿರುವುದಾಗಿ ಹೇಳಿದ್ದಾನೆ. ಕೆಲವು ದಾಖಲೆಗಳನ್ನೂ ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟುಕೊಂಡಿದ್ದ. ವಿಧಾನಸೌಧ ಎದುರು ಬಂದವನೇ ವಿಷ ಕುಡಿದು ಇಲ್ಲೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದ. ತಕ್ಷಣವೇ ಪ್ಲಾಸ್ಟಿಕ್ ಕವರ್ ಕಸಿದುಕೊಂಡು ಯುವಕನನ್ನು ವಶಕ್ಕೆ ಪಡೆದುಕೊಳ್ಳಲಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಚನ್ನರಾಯಪಟ್ಟಣದ ಪೊಲೀಸರು ನನಗೆ ಮೋಸ ಮಾಡಿದ್ದಾರೆ. ನನಗೆ ನ್ಯಾಯ ಬೇಕು ಎಂದು ಹೇಳುತ್ತಾ ವಿಷಯ ಕುಡಿಯಲು ಯತ್ನಿಸಿದ. ವಶಕ್ಕೆ ಪಡೆದುಕೊಂಡು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಚಿಕಿತ್ಸೆ ಕೊಡಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ 143ನೇ ಜನ್ಮದಿನದ ನಿಮಿತ್ತ ಕನ್ನಡ ಸಂಘರ್ಷ ಸಮಿತಿ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಪ್ರಾಧ್ಯಾಪಕ ಬಿ.ಸಿ.ರಾಜಕುಮಾರ್, ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸಮಿತಿಯ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ, ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ಅವರು ಎಂ. ಗೋವಿಂದ ಪೈ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ನರ್ಸಿಂಗ್ ಪದವಿ ಪ್ರದಾನ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇಂಟ್ ಜಾನ್ಸ್ ಕಾಲೇಜ್ ಆಫ್ ನರ್ಸಿಂಗ್‌ನ 42ನೇ ವಾರ್ಷಿಕ ಪ್ರದವಿ ಪ್ರದಾನ ಸಮಾರಂಭದಲ್ಲಿ 225 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಇತ್ತೀಚೆಗೆ ನಡೆದ ಸಮಾರಂಭದಲ್ಲಿ 75 ಜಿಎನ್‌ಎಂ ನರ್ಸಿಂಗ್, 101 ಬಿ.ಎಸ್ಸಿ ನರ್ಸಿಂಗ್, 28 ಪೋಸ್ಟ್–ಬೇಸಿಕ್ ಬಿ.ಎಸ್ಸಿ ನರ್ಸಿಂಗ್ ಮತ್ತು 22 ಎಂ.ಎಸ್ಸಿ ಪದವಿಗಳನ್ನು ಪ್ರದಾನ ಮಾಡಲಾಯಿತು.

ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಬಿ.ಎಲ್. ಸುಜಾತಾ ರಾಥೋಡ್, ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸಸ್‌ನ ನಿರ್ದೇಶಕ ಫಾದರ್ ಜೇಸುದಾಸ್ ರಾಜಮಾಣಿಕ್ಯಂ, ಸಹಾಯಕ ನಿರ್ದೇಶಕ ಫಾದರ್ ಎ.ಜೆ. ಟೋನಿ ಇದ್ದರು.

ಕಾಣೆಯಾಗಿದ್ದಾರೆ

ಗಜೇಂದ್ರ, M. ಬಿನ್ ಮುನಿರಾಜಪ್ಪ, ವಯಸ್ಸು 35 ವರ್ಷ, ಕೆಲಸ: ವ್ಯವಸಾಯ, ವಾಸ : ಯರ್ರಪ್ಪನಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಅಂಚೆ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು - 560 077, ಇವರು SSLC ವರೆಗೂ ಓದಿದ್ದು, ಕಪ್ಪು ಬಣ್ಣ ಹೊಂದಿದ್ದು, 6 ಅಡಿ ಎತ್ತರವಿದ್ದು, ಸಾದಾರಣ ಮೈಕಟ್ಟು ಹೊಂದಿದ್ದು, ಕನ್ನಡ ಮತ್ತು ಹಿಂದಿ ಭಾಷೆ ಮಾತನಾಡುತ್ತಾರೆ. ಇವರು ದಿನಾಂಕ: 11.01.2025 ರಂದು ಬೆಳಗ್ಗೆ ಸುಮಾರು 10 ಗಂಟೆಗೆ ಮನೆಯಿಂದ ಹೊರಗೆ ಹೋದವರು ಮತ್ತೆ ಮನೆಗೆ ವಾಪಸ್ಸು ಬಂದಿರುವುದಿಲ್ಲ. ಇವರನ್ನು ಹುಡುಕಿ ಕೊಟ್ಟವರಿಗೆ ರೂ. 50,000/- ಬಹುಮಾನ ಕೊಡುತ್ತೇವೆ ಇವರನ್ನು ಕಂಡ ಕೂಡಲೇ ಸಂಪರ್ಕಿಸಿ.

ಮುನಿರಾಜಪ್ಪ
ಮೊಬೈಲ್ ಸಂಖ್ಯೆ :
9972190995, 9845856389

ಹೃದಯಾಘಾತ ಚಾಲಕ ಸೇರಿ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ದಮ್ಮನಕಟ್ಟೆ ಬಳಿ ಗುರುವಾರ ರಾಜ್ಯ ರಸ್ತೆ ಸಾರಿಗೆ ಬಸ್ ಚಾಲಕ, ವಾಹನ ಚಾಲನೆ ಮಾಡುವಾಗಲೇ ಹೃದಯಾಘಾತದಿಂದ ಮೃತಪಟ್ಟಿದ್ದು, ನಿಯಂತ್ರಣ ತಪ್ಪಿದ ಬಸ್ ಡಿಕ್ಕಿ ಹೊಡೆದು ಗ್ರಾಮದ ಪಾದಚಾರಿ ಮಹಿಳೆಯೂ ಸ್ಥಳದಲ್ಲೇ ಮೃತಪಟ್ಟರು.

ಚಾಲಕ, ಕೆ.ಆರ್.ನಗರ ತಾಲ್ಲೂಕಿನ ಗಂಧನಹಳ್ಳಿಯ ಸುನೀಲ್ ಕುಮಾರ್ (30), ದಮ್ಮನಕಟ್ಟೆಯ ಲಕ್ಷ್ಮಮ್ಮ (60) ಮೃತರು.

ದಮ್ಮನಕಟ್ಟೆ ಸಫಾರಿ ಕೇಂದ್ರದ ಮೈಸೂರು–ಮಾನಂದವಾಡಿ ಮುಖ್ಯರಸ್ತೆಯ ಸಮೀಪ ಘಟನೆ ನಡೆದಿದೆ. ಮಹಿಳೆಗೆ, ನಂತರ ಮರಕ್ಕೆ ಡಿಕ್ಕಿ ಹೊಡೆದ ಬಸ್ ಜಮೀನಿಗೆ ನುಗ್ಗಿ ವಿದ್ಯುತ್ ಕಂಬಕ್ಕೂ ಡಿಕ್ಕಿ ಹೊಡೆಯಿತು. ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಂತರಸಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿವಿಧೆಡೆ ಶಿವಕುಮಾರ ಸ್ವಾಮೀಜಿ 118ನೇ ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕಾಯಕವೇ ಕೈಲಾಸವೆಂಬ ಬಸವಣ್ಣ ಅವರ ತತ್ವ ಸಿದ್ಧಾಂತ ಪರಿಪಾಲನೆ ಮಾಡಿ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಶ್ರೇಷ್ಠ ವ್ಯಕ್ತಿ ಶಿವಕುಮಾರ ಸ್ವಾಮೀಜಿ. ಅವರ ಹಾದಿಯಲ್ಲಿ ನಾವೂ ಸಾಗೋಣ’ ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಸಿಡೇದಹಳ್ಳಿ ವೃತ್ತದಲ್ಲಿ ಶಿವಕುಮಾರ ಸ್ವಾಮೀಜಿ ಅಭಿಮಾನಿಗಳ ಬಳಗದಿಂದ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿಯವರ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಪೂಜ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಬಳಗದ ಅಧ್ಯಕ್ಷ ಪಿ.ಎಚ್. ರಾಜು ಮಾತನಾಡಿದರು.

ಕಾರ್ಯಕ್ರಮದಲ್ಲಿ ಭಕ್ತರಿಗೆ ಮಜ್ಜಿಗೆ, ಪಾನಕ, ಹೆಸರುಬೇಳೆ, ಸಿಹಿ ವಿತರಿಸಲಾಯಿತು.

ರಾಜರಾಜೇಶ್ವರಿ ನಗರ: ಎಲ್ಲ ಸಮುದಾಯ, ಧರ್ಮದವರಿಗೆ ಉಚಿತ ಅಕ್ಷರ, ಅನ್ನ, ಜ್ಞಾನ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ನೀಡಿದವರು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ’ ಎಂದು ಬಿಜೆಪಿ ಮುಖಂಡ ಎನ್. ಸಿ.ಕುಮಾರ್ ಬಣ್ಣಿಸಿದರು.

ನಾಗದೇವನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿ ಜಯಂತಿ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಭಕ್ತರಿಗೆ ಅನ್ನದಾಸೋಹ, ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಲಾಯಿತು.

ಸಿಡೇದಹಳ್ಳಿ ವೃತ್ತದಲ್ಲಿ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿಯವರ 118ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಸ್. ಮುನಿರಾಜು ಅವರು ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ನಾಗದೇವನಹಳ್ಳಿಯಲ್ಲಿ ನಡೆದ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಮತ್ತು ಗುರುವಂದನಾ ಕಾರ್ಯಕ್ರಮದಲ್ಲಿ ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಬಸ್‌ನಲ್ಲಿ ಅತ್ಯಾಚಾರಕ್ಕೆ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಉಚ್ಚಂಗಿದುರ್ಗ ಜಾತ್ರೆಗೆ ಬಂದಿದ್ದ ಮಹಿಳೆ ತನ್ನ ಇಬ್ಬರು ಮಕ್ಕಳ ಜೊತೆಗೆ ಮಂಗಳವಾರ ರಾತ್ರಿ ಮನೆಗೆ ಖಾಸಗಿ ಬಸ್‌ನಲ್ಲಿ ಮರಳುತ್ತಿದ್ದ ವೇಳೆ ಅತ್ಯಾಚಾರಕ್ಕೆ ಯತ್ನ ನಡೆದಿದೆ. ಈ ಸಂಬಂಧ ಮೂವರು ಆರೋಪಿಗಳನ್ನು ಅರಸೀಕೆರೆ ಪೊಲೀಸರು ಬಂಧಿಸಿದ್ದಾರೆ.

ಕೊಟ್ಟೂರು ತಾಲ್ಲೂಕು ಅಲಬೂರಿನ ಚಾಲಕ ಪ್ರಕಾಶ ಮಡಿವಾಳ, ಡಗ್ಗಿ ಬಸಾಪುರ ಗ್ರಾಮದ ರಾಜಶೇಖರ ಮತ್ತು ಅರಸೀಕೆರೆಯ ಬಾರಿಕರ ಸುರೇಶ್ ಬಂಧಿತ ಆರೋಪಿಗಳು.

‘ದಾವಣಗೆರೆ ಜಿಲ್ಲೆಯ ಸಂತ್ರಸ್ತ ಮಹಿಳೆ ‘ಮಂಜುನಾಥ’ ಹೆಸರಿನ ಖಾಸಗಿ ಬಸ್‌ನಲ್ಲಿ ತೆರಳುತ್ತಿದ್ದರು. ಆರೋಪಿ ಚಾಲಕ ಚೆನ್ನಾಪುರ ಗ್ರಾಮದ ರಸ್ತೆಯಲ್ಲಿ ಬಸ್ ನಿಲ್ಲಿಸಿ ಆಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ. ರಾಜಶೇಖರ ಮತ್ತು ಸುರೇಶ ಸಹಕರಿಸಿದರು’ ಎಂದು ಪೊಲೀಸರು ತಿಳಿಸಿದರು.

‘ಮಹಿಳೆ ಹಾಗೂ ಮಕ್ಕಳು ಚೀರಾಡುವುದನ್ನು ಕೇಳಿಸಿಕೊಂಡ ಬೈಕ್ ಸವಾರರು ಬಸ್ ಒಳಗೆ ಪ್ರವೇಶಿಸಿದಾಗ, ಮಹಿಳೆ ಸ್ಥಿತಿ ಕಂಡು ಮಾಹಿತಿ ನೀಡಿದರು. ಅದರಂತೆ ಬಸ್ ಜಪ್ತಿ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು.

ಮಣ್ಣಿನ ರಾಶಿ, ಪೈಪ್ ಒಡೆದು ರಸ್ತೆಯಲ್ಲಿ ಹರಿಯುವ ನೀರು

ಕಾಮಗಾರಿಗೆ ಗ್ರಹಣ, ಚಾಲಕರು ಹೈರಾಣ

● ಆದಿತ್ಯ ಕೆ.ಎ.

ಬೆಂಗಳೂರು: ‘ನಮ್ಮ ಮೆಟ್ರೊ’, ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿಯಿಂದ ನಗರದ ಹಲವೆಡೆ ನಡೆಯುತ್ತಿರುವ ಕಾಮಗಾರಿಗಳು ಆಮೆಗತಿಯಲ್ಲಿ ಸಾಗುತ್ತಿದ್ದು, ಸಂಚಾರ ದುಸ್ತರವಾಗಿದೆ.

ಇನ್ನೂ ಕೆಲವು ಕಾಮಗಾರಿಗಳಿಗೆ ಗ್ರಹಣ ಹಿಡಿದಿದೆ. ಕಾಮಗಾರಿ ವಿಳಂಬದಿಂದ ಅಪಘಾತಗಳು ಸಂಭವಿಸಿ ಸಾವು– ನೋವಿಗೂ ಕಾರಣವಾಗುತ್ತಿವೆ. ದಟ್ಟಣೆಯ ಜತೆಗೆ ಧಗೆ ಹಾಗೂ ದೂಳಿನ ಸಮಸ್ಯೆಯಿಂದ ಪ್ರಯಾಣಿಕರು ಹಾಗೂ ಚಾಲಕರು ಹೈರಾಣಾಗುತ್ತಿದ್ದಾರೆ.

ಸುಗಮ ಸಂಚಾರಕ್ಕೆ ಸಂಚಾರ ಪೊಲೀಸರು ಕ್ರಮ ಕೈಗೊಂಡಿದ್ದರೂ ವಿಳಂಬ ಕಾಮಗಾರಿಯಿಂದ ದಿನದಿಂದ ದಿನಕ್ಕೆ ಸಮಸ್ಯೆ ತೀವ್ರಗೊಳ್ಳುತ್ತಿದೆ. ಅಲ್ಲಲ್ಲಿ ಅವೈಜ್ಞಾನಿಕವಾಗಿ ಗುಂಡಿ ತೆಗೆದು ಮಣ್ಣಿನ ರಾಶಿ ಹಾಕಲಾಗಿದ್ದು, ವಾಹನಗಳು ಗುಂಡಿಯಲ್ಲಿ ಸಿಲುಕಿಕೊಳ್ಳುವುದು ಸಾಮಾನ್ಯವಾಗಿದೆ.

‘ನಮ್ಮ ಮೆಟ್ರೊ’ ಕಾಮಗಾರಿಗಾಗಿ ರಸ್ತೆಯ ಮಧ್ಯಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಮಣ್ಣು ತೆಗೆದು ಬ್ಯಾರಿಕೇಡ್ ಅಳವಡಿಸಲಾಗಿದೆ. ಇನ್ನು ಜಲಮಂಡಳಿಯಿಂದ ಅಳವಡಿಸಿರುವ ಪೈಪ್‌ಗಳು ಅಲ್ಲಲ್ಲಿ ಒಡೆದು ನೀರು ರಸ್ತೆಯ ಮೇಲೆಯೇ ಹರಿಯುತ್ತಿದೆ. ಪೈಪ್ ಬದಲಾವಣೆಗಾಗಿ ರಸ್ತೆಯ ಮಧ್ಯ ಭಾಗದಲ್ಲಿ ಅಗೆಯಲಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಕಾಮಗಾರಿಯ ವಿಳಂಬ ಹಾಗೂ ಗುಂಡಿ ಬಿದ್ದಿರುವ ರಸ್ತೆಗಳಿಂದ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ.

ಕೋರಮಂಗಲದ ಮಹಾರಾಜ ಸಿಗ್ನಲ್ ಬಳಿ ಕಾಮಗಾರಿಗಾಗಿ ತೆಗೆಯಲಾಗಿದ್ದ ಗುಂಡಿಯಲ್ಲಿ ಸಿಲುಕಿದ್ದ ವಾಹನ

ಕೆಲವು ರಸ್ತೆಗಳಲ್ಲಿ ರಾತ್ರಿ ವೇಳೆ ದ್ವಿಚಕ್ರ ವಾಹನ ಚಾಲನೆ ಮಾಡುವುದಕ್ಕೇ ಭಯವಾಗುತ್ತದೆ. ಬೀದಿ ದೀಪಗಳಿಲ್ಲದೆ ಸಂಚರಿಸಿದರೆ ಅಪಘಾತ ಆಗುವುದು ಖಚಿತ

ಸುರೇಶ್, ಟೆಕಿ, ಎಚ್.ಎಸ್.ಆರ್ ಲೇಔಟ್

ಫೇಸ್‌ಬುಕ್ ಹಾಗೂ ‘ಎಕ್ಸ್’ ಖಾತೆಯಲ್ಲಿ ಸಂಚಾರ ಪೊಲೀಸರು ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಮಾಹಿತಿ ನೀಡಿದ್ದರೂ, ಗೊತ್ತಿಲ್ಲದೇ ಬಂದವರು ಸಮಸ್ಯೆಗೆ ಸಿಲುಕಿಕೊಳ್ಳುತ್ತಿದ್ದಾರೆ. ಬಿಬಿಎಂಪಿ ನಡೆಸುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯೂ ನಿಧಾನವಾಗಿ ಸಾಗುತ್ತಿದ್ದು, ಹಲವು ಕಡೆ ವ್ಯಾಪಾರದ ಮೇಲೂ ಪರಿಣಾಮ ಬೀರಿದೆ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡಿದ್ದಾರೆ.

‘ರಸ್ತೆ ಸಂಚಾರ ಬಂದ್ ಆಗಿರುವ ಮಾಹಿತಿಯನ್ನು ಬೀಟ್ ಪೊಲೀಸರು ತಕ್ಷಣವೇ ಕಂಟ್ರೋಲ್ ರೂಂಗೆ ನೀಡುತ್ತಾರೆ. ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕುತ್ತೇವೆ. ಸಾಮಾಜಿಕ ಮಾಧ್ಯಮ ಬಳಸದವರು ಬಂದ್ ಆಗಿರುವ ರಸ್ತೆಯಲ್ಲೇ ಸಾಗಿ ಸಮಸ್ಯೆಗೆ ಸಿಲುಕುತ್ತಿದ್ದಾರೆ’ ಎಂದು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಎಲ್ಲೆಲ್ಲಿ ಸಮಸ್ಯೆ?: ಮಹದೇವಪುರ ವಾರ್ಡ್‌ನ ಕಾರ್ತಿಕ್ ನಗರದ ಕಲಾ ಮಂದಿರದ ಬಳಿ ನಡೆಯುತ್ತಿರುವ ಮೆಟ್ರೊ ಕಾಮಗಾರಿಯಿಂದ ಕಾರ್ತಿಕ್ ನಗರ ಹಾಗೂ ಮಾರತ್‌ಹಳ್ಳಿಯ ಕಡೆಗೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಸ್ಥಳದಲ್ಲಿ ಸಿಮೆಂಟ್, ಕಬ್ಬಿಣದ ಸರಳು ಹಾಕಲಾಗಿದ್ದು, ರಸ್ತೆ ದಾಟುವುದಕ್ಕೂ ಪರದಾಡುತ್ತಿದ್ದಾರೆ ಎಂದು ಸ್ಥಳೀಯರು ಹೇಳಿದರು.

ಹೊರ ವರ್ತುಲ ರಸ್ತೆಯ ರೈಲ್ವೆ ಸೇತುವೆ ಬಳಿ ನಡೆಯುತ್ತಿರುವ ಕಾಮಗಾರಿಯಿಂದ ಮಹದೇವಪುರದಿಂದ ಮಾರತ್‌ಹಳ್ಳಿ ಕಡೆಗೆ ಹಾಗೂ ಮಾರತ್‌ಹಳ್ಳಿಯಿಂದ ಮಹದೇವಪುರದ ಕಡೆಗೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಕಳೆದ ಹಲವು ದಿನಗಳಿಂದ ಈ ಭಾಗದಲ್ಲಿ ಸಮಸ್ಯೆ ತೀವ್ರವಾಗಿದೆ. ಈ ಸ್ಥಳಗಳಲ್ಲಿ ಅಪಘಾತಗಳೂ ಸಂಭವಿಸುತ್ತಿವೆ ಎಂದು ಆಟೊ ಚಾಲಕ ಚಂದ್ರು ನೋವು ತೋಡಿಕೊಂಡಿದ್ದಾರೆ.

ಸಕ್ರಾ ಆಸ್ಪತ್ರೆಯ ರಸ್ತೆಯಲ್ಲಿ ಜಲಮಂಡಳಿ ಹಾಗೂ ಬಿಬಿಎಂಪಿಯಿಂದ ನಡೆಯುತ್ತಿರುವ ಕಾಮಗಾರಿಗೆ ವೇಗ ಸಿಕ್ಕಿಲ್ಲ. ಇದರಿಂದ ಬೆಳ್ಳಂದೂರು ಕೋಡಿಯಿಂದ ಸಕ್ರಾ ಆಸ್ಪತ್ರೆಯ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಜಲಮಂಡಳಿಯ ಅಳವಡಿಸಿದ್ದ ಪೈಪ್‌ಗಳು ಆಗಾಗ್ಗೆ ಒಡೆಯುತ್ತಿದ್ದು, ಸೆಂಟ್ರಲ್ ಜೈಲು ರಸ್ತೆಯಿಂದ ರಾಯ್ ಸಂದ್ರಾ ಜಂಕ್ಷನ್ ಕಡೆಗೆ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ವೈಟ್ ಟಾಪಿಂಗ್ ಬವಣೆ

ಕಳೆದ ನವೆಂಬರ್‌ನಿಂದ ಜೆ.ಸಿ.ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ನಾಲಾ ಜಂಕ್ಷನ್‌ನಿಂದ ಪುರಭವನದ ವರೆಗೆ ನಡೆಯುತ್ತಿರುವ ಕಾಮಗಾರಿಯು ಕುಂಟುತ್ತಾ ಸಾಗುತ್ತಿದೆ. ಇದರಿಂದ ವಾಹನಗಳು ಪರ್ಯಾಯ ಮಾರ್ಗದಲ್ಲಿ ಚಲಿಸುತ್ತಿದ್ದು, ಆ ಮಾರ್ಗದಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಾಹನಗಳು ದಟ್ಟಣೆಯಲ್ಲಿ ಸಿಲುಕಿ, ಪ್ರಯಾಣಿಕರು ಪರದಾಡುತ್ತಿದ್ದಾರೆ.

ಎಸ್‌ಬಿಆರ್ ಪ್ಯಾಲೆಸ್ ಕಡೆಯಿಂದ ತುಳಸಿ ಚಿತ್ರಮಂದಿರ ಕಡೆಗೆ ಸಾಗುವ ದಾರಿಯಲ್ಲಿ ಮಣ್ಣು ಅಗೆದು ರಾಶಿ ಹಾಕಲಾಗಿದೆ. ಅಗರ ಜಂಕ್ಷನ್‌ನಲ್ಲಿ ಜಲಮಂಡಳಿ ನಡೆಸುತ್ತಿರುವ ಕಾಮಗಾರಿ ಕುಂಟುತ್ತಾ ಸಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಗುತ್ತಿಗೆದಾರರು ಕಾಮಗಾರಿಗೆ ವೇಗ ನೀಡಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

JINDAL

inspire possibilities

Jindal Aluminium

Jindal Aluminium is India's largest aluminium extrusion company and a leading rolled product manufacturer. Our products cater to diverse industries, including Aerospace, Automotive, Building & Construction, Defence, Electrical & Electronics etc. We specialize in producing wide and large-diameter profiles in special alloys, ensuring compliance with international standards. Also, we manufacture aluminium rolled products ranging from 6.000 mm to 0.009 mm thickness in various alloys. In FY 2024-25, we produced the highest ever quantity of -

1,26,008 Tonnes Extruded Products

57,790 Tonnes Rolled Products

Our three state-of-the-art extrusion plants, with a total of 16 presses, can produce up to 160,000 tonnes of extruded products annually, meeting nearly 25% of India's total demand. Our superior quality comes from top-notch raw materials, stringent quality controls, and advanced technology. Despite the higher cost, customers in India and abroad happily buy our products.

The reasons for this humble achievement despite higher prices are :

- Dedication of our production, quality and marketing teams.
- Consuming high quality inputs.
- Fast and on-time delivery of products, and quick response to our customers queries.
- Thoughtful decision of our customers, dealers, and end consumers for preferring quality products.

We value their confidence and trust in us.

We use 100% our own renewable energy for manufacturing @ Bengaluru and Dabaspet units

Know More

+91 9900-072-169
Hello@JindalAluminium.com

NVT QC ANAB ACCREDITED Nadcap

ಬಿಬಿಎಂಪಿ ಬಜೆಟ್: ಸಂಪನ್ಮೂಲ ಕ್ರೋಡೀಕರಣ ನಿರೀಕ್ಷೆ ದ್ವಿಗುಣ • ಜಾಹೀರಾತು ಆದಾಯ ಹೆಚ್ಚಳದ ಚಿಂತನೆ

ಬಜೆಟ್: ಸಂಗ್ರಹವಾಗದ ಹಣದತ್ತ ಚಿತ್ತ

ಬಜೆಟ್ ಸ್ವೀಕೃತಿ ಅಂಕಿ–ಅಂಶ

₹12,371.63 ಕೋಟಿ — 2024–25ರ ಬಜೆಟ್ ಮಂಡನೆ
₹13,408.13 ಕೋಟಿ — 2024–25ರ ಪರಿಷ್ಕೃತ ಬಜೆಟ್
₹10,318.10 ಕೋಟಿ — 2024–25ರಲ್ಲಿ ಒಟ್ಟು ಸ್ವೀಕೃತಿ

₹19,930.64 ಕೋಟಿ — 2025–26ರಲ್ಲಿ ಸ್ವೀಕೃತಿ ನಿರೀಕ್ಷೆ
₹7,000 ಕೋಟಿ — ರಾಜ್ಯ ಸರ್ಕಾರದ ಅನುದಾನ
₹542.44 ಕೋಟಿ — ರಾಜಸ್ವ ಅನುದಾನ
₹498 ಕೋಟಿ — ಕೇಂದ್ರ ಸರ್ಕಾರದ ಅನುದಾನ
₹238.50 ಕೋಟಿ — ರಾಷ್ಟ್ರೀಯ ವಿಪತ್ತು ನಿಧಿ
₹500 ಕೋಟಿ — ವಿಶ್ವಬ್ಯಾಂಕ್ ಸಾಲ

• ಆರ್. ಮಂಜುನಾಥ್



ಯಾವ ವಲಯಕ್ಕೆ ಎಷ್ಟು ಹಣ?

ವಲಯ	ಹಣ (ಕೋಟಿಗಳಲ್ಲಿ)
ಕೇಂದ್ರ	₹1,027.82
ಪೂರ್ವ	₹420.44
ಪಶ್ಚಿಮ	₹414.56
ದಕ್ಷಿಣ	₹410.37
ಯಲಹಂಕ	₹134.64
ಮಹದೇವಪುರ	₹193.04
ಬೊಮ್ಮನಹಳ್ಳಿ	₹210.76
ಆರ್.ಆರ್.ನಗರ	₹188.57
ದಾಸರಹಳ್ಳಿ	₹98.94

ಬೆಂಗಳೂರು: ವರ್ಷಗಳಿಂದ ಸಂಗ್ರಹವಾಗದ ಸಂಪನ್ಮೂಲಗಳಿಂದಲೇ ದುಪ್ಪಟ್ಟಿಗಿಂತ ಹೆಚ್ಚು ಹಣ ಸಂಗ್ರಹಿಸುವತ್ತ ಚಿತ್ತ ಹರಿಸಿರುವ ಬಿಬಿಎಂಪಿ ಬಜೆಟ್, ಕಳೆದ ವರ್ಷಕ್ಕಿಂತ ಶೇ 50ರಷ್ಟು ಹೆಚ್ಚು ಸ್ವೀಕೃತಿಯ ನಿರೀಕ್ಷೆ ಹೊಂದಿದೆ.

2025–26ನೇ ಸಾಲಿನಲ್ಲಿ ರಾಜ್ಯ, ಕೇಂದ್ರ ಸರ್ಕಾರದ ಅನುದಾನ ಹಾಗೂ ವಿಶ್ವಬ್ಯಾಂಕ್ ಸಾಲವನ್ನು ಹೊರತುಪಡಿಸಿದಂತೆ ಬಿಬಿಎಂಪಿ ₹11,149.17 ಕೋಟಿ ಸಂಪನ್ಮೂಲವನ್ನು ಸಂಗ್ರಹಿಸಬೇಕಿದೆ. 2024–25ನೇ ಸಾಲಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನಗಳನ್ನು ಸೇರಿಸಿಯೂ ಸಂಗ್ರಹಿಸಿರುವ ಸಂಪನ್ಮೂಲ ₹10,318 ಕೋಟಿಯಷ್ಟಿದೆ. ಹೀಗಾಗಿ, ಇರುವ ಸಂಗ್ರಹವನ್ನೇ ಹೆಚ್ಚಿಸಿಕೊಳ್ಳಲು ನಿರ್ಧರಿಸಿದೆ.

ಜಾಹೀರಾತು ಕರ, ಇ-ಖಾತೆ ವರ್ಗಾವಣೆ, ಸ್ವತ್ತುಗಳ ಬಾಡಿಗೆ, ಚಿತಾಗಾರದ ಶುಲ್ಕ, ಒಎಫ್‌ಸಿ ತೆರಿಗೆಗಳನ್ನು ಕಳೆದ ವರ್ಷಕ್ಕಿಂತ ಬಹುತೇಕ ದ್ವಿಗುಣಗೊಳಿಸಿಕೊಳ್ಳಲು ಅಂದಾಜಿಸಲಾಗಿದೆ. ಈ ಸಂಗ್ರಹಗಳು ಹಿಂದಿನ ವರ್ಷಗಳಲ್ಲಿ ನಿರೀಕ್ಷೆಗಿಂತ ಅರ್ಧದಷ್ಟು ಮಾತ್ರ ಸಾಧನೆ ಮಾಡಿವೆ.

ರಾಜ್ಯ ಸರ್ಕಾರದ ₹4 ಸಾವಿರ ಕೋಟಿ ಅನುದಾನದ ಜೊತೆಗೆ ₹2 ಸಾವಿರ ಕೋಟಿಯನ್ನು ಬಿಬಿಎಂಪಿ ಪ್ರತಿವರ್ಷ ವಿಶೇಷ ಉದ್ದೇಶಿಕ ಘಟಕಕ್ಕೆ (ಎಸ್‌ಪಿವಿ) ಒದಗಿಸಬೇಕು. ಜಾಹೀರಾತು ನೀತಿ, ಪ್ರೀಮಿಯಂ ಎಫ್‌ಎಆರ್‌ನಿಂದ ಸಂಗ್ರಹವಾಗುವ ಹಣವನ್ನು ನೀಡಲಾಗುತ್ತದೆ ಎಂದು ಹೇಳಲಾಗಿದ್ದು, ಅದು ಸಂಗ್ರಹವಾಗುವ ಲಕ್ಷಣಗಳಿಲ್ಲ.

ಇನ್ನು 'ಬ್ರ್ಯಾಂಡ್ ಬೆಂಗಳೂರು' ಯೋಜನೆಗಳಿಗಾಗಿಯೇ ಈ ವರ್ಷ ₹1,360 ಕೋಟಿ ಒದಗಿಸಬೇಕು. ಪಾಲಿಕೆ ಸಂಪನ್ಮೂಲದಿಂದಲೇ ಹಣ ಎಸ್ಕ್ರೊಗೆ ವರ್ಗಾವಣೆಯಾಗಬೇಕು. ಅದು ಸಾಧ್ಯವಾಗದಿದ್ದರೆ ಬ್ರ್ಯಾಂಡ್ ಬೆಂಗಳೂರು ಯೋಜನೆಗಳು ಸ್ಥಗಿತವಾಗುತ್ತವೆ.

ಆಡಳಿತ, ಸಿಬ್ಬಂದಿ ವೆಚ್ಚ ಹಾಗೂ ಘನತ್ಯಾಜ್ಯ ನಿರ್ವಹಣೆಗೆ ₹3,500 ಕೋಟಿ ವೆಚ್ಚವಾಗಲಿದೆ. ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸುಮಾರು ₹2 ಸಾವಿರ ಕೋಟಿಯಾಗಲಿದೆ. ಬಿಬಿಎಂಪಿ ಆಸ್ತಿ ತೆರಿಗೆಯ ಬಾಬ್ತಿನಲ್ಲಿ ಬರುವ ಹಣವೆಲ್ಲ ಇದಕ್ಕೇ ಸರಿಹೊಂದುತ್ತದೆ. ಇನ್ನುಳಿದ ನಿರೀಕ್ಷಿತ ಆದಾಯಗಳು ಬಂದರೆ ಮಾತ್ರ ವಾರ್ಡ್ ಮಟ್ಟದ ಕಾಮಗಾರಿಗಳು ಆರಂಭವಾಗುತ್ತವೆ.

ವಲಯಗಳಲ್ಲಿ ತಾರತಮ್ಯ: ಕೆಲವು ವರ್ಷಗಳಿಂದ ಹೇಳುತ್ತಿದ್ದ ವಲಯವಾರು ಬಜೆಟ್ ಮಂಡನೆಯಾಗದಿದ್ದರೂ, ಯಾವ ವಲಯಕ್ಕೆ ಯಾವ ಕಾರ್ಯಕ್ರಮದಲ್ಲಿ ಎಷ್ಟು ಹಣ ನೀಡಲಾಗುತ್ತಿದೆ ಎಂಬ ವಿವರವನ್ನು 'ಆಯವ್ಯಯದ ಅಂದಾಜುಗಳು' ಪುಸ್ತಕದಲ್ಲಿ ವಿವರಿಸಲಾಗಿದೆ. ಬಹುತೇಕ ಎಲ್ಲ ಕಾಮಗಾರಿಗಳನ್ನೂ ಕೇಂದ್ರದಲ್ಲೇ ಉಳಿಸಿಕೊಂಡಿದ್ದು, ಅತಿಹೆಚ್ಚು ತೆರಿಗೆ ಪಾವತಿಸುವ ಮಹದೇವಪುರಕ್ಕೆ ಕಡಿಮೆ ಕಾಮಗಾರಿಗಳನ್ನು ನೀಡಲಾಗಿದೆ.

ಕೆಂಪೇಗೌಡ ಜಯಂತಿಗೆ ಅನುದಾನ ಕಡಿತ

ಬಿಬಿಎಂಪಿ ಬಜೆಟ್‌ನಲ್ಲಿ ನಾಡಪ್ರಭು ಕೆಂಪೇಗೌಡ ದಿನಾಚರಣೆಗೆ ₹50 ಲಕ್ಷ ಅನುದಾನವನ್ನು ಕಡಿತ ಮಾಡಲಾಗಿದೆ. ಕಳೆದ ವರ್ಷ ₹3 ಕೋಟಿಯಿದ್ದ ಅನುದಾನ ಈ ವರ್ಷ ₹2.5 ಕೋಟಿಯಾಗಿದೆ. ಕಡಲೆಕಾಯಿ ಪರಿಷೆಗೆ ನೀಡಲಾಗುವ ಅನುದಾನವನ್ನು ₹60 ಲಕ್ಷದಿಂದ ₹50 ಲಕ್ಷಕ್ಕೆ ಇಳಿಸಲಾಗಿದೆ. ನಗರದಲ್ಲಿ ದಸರಾ ಉತ್ಸವಗಳಿಗೂ ₹20 ಲಕ್ಷ ಕಡಿತ ಮಾಡಲಾಗಿದೆ.

'ಜನರ ಕಾಮಗಾರಿಗೆ ಹಣವೇ ಇಲ್ಲ'

'ಬೃಹತ್ ಯೋಜನೆಗಳನ್ನು ತೋರಿಸಿ ಆಕಾಶಕ್ಕೆ ಏಣಿ ಹಾಕಲು ಹೊರಟಿದ್ದಾರೆ. ಕಳೆದ ವರ್ಷದ ₹13 ಸಾವಿರ ಕೋಟಿ ಬಜೆಟ್ ಅನ್ನೇ ತಲುಪಲು ಸಾಧ್ಯವಾಗಿಲ್ಲ. ಕಳೆದ ವರ್ಷ ಹೇಳಿದ್ದ ಯೋಜನೆಗಳನ್ನೇ ಮತ್ತೆ ಹೇಳಲಾಗಿದೆ. ಸರ್ಕಾರ ಹೆಚ್ಚು ಅನುದಾನ ನೀಡಿದರೂ ಅದು ಎಸ್‌ಪಿವಿಗೇ ಹೋಗುತ್ತದೆ. ನಗರದ ಜನಕ್ಕೆ ಅಗತ್ಯವಾಗಿ ಬೇಕಾದ ಕಾಮಗಾರಿ ನಡೆಸಲು ಬಿಬಿಎಂಪಿಯಲ್ಲಿ ಹಣವೇ ಇಲ್ಲ' ಎಂದು ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಪದ್ಮನಾಭರೆಡ್ಡಿ ದೂರಿದರು.

ಸುದ್ದಿ 2 ನಿಮಿಷ

ಬೆಂಗಳೂರು– ಕಲಬುರಗಿ: ವಾರದಲ್ಲಿ 3 ದಿನ ವಿಶೇಷ ರೈಲು

ಕಲಬುರಗಿ: ಬೇಸಿಗೆ ಅವಧಿಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಕಲಬುರಗಿ ನಿಲ್ದಾಣಗಳ ನಡುವೆ ವಾರದಲ್ಲಿ ಮೂರು ದಿನ ವಿಶೇಷ ರೈಲುಗಳು ಸಂಚರಿಸಲಿವೆ.

ಎಸ್‌ಎಂವಿಟಿ ಬೆಂಗಳೂರಿನಿಂದ ಕಲಬುರಗಿ ನಡುವೆ ವಿಶೇಷ ರೈಲು (06519) ಶುಕ್ರವಾರ, ಶನಿವಾರ ಮತ್ತು ಭಾನುವಾರ ಸಂಚರಿಸಲಿದೆ. ಬೆಂಗಳೂರಿನಿಂದ ರಾತ್ರಿ 9.15ಕ್ಕೆ ಹೊರಟು ಮರುದಿನ ಬೆಳಿಗ್ಗೆ 7.40ಕ್ಕೆ ಕಲಬುರಗಿ ತಲುಪಲಿದೆ ಎಂದು ಕೇಂದ್ರ ರೈಲ್ವೆ ವಲಯದ ಸೋಲಾಪುರ ವಿಭಾಗ ಪ್ರಕಟಣೆಯಲ್ಲಿ ತಿಳಿಸಿದೆ.

ಕಲಬುರಗಿಯಿಂದ ಎಸ್‌ಎಂವಿಟಿ ಬೆಂಗಳೂರು ನಡುವೆ ರೈಲು (06520) ಶನಿವಾರ, ಭಾನುವಾರ ಮತ್ತು ಸೋಮವಾರ ಸಂಚರಿಸಲಿದೆ. ಕಲಬುರಗಿಯಿಂದ ಬೆಳಿಗ್ಗೆ 9.35ಕ್ಕೆ ಹೊರಟು ಅದೇ ದಿನ ರಾತ್ರಿ 8ಕ್ಕೆ ಬೆಂಗಳೂರು ತಲುಪಲಿದೆ. ಈ ರೈಲುಗಳು ಏಪ್ರಿಲ್ 4ರಿಂದ ಜೂನ್ 15ರ ನಡುವೆ ಸಂಚರಿಸಲಿವೆ.

ಈ ವಿಶೇಷ ರೈಲುಗಳು ಎರಡೂ ಮಾರ್ಗಗಳ ಶಹಾಬಾದ್, ಯಾದಗಿರಿ, ಕೃಷ್ಣಾ, ರಾಯಚೂರು, ಮಂತ್ರಾಲಯಂ ರೋಡ್, ಆದೋನಿ, ಗುಂತಕಲ್, ಅನಂತಪುರ, ಧರ್ಮಾವರಂ ಮತ್ತು ಯಲಹಂಕದಲ್ಲಿ ನಿಲುಗಡೆಯಾಗಲಿವೆ. ಪ್ರಯಾಣಿಕರು www.enquiry.indianrail.gov.in ಅಥವಾ NTES ಅಪ್ಲಿಕೇಷನ್ ಅಥವಾ 139 ಸಂಖ್ಯೆಗೆ ಕರೆ ಮಾಡಿ ಇತರೆ ವಿವರ ಪರಿಶೀಲಿಸಬಹುದು ಎಂದು ಕೋರಿದೆ.

ಹಬ್ಬದ ಸಂಭ್ರಮದಿಂದ ಸಾವಿನೆಡೆಗೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಶ್ರೀನಿವಾಸಸಾಗರದಲ್ಲಿ ಮುಳುಗಿ ಒಂದೇ ಕುಟುಂಬದ ಮೂವರು ಬುಧವಾರ ಮೃತಪಟ್ಟಿದ್ದಾರೆ. ಶ್ರೀನಿವಾಸ ಸಾಗರದಲ್ಲಿ ಈ ವರ್ಷ ನಡೆದ ಮೊದಲ ದುರ್ಘಟನೆ ಇದಾಗಿದೆ.

ಮಮತಾ ರೇಡಿಯೊ ಹೌಸ್ ನಗರದಲ್ಲಿ ಚಿರಪರಿಚಿತರಾಗಿರುವ ಕುಟುಂಬದ ಬಷೀರಾ (43), ಫರೀನಾ ಬೇಗಂ (40), ಇಮ್ರಾನ್ (40) ಮೃತರು. ಚಿಕ್ಕಬಳ್ಳಾಪುರದ 17ನೇ ವಾರ್ಡ್‌ನಲ್ಲಿ ಕುಟುಂಬ ವಾಸವಾಗಿತ್ತು.

ಇದೇ ಕುಟುಂಬದ ಇಮ್ರಾನ್ ಕೆಲಸದ ನಿಮಿತ್ತ ಬೆಂಗಳೂರಿನ ಮುನಿರೆಡ್ಡಿ ಪಾಳ್ಯದಲ್ಲಿ ವಾಸಿಸುತ್ತಿದ್ದರು. ರಂಜಾನ್ ಪ್ರಯುಕ್ತ ಚಿಕ್ಕಬಳ್ಳಾಪುರಕ್ಕೆ ಕುಟುಂಬ ಸಮೇತ ಬಂದಿದ್ದರು. ಮಕ್ಕಳನ್ನು ಕರೆದುಕೊಂಡು ಬುಧವಾರ ಮನೆ ಮಂದಿ (ಎಂಟತ್ತು ಜನ) ಶ್ರೀನಿವಾಸ ಸಾಗರಕ್ಕೆ ಪ್ರವಾಸ ಹೋಗಿದ್ದರು. ಈಜಲು ನೀರಿಗೆ ಇಳಿದ ವೇಳೆ ಅವಘಡ ಸಂಭವಿಸಿದೆ. ನೀರಿಗೆ ಇಳಿದ ಈ ಮೂವರು ಮುಳುಗಿದ್ದಾರೆ.

ಸಿದ್ದರಾಮಯ್ಯ ಎಂಜಿಆರ್ ಅಲ್ಲ: ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಮೈಸೂರು: 'ಸದಾ ಕುರ್ಚಿಗಂಟಿಕೊಂಡು ಅಧಿಕಾರ ನಡೆಸಲು ಇದು ತಮಿಳುನಾಡಲ್ಲ. ಸಿದ್ದರಾಮಯ್ಯ ಎಂಜಿಆರ್ ಅಲ್ಲ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಡಿ.ಕೆ.ಶಿವಕುಮಾರ್‌ಗೆ ಅವಕಾಶ ಮಾಡಿಕೊಡುವುದು ಒಳಿತು' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಪ್ರತಿಪಾದಿಸಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದು ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ಅಂತಹ ನಾಯಕರೇ ಹೊರತು ಸಿದ್ದರಾಮಯ್ಯ ಅಲ್ಲ. ಕಾಂಗ್ರೆಸ್ ಸಚಿವರೇ ಅವರ ಮಾತನ್ನು ಕೇಳುತ್ತಿಲ್ಲ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸಿದ್ದರಾಮಯ್ಯ, ಫ್ರಾನ್ಸ್‌ನ ಸರ್ವಾಧಿಕಾರಿ 16ನೇ ಲೂಯಿ ಇದ್ದಂತೆ. ಕರ್ನಾಟಕವನ್ನು ಮುಳುಗಿಸಿಯೇ ಹೋಗುತ್ತಾರೆ' ಎಂದು ಟೀಕಿಸಿದರು.

77 ಗರ್ಭಿಣಿಯರಿಗೆ ಸೀಮಂತ

ಪ್ರಜಾವಾಣಿ ವಾರ್ತೆ

ಯಲಹಂಕ: 'ಮಹಿಳೆಯರಿಗೆ ಕುಟುಂಬ ನಿರ್ವಹಣೆ ಮಾಡುವುದರ ಜೊತೆಗೆ ರಾಜ್ಯ ಹಾಗೂ ರಾಷ್ಟ್ರವನ್ನು ಮುನ್ನಡೆಸುವ ಅಗಾಧ ಮತ್ತು ವಿಶೇಷವಾದ ಬುದ್ಧಿಶಕ್ತಿ, ಸಾಮರ್ಥ್ಯವಿದೆ. ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿ ಹಾಗೂ ವಿಶ್ವವಾಣಿ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ 2024-25ನೇ ಸಾಲಿನ ಮಹಿಳಾ ಗ್ರಾಮಸಭೆ ಹಾಗೂ ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತೀಯ ಇತಿಹಾಸ ಮತ್ತು ಪರಂಪರೆಯಲ್ಲಿ ಅನಾದಿ ಕಾಲದಿಂದಲೂ ಸ್ತ್ರೀಯರಿಗೆ ಅತ್ಯಂತ ಪೂಜ್ಯನೀಯ ಸ್ಥಾನವಿದೆ. ಅವರು ಮಾಡಿರುವ ಹಲವಾರು ಯಶಸ್ವಿ ಸಾಹಸ ಮತ್ತು ಸಾಧನೆಗಳು ನಮ್ಮ ಕಣ್ಮುಂದಿವೆ' ಎಂದರು.

ವಿಶ್ವವಾಣಿ ಫೌಂಡೇಶನ್ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್ ಮಾತನಾಡಿ, 'ಕುಟುಂಬ ನಿರ್ವಹಣೆಯ ಜೊತೆಗೆ ಹಲವಾರು ರಂಗಗಳಲ್ಲಿ ಮಹಿಳೆಯರು ಅದ್ವಿತೀಯ ಸಾಧನೆಗಳನ್ನು ಮಾಡುತ್ತಿರುವುದು ಪ್ರಶಂಸನೀಯ. ಮಹಿಳೆಯರನ್ನು ಸ್ವಾವಲಂಬಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಸಂಸ್ಥೆಯ ವತಿಯಿಂದ ಹಲವು ಸೇವಾಕಾರ್ಯಗಳನ್ನು ಕೈಗೊಳ್ಳಲಾಗಿದೆ' ಎಂದರು.

ಒಟ್ಟು 77 ಗರ್ಭಿಣಿಯರಿಗೆ ಸೀಮಂತಕಾರ್ಯ ನೆರವೇರಿಸಲಾಯಿತು. ಮಹಿಳೆಯರಿಗಾಗಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಮಹಿಳೆಯರಿಂದ ಕೋಲಾಟ, ಫ್ಯಾಷನ್ ಶೋ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರಿಂದ ಏರ್ಪಡಿಸಲಾಗಿತ್ತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವಾನಿ ಶ್ರೀನಿವಾಸ್, ಉಪಾಧ್ಯಕ್ಷ ಶಿವಕುಮಾರ್, ಮಾಜಿ ಅಧ್ಯಕ್ಷರಾದ ಎಸ್.ಜಿ.ನರಸಿಂಹಮೂರ್ತಿ, ಅಂಬಿಕಾ ರಾಜೇಂದ್ರಕುಮಾರ್, ಪಿಡಿಒ ನಾಗರಾಜ್, ಸದಸ್ಯರಾದ ಕೆ.ವೀರಣ್ಣ, ಚಿಕ್ಕಣ್ಣ, ಆರ್.ಡಿ.ರಾಜಣ್ಣ, ಎನ್. ಸಂತೋಷ್‌ಕುಮಾರ್, ಹನುಮೇಗೌಡ, ಮಮತಾ ರಮೇಶ್, ಸುಜಾತಮ್ಮ, ತಾಲ್ಲೂಕು ವೈದ್ಯಾಧಿಕಾರಿ ಶೈಲಕುಮಾರ್ ಉಪಸ್ಥಿತರಿದ್ದರು.

ಮಹಿಳಾ ಗ್ರಾಮಸಭೆ ಕಾರ್ಯಕ್ರಮದಲ್ಲಿ 77 ಗರ್ಭಿಣಿಯರಿಗೆ ಸೀಮಂತ ನೆರವೇರಿಸಲಾಯಿತು

ಇಂದು ವಿವಿಧೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಒಂಬತ್ತು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಎಂಟು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ 30 ಕಿ.ಮೀನಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ, ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಗಂಟೆಗೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಒಳನಾಡಿನ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಕೊಡಗು ಜಿಲ್ಲೆಯಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಚಾಮರಾಜನಗರ, ಮಂಡ್ಯ, ರಾಮನಗರ, ಮೈಸೂರು, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರದ ಹೆಚ್ಚಿನ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಿಳಿಸಿದೆ.

'ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಕೈಗೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಯೊಬ್ಬ ವೈದ್ಯಕೀಯ ವಿದ್ಯಾರ್ಥಿಯೂ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಕೈಗೊಳ್ಳಲು ಮುಂದಾಗಬೇಕು' ಎಂದು ತಜ್ಞವೈದ್ಯ ಡಾ. ರವಿ. ಕಣ್ಣನ್ ಆರ್. ಅವರು ಸಲಹೆ ನೀಡಿದರು.

ನಗರದ ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ನಡೆದ 41ನೇ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು.

'ವೈದ್ಯಕೀಯ ವೃತ್ತಿ ಒಂದು ಉನ್ನತವಾದ ವೃತ್ತಿ. ಪ್ರತಿ ವೈದ್ಯರೂ ಸಹಾನುಭೂತಿ ಹೊಂದಿರಬೇಕು. ಇದರಿಂದ ರೋಗಿಗೆ ಪರಿಣಾಮಕಾರಿ ಚಿಕಿತ್ಸೆ ನೀಡಲು ಸಹಾಯವಾಗುತ್ತದೆ' ಎಂದು ಕಿವಿಮಾತು ಹೇಳಿದರು.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾನಿಲಯ ಕುಲಪತಿ ಡಾ.ಎಂ.ಆರ್ ಜಯರಾಂ ಉದ್ಘಾಟಿಸಿದರು.

ಘಟಿಕೋತ್ಸವದಲ್ಲಿ 154 ವೈದ್ಯಕೀಯ ಪದವಿ, 136 ಸ್ನಾತಕೋತ್ತರ ಪದವಿ ಹಾಗೂ 42 ಫಿಸಿಯೋಥೆರಪಿ ಪದವಿ ಪಡೆದ ವಿದ್ಯಾರ್ಥಿಗಳು ಸೇರಿದಂತೆ 332 ವಿದ್ಯಾರ್ಥಿಗಳಿಗೆ ಮುಖ್ಯ ಅತಿಥಿಗಳು ಪದವಿ ಪ್ರದಾನ ಮಾಡಿದರು. ಕಾಲೇಜು ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಎಂ.ಆರ್. ಜಯರಾಂ ಅವರು ಸನ್ಮಾನಿಸಿದರು.

ಗೋಕುಲ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ ಎಂ.ಆರ್. ಸಂಪಂಗಿರಾಮ್, ಗೋಕುಲ ಶಿಕ್ಷಣ ಪ್ರತಿಷ್ಠಾನದ (ವೈದ್ಯಕೀಯ) ಮುಖ್ಯ ಕಾರ್ಯ ನಿರ್ವಾಹಕ ಎಂ.ಆರ್. ಶ್ರೀನಿವಾಸಮೂರ್ತಿ, ಕಾಲೇಜಿನ ಪ್ರಾಚಾರ್ಯೆ ಡಾ. ಶಾಲಿನಿ ಎಸ್. ನೂಯಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಅಶೋಕ್ ಹೆದ್ಲಿಗೆ 'ಹಸ್ತಪ್ರತಿ ತಾಳೆಗರಿ ಸಂರಕ್ಷಣಾ ಪ್ರಶಸ್ತಿ'

ಅಶೋಕ್ ಹೆದ್ಲಿ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಹಸ್ತಪ್ರತಿ ತಾಳೆಗರಿ ಸಂರಕ್ಷಣಾ ಪ್ರಶಸ್ತಿ'ಗೆ ಕೆಳದಿ ಮ್ಯೂಸಿಯಂನ ಅಶೋಕ್ ಹೆದ್ಲಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ವಸುಂಧರ ಮತ್ತು ಪರಮಶಿವಯ್ಯ ದತ್ತಿಯಡಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಇದೇ 24ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಬಸ್ರೂರು ರಾಜೀವ ಶೆಟ್ಟಿ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿಯಾಗಿ ಬಸ್ರೂರು ರಾಜೀವ ಶೆಟ್ಟಿ ಆಯ್ಕೆಯಾಗಿದ್ದಾರೆ.

ಇಲ್ಲಿ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆದಿದೆ. ರಾಜೀವ ಶೆಟ್ಟಿ ಅವರು ಉಡುಪಿ ರೆಡ್ ಕ್ರಾಸ್ ಘಟಕದ ಸಭಾಪತಿಯಾಗಿದ್ದರು. ರಾಜ್ಯ ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿ ವಿಶಾಲ್ ಆರ್. ಅವರು ಚುನಾವಣಾಧಿಕಾರಿಯಾಗಿದ್ದರು.

ಚುನಾವಣೆಯಲ್ಲಿ 30 ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಉಡುಪಿ ಘಟಕದ ರಾಜೀವ ಶೆಟ್ಟಿ, ಬಾಗಲಕೋಟೆ ಘಟಕದ ಆನಂದ ಜಗಜಿನ್ನಿ, ಶಿವಮೊಗ್ಗ ಘಟಕದ ಎಸ್.ಪಿ. ದಿನೇಶ್ ಅವರು ರಾಜ್ಯ ಘಟಕದ ಸಭಾಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಮೂವರು ತಲಾ 10 ಮತಗಳನ್ನು ಪಡೆದಿದ್ದರು. ಅಂತಿಮವಾಗಿ ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಲಾಗಿದೆ.

ಕೊಪ್ಪಳ ಘಟಕದ ಶ್ರೀನಿವಾಸ್ ಅವರು ಮೂರನೇ ಬಾರಿ ಉಪಸಭಾಪತಿಯಾಗಿ ಆಯ್ಕೆಯಾದರು ಎಂದು ಪ್ರಕಟಣೆ ತಿಳಿಸಿದೆ.

ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ತನ್ನ ಪ್ರಕಟಣೆಯ ಪುಸ್ತಕಗಳ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಏ.1ರಿಂದ ಏ.30ರವರೆಗೆ ಈ ಕೊಡುಗೆ ಇರಲಿದೆ. ವಿಳಾಸ https://kuvempubhashabharathi.karnataka.gov.in/ ಮೂಲಕ ಕೂಡ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸಬಹುದು ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಏ.6ರಿಂದ ವಿಷ್ಣು ಸಹಸ್ರನಾಮ ಪಾರಾಯಣ

ಬೆಂಗಳೂರು: ನಗರದ ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಭುವನಗಿರಿ ರಾಯರ ಮಠದಲ್ಲಿ ಜುಲೈ 13ರಂದು ವಿಷ್ಣು ಸಹಸ್ರನಾಮ ಮಹಾಯಜ್ಞವನ್ನು ಆಯೋಜಿಸಲಾಗಿದೆ.

ಇದಕ್ಕೆ ಪೂರ್ವಭಾವಿಯಾಗಿ ಏಪ್ರಿಲ್ 6ರಿಂದ ಜುಲೈ 6ವರೆಗೆ ಪ್ರತಿ ಭಾನುವಾರ ಸಂಜೆ 4 ಗಂಟೆಯಿಂದ 6.30ರವರೆಗೆ ಭುವನಗಿರಿ ರಾಯರ ಮಠದಲ್ಲಿ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಲಿದೆ.

ಲೋಕಕಲ್ಯಾಣಾರ್ಥವಾಗಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಯಾವುದೇ ಶುಲ್ಕವಿರುವುದಿಲ್ಲ ಎಂದು ಕಾರ್ಯಕ್ರಮದ ಸಂಚಾಲಕ ಮಂಜುನಾಥ ಎನ್. ಭಾರದ್ವಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಯಕ್ರಮಕ್ಕೆ ಹೆಸರು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ 9980300790, 9110616295 ಸಂಪರ್ಕಿಸಬಹುದು.

4ರಿಂದ ಆಚಾರ್ಯ ಕಲಾಕೃತಿಗಳ ಪ್ರದರ್ಶನ

ಬೆಂಗಳೂರು: ಚಿತ್ರಕಲಾವಿದ ಎಂ.ಟಿ.ವಿ.ಆಚಾರ್ಯ ಸ್ಮರಣಾರ್ಥ, ಅವರ ಚಿತ್ರಕಲೆಗಳ ಪ್ರದರ್ಶನವನ್ನು ಏ.4ರಿಂದ 13ರವರೆಗೆ ನಗರದ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಲಾಗಿದೆ.

ಏ.4ರಂದು ಬೆಳಿಗ್ಗೆ 10.30ಕ್ಕೆ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಲಾಗುತ್ತದೆ. 'ಆಚಾರ್ಯ ಜೀವನ ಮತ್ತು ಕಲಾಪಯಣ' ಎಂಬ ವಿಷಯದ ಕುರಿತು ವಿಶೇಷ ದೃಶ್ಯಾವಳಿಯೊಂದಿಗೆ ಉಪನ್ಯಾಸವನ್ನು ಏರ್ಪಡಿಸಲಾಗಿದೆ. ಪ್ರತಿ ದಿನ 10.30ರಿಂದ ಸಂಜೆ 7 ಗಂಟೆಯವರೆಗೆ ಪ್ರದರ್ಶನವಿರುತ್ತದೆ. ಚಿತ್ರಕಲಾ ಪ್ರದರ್ಶನದ ಕುರಿತ ಹೆಚ್ಚಿನ ಮಾಹಿತಿಗಾಗಿ 9972027514 ಸಂಪರ್ಕಿಸಬಹುದು.

ಬಿಎಂಟಿಸಿ ಸಾಮಾನ್ಯ ಬಸ್‌ಗಳಲ್ಲಿಯೂ ಜಾರಿಯಾಗಿದ್ದ ಯುಪಿಐ ಪದ್ಧತಿ

ಕೋಟಿ ರೂ. ದಾಟಿದ ಯುಪಿಐ ವರಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾನಿಯಂತ್ರಿತ ಬಸ್‌ಗಳಿಗಷ್ಟೇ ಸೀಮಿತವಾಗಿದ್ದ ಯುಪಿಐ ಮೂಲಕ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆಯನ್ನು ಸಾಮಾನ್ಯ ಬಸ್‌ಗಳಿಗೂ ಅಳವಡಿಸಿದ ಬಳಿಕ ಯುಪಿಐಯಿಂದ ಪ್ರತಿದಿನ ಸಂಗ್ರಹವಾಗುವ ವರಮಾನ ₹1 ಕೋಟಿ ಮೀರಿದೆ.

ಕೋವಿಡ್ ಬಂದಾಗ ಅಂತರ ಕಾಪಾಡಿಕೊಳ್ಳಬೇಕು ಎಂಬ ಕಾರಣಕ್ಕೆ 2021ರ ಮೇ ತಿಂಗಳಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆ ಪರಿಚಯಿಸಲಾಗಿತ್ತು. ಆ ವರ್ಷ ದಿನಕ್ಕೆ ಸರಾಸರಿ ₹15 ಸಾವಿರ ಯುಪಿಐ ಮೂಲಕ ಬಿಎಂಟಿಸಿಗೆ ವರಮಾನ ಬಂದಿತ್ತು. ಆನಂತರ ಜನಸಂಚಾರ ಹೆಚ್ಚಾದ ಮೇಲೆ ಸಮಯದ ಕೊರತೆ, ನೆಟ್‌ವರ್ಕ್ ಸಮಸ್ಯೆ ಇನ್ನಿತರ ಕಾರಣಗಳಿಂದ ಸಾಮಾನ್ಯ ಬಸ್‌ಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಯುಪಿಐ ಬಳಕೆಯಾಗಿರಲಿಲ್ಲ.

ದೇವನಹಳ್ಳಿಯಲ್ಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬನ್ನೇರುಘಟ್ಟ ಸಹಿತ ಪ್ರಮುಖ ಸ್ಥಳಗಳಿಗೆ ಸಂಚರಿಸುವ ಹವಾನಿಯಂತ್ರಿತ ಬಸ್‌ಗಳಲ್ಲಿ ಮಾತ್ರ ಯುಪಿಐ ಮೂಲಕ ಟಿಕೆಟ್ ದರ ಪಾವತಿಸುವ ವ್ಯವಸ್ಥೆ ಮುಂದುವರಿದಿತ್ತು.

ಆಗಿನಿಂದಲೂ ಯುಪಿಐ ಮೂಲಕ ಟಿಕೆಟ್ ದರ ಪಾವತಿಸುವವರ ಸಂಖ್ಯೆ ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತಾ ಬಂದಿತ್ತು. 2024ರ ಜನವರಿಯಲ್ಲಿ ದಿನಕ್ಕೆ ಸರಾಸರಿ ₹20.25 ಲಕ್ಷ ಯುಪಿಐ ಮೂಲಕ ಪಾವತಿಯಾಗಿದ್ದರೆ, 2024ರ ಡಿಸೆಂಬರ್‌ನಲ್ಲಿ ದಿನಕ್ಕೆ ಸರಾಸರಿ ₹33.12 ಲಕ್ಷಕ್ಕೆ ಏರಿತ್ತು. ಈ ವರ್ಷ ಜನವರಿ ಅಂತ್ಯದಲ್ಲಿ ಎಲ್ಲ ಬಸ್‌ಗಳಲ್ಲಿಯೂ ಈ ವ್ಯವಸ್ಥೆ ಆರಂಭವಾಯಿತು. ಪ್ರಸ್ತುತ, ಕ್ಯೂಆರ್ ಕೋಡ್‌ಗಳಿರುವ ಕರಪತ್ರವನ್ನು ಪ್ರತಿ ಬಸ್‌ನ ಒಳಗೆ ಏಳೆಂಟು ಕಡೆಗಳಲ್ಲಿ ಅಂಟಿಸಲಾಗಿದೆ.

ಈ ವರ್ಷ ಫೆಬ್ರುವರಿಯಲ್ಲಿ ದಿನಕ್ಕೆ ಸರಾಸರಿ ₹1.04 ಕೋಟಿ ವರಮಾನವು ಯುಪಿಐ ಮೂಲಕ ಸಂಗ್ರಹವಾಗಿತ್ತು. ಇದು ಟಿಕೆಟ್ ಮೂಲಕ ಸಂಗ್ರಹವಾಗುವ ಒಟ್ಟು ವರಮಾನದ ಶೇ 35ರಷ್ಟು ಆಗಿದೆ. ಮಾರ್ಚ್‌ನಲ್ಲಿ ದಿನಕ್ಕೆ ಸರಾಸರಿ ₹1.14 ಕೋಟಿ (ಶೇ 39.80) ಸಂಗ್ರಹವಾಗಿದೆ ಎಂದು ಬಿಎಂಟಿಸಿಯ ಸಂಚಾರ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ಯುಪಿಐ ಆಧಾರಿತವಾಗಿ ಸಂಗ್ರಹವಾದ ಬಿಎಂಟಿಸಿ ವರಮಾನ

ಅವಧಿ	ವರಮಾನ
2021ರ ಮೇ ನಿಂದ ಡಿಸೆಂಬರ್‌ವರೆಗೆ	₹36.90 ಲಕ್ಷ
2022ರ ಜನವರಿಯಿಂದ ಡಿಸೆಂಬರ್‌ವರೆಗೆ	₹11.45 ಕೋಟಿ
2023ರ ಜನವರಿಯಿಂದ ಡಿಸೆಂಬರ್‌ವರೆಗೆ	₹48.25 ಕೋಟಿ
2024ರ ಜನವರಿಯಿಂದ ಜುಲೈವರೆಗೆ	₹50.69 ಕೋಟಿ
2025ರ ಫೆಬ್ರುವರಿಯಲ್ಲಿ ಸಂಗ್ರಹ	₹83.39 ಕೋಟಿ
2025ರ ಮಾರ್ಚ್‌ನಲ್ಲಿ ಸಂಗ್ರಹ	₹89.20 ಕೋಟಿ

ಸರಳಗೊಂಡ ವ್ಯವಸ್ಥೆ

ಯುಪಿಐ ಪಾವತಿ ವಿಧಾನವನ್ನು ಅನುಸರಿಸುತ್ತಿರುವುದರಿಂದ ಟಿಕೆಟ್ ನೀಡಿ ಹಣ ಪಡೆದುಕೊಳ್ಳುವ ವ್ಯವಸ್ಥೆಯು ಸರಳಗೊಂಡಿದೆ. ವೇಗ ಪಡೆದುಕೊಂಡಿದೆ ಮತ್ತು ಪಾರದರ್ಶಕವಾಗಿದೆ. ಪ್ರಯಾಣಿಕರಿಗೆ ಸುಲಭ, ಸುರಕ್ಷಿತ ಮತ್ತು ನಗದುರಹಿತ ಪಾವತಿ ಅನುಭವವನ್ನು ಬಿಎಂಟಿಸಿ ಒದಗಿಸಿದೆ. ಬಸ್ ನಿರ್ವಾಹಕರಿಗೂ ಚಿಲ್ಲರೆ ಸಮಸ್ಯೆಯ ಕಿರಿಕಿರಿ ಕಡಿಮೆಯಾಗಿದೆ. ಮುಂದಿನ ದಿನಗಳಲ್ಲಿ ಡಿಜಿಟಲ್ ಪಾವತಿಯನ್ನು ಇನ್ನಷ್ಟು ಪ್ರಯಾಣಿಕರು ಅಳವಡಿಸಿಕೊಳ್ಳುವ ವಿಶ್ವಾಸವಿದೆ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ. ಪ್ರಭಾಕರ್ ರೆಡ್ಡಿ ತಿಳಿಸಿದರು.

'ಬಿಜೆಪಿಯ ಹತಾಶ ಮನಃಸ್ಥಿತಿ'

ಪ್ರಜಾವಾಣಿ ವಾರ್ತೆ

ರಮೇಶ್ ಬಾಬು

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ನೇರವಾಗಿ ಎದುರಿಸಲು ಸಾಧ್ಯವಾಗದೆ ಹಿಂಬಾಗಿಲ ಮೂಲಕ ಹಣಿಯಲು ಬಿಜೆಪಿ ಯತ್ನಿಸುತ್ತಿದೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನೇರವಾಗಿ ರಾಜಕೀಯ ಮಾಡಬೇಕೆ ಹೊರತು ತೆರೆಮರೆಯಲ್ಲಿ ಅಲ್ಲ. ಇದು ಹತಾಶ ಮನಃಸ್ಥಿತಿ' ಎಂದು ಟೀಕಿಸಿದರು.

'ಶಿವಕುಮಾರ್ ಅವರು ದೆಹಲಿಯಲ್ಲಿ ಖಾಸಗಿ ಸುದ್ದಿ ವಾಹಿನಿಗೆ ಮಾತನಾಡಿದ ವಿಡಿಯೊ ತುಣುಕು ಇಟ್ಟುಕೊಂಡು ಅವರ ವಿರುದ್ಧ ಬಿಜೆಪಿ ಅಪಪ್ರಚಾರಕ್ಕೆ ಇಳಿದಿದೆ. ಸಂವಿಧಾನ ಬದಲಾವಣೆ ಬಗ್ಗೆ ಶಿವಕುಮಾರ್ ಮಾತನಾಡಿದರು ಎನ್ನುವ ಅಪಪ್ರಚಾರದಿಂದ ಬಿಜೆಪಿಯವರೇ ಬೆತ್ತಲಾಗಿದ್ದಾರೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

Ebenezer Educational Charitable Trust (R)
NEW EBENEZER INSTITUTE OF TECHNOLOGY
No.19, Hennur Bagalur main road, Kothanur Post, Bangalore-560077
Invites Applications for the following Positiions
PRINCIPAL
Qualification & Experience: As per AICTE/VTU norms
Preference will be given to the experienced candidates
PROFESSORS, ASSOCIATE & ASSISTANT PROFESSORS
in the following disciplines.CSE, CSE (AI&ML), CSE (AI&DS), ISE, ECE, Engineering Mathematics, Physics, Chemistry, Kannada & English
NON TEACHING
System Admin | Office Admin | Lab Instructors | Accountants | HR | Placement Officer | Lab Technicians |
Qualification & Salary as per UGC/AICTE norms
Interested candidates are requested to send their application by Email to info@neit.edu.in
Mobile: 9880462926 - Secretary, EECT

SRI.RAMAKRISHNA EDUCATION Society, Halasuru Requires Experienced TEACHERS BSc/MSc,BEd Science, Maths & BA/MA,BEd for English, Kannada,NTT, Crafts Teacher & PE Teacher. 8861248642/ 9845048824 Mail: srkes1963@gmail.com

Wanted

WALK IN INTERVIEWS FOR JEWELLERY SALES PERSONS !
We are urgently hiring for a highly reputed new JEWELLERY SHOWROOM OPENING SHORTLY at Jayanagar.
Exp: 1 year to 5 years.
Walk in on 3rd, 4th or 5th April from 11 am to 3 pm.
for more details Call or Whatsapp Mr. Ganesh
93900 21935
83105 02638

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

I,ANNIE SHEENA K G Residing at No.535, 14th Main Road, Lal Bahaddur Shastri-Nagar, BDA Layout, Anjanapura 10th Block, Further Extension, Bengaluru-560108 have changed my name to SHEENA TONY vide Affidavit dtd:28.03.2025 Sworn Before Notary G.R.Rajanna, Bengaluru

PERSONAL

Change of Name

CHANGE OF NAME
I, AYSHA SULTANA Residing at No. 18/3, New No. 31/3, 3rd Main, Opp Maruthi Layout, BTM 1st Stage, Bangalore-560029 have changed my name to AYESHA SULTANA vide affidavit dated 01.04.2025 before notary D.K Rameshappa, Bangalore. Henceforth I shall be known as AYESHA SULTANA only.

CHANGE OF NAME
I. Santosh S Halli (Santoshkumar S Halli) residing at Shakuntala Bayi, Chwl, Ramnagar, 1st cross. Dharwad, Karnataka 580001, have changed my name to SANTOSHKUMAR SAMUEL HALLI vide Affidavit dated 28 March 2025 before Advocate and Notary Ravi, Bengaluru-560040.

CHANGE OF NAME
I, Kishore Kumar B, residing at # 13, 5th Cross, Oil Mill Road, Aravind Nagar, Lingarajapuram, Bengaluru-560084, have changed my name to KISHORE B vide affidavit dated 02-04-2025, sworn before Notary K.H. Nagaraja, Bengaluru.

Lost

LOST
I, ASHA W/o Mr. KANTARAJ, have lost Original Absolute Sale Deed dated, 27/2/1997 bearing Document No, 3538 of Book-1, Volumes 3979, Pages: 178 to 186 pertaining to property No.163, 2nd Main Road, O.R.C. Road, Rudrappa Garden, Bengaluru, while in transit. If found pls Contact No.: 7406590127.

CONNECT

ಶ್ರೀ ಕಾಂಚೀಪುರಂ ರೇಷ್ಮೆ ಸೆಂಟರ್
10 Days only
SPOT CASH
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 03-04-2025 - 14-04-2025
ಶ್ರೀ ಕಾಂಚೀಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಒಂದು ಟ್ಯಾಂಕರ್ ನೀರಿಗೆ ನಗರದ ಕೆಲವೆಡೆ ₹800 ತೆರಬೇಕಾದ ಅನಿವಾರ್ಯ

ಹೆಚ್ಚಿದ ಧಗೆ: ಟ್ಯಾಂಕರ್ ಭರಾಟೆ ಶುರು

• ಗಾಣಧಾಳು ಶ್ರೀಕಂಠ

ಸಾಂದರ್ಭಿಕ ಚಿತ್ರ

ಬೆಂಗಳೂರು: ಬೇಸಿಗೆ ಧಗೆ ಏರುತ್ತಿರುವಂತೆಯೇ ನಗರದ ಹೊರವಲಯದಲ್ಲಿರುವ ಬಡಾವಣೆಗಳಲ್ಲಿ ನೀರಿನ ಟ್ಯಾಂಕರ್‌ಗಳ ಓಡಾಟ ಜೋರಾಗಿದೆ. ಖಾಸಗಿ ಟ್ಯಾಂಕರ್‌ಗಳ ಮಾಲೀಕರು ನೀರಿಗೆ ಮನಸೋ ಇಚ್ಛೆ ದರ ತೆಗೆದುಕೊಳ್ಳುತ್ತಿದ್ದಾರೆ ಎಂಬ ದೂರುಗಳೂ ಕೇಳಿಬರುತ್ತಿವೆ.

ಕಳೆದ ವರ್ಷ ಇದೇ ಅವಧಿಯಲ್ಲಿ ನೀರಿನ ಹಾಹಾಕಾರ ಹೆಚ್ಚಾಗಿ, ಟ್ಯಾಂಕರ್ ನೀರು ದುಬಾರಿಯಾಗಿತ್ತು. ಆಗ ನಿವಾಸಿಗಳು ಸ್ಥಳೀಯ ಆಡಳಿತಕ್ಕೆ ದೂರು ನೀಡಿದ್ದರು. ನಂತರ ಜಲಮಂಡಳಿ, ಇಂತಿಷ್ಟು ಲೀಟರ್ ನೀರಿಗೆ ಇಷ್ಟೇ ಬೆಲೆ ಎಂದು ನಿಗದಿಪಡಿಸಿ ಆದೇಶ ಹೊರಡಿಸಿತ್ತು. ಆದರೆ, ಈ ವರ್ಷವೂ ಟ್ಯಾಂಕರ್ ನೀರಿನ ದರ ನಿಧಾನವಾಗಿ ಏರಿಕೆಯಾಗುತ್ತಿದ್ದು, ಜಲಮಂಡಳಿಯಾಗಲಿ, ಜಿಲ್ಲಾಡಳಿತವಾಗಲಿ ಈ ಬಗ್ಗೆ ಗಮನಹರಿಸುತ್ತಿಲ್ಲ ಎಂಬುದು ನಾಗರಿಕರ ದೂರು.

ಪೀಣ್ಯ, ದಾಸರಹಳ್ಳಿ ಹಾಗೂ ಬೆಂಗಳೂರಿನ ಪೂರ್ವ ತಾಲ್ಲೂಕಿನ ಮಹದೇವಪುರ, ಕೆ.ಆರ್.ಪುರ, ರಾಮಮೂರ್ತಿ ನಗರ, ವೈಟ್‌ಫೀಲ್ಡ್ ಭಾಗದಲ್ಲಿ 5,500 ಲೀಟರ್ ನೀರಿನ ಒಂದು ಟ್ಯಾಂಕರ್‌ಗೆ ₹750ರವರೆಗೂ ಹಣ ಪಡೆಯಲಾಗುತ್ತಿದೆ.

'ಹೆಗ್ಗನಹಳ್ಳಿ ಕ್ರಾಸ್, ಲಕ್ಷ್ಮಣ ನಗರ, ಗಜಾನನ ನಗರ, ಮುದ್ದೂರಮ್ಮ ಬಡಾವಣೆ, ಲಗ್ಗೆರೆ, ಪ್ರೀತಿನಗರ, ಲಕ್ಷ್ಮೀದೇವಿನಗರ, ಸುಂಕದಕಟ್ಟೆ, ಮುತ್ತರಾಯನಗರ, ಶ್ರೀನಿವಾಸನಗರ ವ್ಯಾಪ್ತಿಯಲ್ಲಿ ಟ್ಯಾಂಕರ್ ಮಾಲೀಕರೇ ನೀರಿನ ಬೆಲೆ ಹೆಚ್ಚಿಸಿದ್ದಾರೆ. ಕೆಲವೊಮ್ಮೆ ಟ್ಯಾಂಕರ್‌ಗೆ ₹700ರಿಂದ ₹750 ಹಣಕೊಟ್ಟು ಖರೀದಿಸುತ್ತಿದ್ದೇವೆ' ಎನ್ನುತ್ತಾರೆ ನಾಗರಿಕರು.

ಕೆಂಚೇನಹಳ್ಳಿ ಚನ್ನಸಂದ್ರ, ಗೊರಗುಂಟೆಪಾಳ್ಯ ಭಾಗದಲ್ಲಿಯೂ ಒಂದು ವಾರದಿಂದ ಆರು ಸಾವಿರ ಲೀಟರ್ ನೀರಿನ ಟ್ಯಾಂಕ್ ಲೋಡ್‌ಗೆ ₹600ರಿಂದ ₹800 ವಸೂಲಿ ಮಾಡಲಾಗುತ್ತಿದೆ. ಕೈಗಾರಿಕಾ ಪ್ರದೇಶಗಳು ಮತ್ತು ಹೆಚ್ಚು ಅಪಾರ್ಟ್‌ಮೆಂಟ್‌ಗಳಿರುವ ವೈಟ್‌ಫೀಲ್ಡ್ ಭಾಗದಲ್ಲಿ ಕೆಲವೆಡೆ ಸಾವಿರ ರೂಪಾಯಿ ದಾಟುತ್ತಿದೆ. ಟ್ಯಾಂಕರ್ ನೀರಿಗೆ ಮನಸೋಇಚ್ಛೆ ಹಣ ತೆಗೆದುಕೊಳ್ಳುತ್ತಿದ್ದಾರೆಂಬ ಆರೋಪಗಳೂ ಇವೆ.

ಬೊಮ್ಮನಹಳ್ಳಿ, ವೈಟ್‌ಫೀಲ್ಡ್ ಸೇರಿದಂತೆ ನಗರದ ಹೊರ ವಲಯದಲ್ಲಿರುವ (110 ಹಳ್ಳಿಗಳ ವ್ಯಾಪ್ತಿಯ) ಬಹಳಷ್ಟು ಅಪಾರ್ಟ್‌ಮೆಂಟ್‌ಗಳು ಟ್ಯಾಂಕರ್ ನೀರನ್ನು ಅವಲಂಬಿಸಿವೆ. ಇಂತಹ ಕಡೆ ನಿರಂತರವಾಗಿ ನೀರು ಪೂರೈಕೆ ಮಾಡುವ ಟ್ಯಾಂಕರ್‌ನವರು ಬೆಲೆ ಹೆಚ್ಚು ಕೇಳುವುದಿಲ್ಲ. ಹೊಸದಾಗಿ ಅಥವಾ ಅಪರೂಪಕ್ಕೊಮ್ಮೆ ನೀರು ತರಿಸಿಕೊಳ್ಳುವವರ ಬಳಿ ಹೆಚ್ಚು ಹಣ ಕೇಳುತ್ತಾರೆ ಎಂದು ರಾಮಮೂರ್ತಿ ನಗರ, ಟಿನ್ ಫ್ಯಾಕ್ಟರಿ, ಕೆ.ಆರ್. ಪುರ ಸುತ್ತಮುತ್ತಲಿನ ನಿವಾಸಿಗಳು ಹೇಳುತ್ತಾರೆ.

'6000 ಲೀಟರ್ ನೀರು ಖರೀದಿಯ ವೆಚ್ಚ, ಇಂಧನ, ಚಾಲಕರ ವೇತನ, ವಾಹನ ನಿರ್ವಹಣೆಗೆ ಕನಿಷ್ಠ ₹700-₹800 ತಗುಲಲಿದೆ. ಸರ್ಕಾರ ನಿಗದಿಪಡಿಸುವ ದರದಲ್ಲಿ ವ್ಯವಹರಿಸುವುದು ಕಷ್ಟಸಾಧ್ಯ' ಎನ್ನುತ್ತಾರೆ ಟ್ಯಾಂಕರ್ ಮಾಲೀಕ ಪ್ರಕಾಶ್.

'ಸುಮಾರು ಇಪ್ಪತ್ತು–ಮೂವತ್ತು ಕಿ.ಮೀ. ದೂರದಿಂದ ನೀರು ತರಬೇಕು. ಇಂಧನ ವೆಚ್ಚ, ನೀರಿಗೆ ತಗಲುವ ವೆಚ್ಚ, ನಮ್ಮ ದುಡಿಮೆ ಎಲ್ಲ ಸೇರಿದರೆ, 5 ಸಾವಿರ ಲೀಟರ್ ನೀರನ್ನು ₹500ರಿಂದ ₹600ಕ್ಕೆ ಮಾರಾಟ ಮಾಡುವುದು ಕಷ್ಟ' ಎನ್ನುವುದು ಟ್ಯಾಂಕರ್ ಮಾಲೀಕರ ಅಭಿಪ್ರಾಯ.

ಆನ್‌ಲೈನ್ ಬುಕ್ಕಿಂಗ್: ಏಪ್ರಿಲ್‌ನಲ್ಲಿ ಶುರು

ಬೇಸಿಗೆಯಲ್ಲಿ ನೀರಿನ ಕೊರತೆ ನೀಗಿಸಲು ಮತ್ತು ಖಾಸಗಿ ಟ್ಯಾಂಕರ್‌ಗಳು ದುಬಾರಿ ದರ ವಸೂಲಿ ಮಾಡುವುದನ್ನು ನಿಯಂತ್ರಿಸಲು ಬೆಂಗಳೂರು ಜಲಮಂಡಳಿ 'ಆ್ಯಪ್' ಆಧಾರಿತ ಟ್ಯಾಂಕರ್ ನೀರು ಖರೀದಿ ವ್ಯವಸ್ಥೆಯನ್ನು ಜಾರಿಗೊಳಿಸಲು ಸಿದ್ಧತೆ ನಡೆಸಿದೆ.

ಗ್ರಾಹಕರು ಈ ಮೊಬೈಲ್ ಅಪ್ಲಿಕೇಷನ್ ಮೂಲಕ ನೀರಿನ ಟ್ಯಾಂಕರ್‌ಗಳನ್ನು ಬುಕ್ ಮಾಡಬಹುದು. ಜಿಲ್ಲಾಡಳಿತ ನಿಗದಿಪಡಿಸಿರುವ ಬೆಲೆಯಲ್ಲಿ, ನಿಗದಿತ ಅವಧಿಯಲ್ಲಿ ನೀರು ಪೂರೈಕೆಯಾಗಲಿದೆ. ಶೀಘ್ರದಲ್ಲೇ ಮೊಬೈಲ್ ಅಪ್ಲಿಕೇಷನ್ ಲಿಂಕ್ ಅನ್ನು ಜಲಮಂಡಳಿ ಜಾಲತಾಣದಲ್ಲಿ ಪ್ರಕಟಿಸಲಿದೆ.

'ನೀರು ಪೂರೈಕೆದಾರರ ವಿವರಗಳನ್ನು ಜಾಲತಾಣಕ್ಕೆ ಅಪ್‌ಲೋಡ್ ಮಾಡಲಾಗುತ್ತಿದೆ. ಏಪ್ರಿಲ್ ಮೊದಲ ವಾರದಿಂದ ಕಾರ್ಯರೂಪಕ್ಕೆ ಬರಲಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಕಳೆದ ವರ್ಷದ ಆದೇಶ ಮುಂದುವರಿಕೆ

2024ರ ಮಾರ್ಚ್ 6ರಂದು ಬೆಂಗಳೂರು ನಗರ ಜಿಲ್ಲಾಡಳಿತ ಖಾಸಗಿ ನೀರಿನ ಟ್ಯಾಂಕರ್‌ಗಳಿಗೆ ದರ ನಿಗದಿ ಮಾಡಿ ಆದೇಶ ಹೊರಡಿಸಿತ್ತು. ಆ ಪ್ರಕಾರ, 5 ಕಿ.ಮೀ. ವ್ಯಾಪ್ತಿವರೆಗೆ 6,000 ಲೀಟರ್ ನೀರಿನ ಟ್ಯಾಂಕರ್‌ಗೆ ₹600, 8,000 ಲೀಟರ್‌ಗೆ ₹700, ₹12,000 ಲೀಟರ್‌ಗೆ ₹1,000 ಮತ್ತು 5ರಿಂದ 10 ಕಿ.ಮೀ.ವರೆಗೆ ಕಿಮೀ ವ್ಯಾಪ್ತಿಯವರೆಗೆ 6000 ಲೀಟರ್‌ಗೆ ₹750 ರೂ., 8,000 ಲೀಟರ್ ನೀರಿನ ಟ್ಯಾಂಕರ್‌ಗೆ ₹850, 12,000 ಲೀಟರ್‌ಗೆ ₹1,200 ನಿಗದಿಪಡಿಸಿ ಆದೇಶಿಸಿದೆ. ಈ ವರ್ಷವೂ ಇದನ್ನೇ ಮುಂದುವರಿಸುವಂತೆ ಈ ವರ್ಷದ ಫೆಬ್ರುವರಿಯಲ್ಲಿ ಜಲಮಂಡಳಿ ಸುತ್ತೋಲೆ ಹೊರಡಿಸಿದೆ.

ಆದರೆ, ಆ ಸುತ್ತೋಲೆಯಲ್ಲಿ ನಿಗದಿತ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುವ ನೀರಿನ ಟ್ಯಾಂಕರ್‌ಗಳ ವಿರುದ್ಧ ಎಲ್ಲಿಗೆ ದೂರು ಕೊಡಬೇಕು ಎಂಬ ಮಾಹಿತಿ ಇಲ್ಲ. ಹೀಗಾಗಿ ಯಾವುದೇ ನಿಯಂತ್ರಣವಿಲ್ಲದೇ ಟ್ಯಾಂಕರ್ ಮಾಲೀಕರು ಹಣ ವಸೂಲಿ ಮಾಡುತ್ತಿದ್ದಾರೆ ಎಂಬುದು ನಾಗರಿಕರ ದೂರು.

'ಮನವಿಯಂತೆ ವಾಣಿಜ್ಯ ಪಾರ್ಕಿಂಗ್ ಶುಲ್ಕ ಕಡಿತ'

ಶುಲ್ಕ ಹೆಚ್ಚಾದರೆ ಆಕ್ಷೇಪ ಸಲ್ಲಿಸಲಿ: ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ತುಷಾರ್ ಗಿರಿನಾಥ್

ಬೆಂಗಳೂರು: 'ವಾಣಿಜ್ಯ ಕಟ್ಟಡದವರು ಪಾರ್ಕಿಂಗ್ ಶುಲ್ಕವನ್ನು ಕಡಿಮೆ ಮಾಡಬೇಕೆಂದು ಎಂದು ಮನವಿ ಮಾಡಿದ್ದರು. ಅದರಂತೆ ಶುಲ್ಕವನ್ನು ಪರಿಷ್ಕರಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಕಚೇರಿ ಪ್ರದೇಶವಿದೆ, ಅದರಲ್ಲಿ ಪಾರ್ಕಿಂಗ್‌ಗೆ ಹೆಚ್ಚು ತೆರಿಗೆ ಹಾಕುತ್ತಿದ್ದೀರಿ ಎಂದು ಆಕ್ಷೇಪಣೆ ಮಾಡಿದ್ದರು. ಅದನ್ನು ಪರಿಗಣಿಸಿ ಅವರಿಗೆ ಶುಲ್ಕವನ್ನು ಕಡಿಮೆ ಮಾಡಲಾಗಿದೆ. ವಸತಿಯವರಿಗೆ ಶುಲ್ಕ ಹೆಚ್ಚಾಗಿದೆ ಎಂದು ಎನ್ನಿಸಿದ್ದರೆ ಆಕ್ಷೇಪಣೆ ಸಲ್ಲಿಸಲಿ, ಅದನ್ನು ಪರಿಶೀಲಿಸುತ್ತೇವೆ' ಎಂದು ಸುದ್ದಿಗೋಷ್ಠಿಯಲ್ಲಿ ಬುಧವಾರ ಹೇಳಿದರು.

'ಎಲ್ಲರಿಗೂ ಏಕರೂಪದಲ್ಲಿ ಪಾರ್ಕಿಂಗ್ ಶುಲ್ಕ ಇರಬೇಕು ಎಂಬ ದೃಷ್ಟಿಯಿಂದ ಕಡಿಮೆ ಮಾಡಿದ್ದೇವೆ. ಕಳೆದ ವರ್ಷ ಪಾರ್ಕಿಂಗ್ ಶುಲ್ಕ ₹221 ಕೋಟಿ ಸಂಗ್ರಹವಾಗಿತ್ತು. ಈ ಕಡಿತದಿಂದ ₹40 ಕೋಟಿ ಕಡಿಮೆಯಾಗಲಿದೆ. ವಸತಿಯೇತರ ಅಥವಾ ವಾಣಿಜ್ಯ ಕಟ್ಟಡಗಳಿಂದಲೇ ಸುಮಾರು ₹35 ಕೋಟಿ ಕಡಿಮೆಯಾಗಲಿದೆ' ಎಂದು ಮಾಹಿತಿ ನೀಡಿದರು.

'ಒಂದೇ ರೀತಿಯ ಶುಲ್ಕವನ್ನು ಜಾರಿಗೆ ತಂದಿರುವುದರಿಂದ ವಸತಿ ಪ್ರದೇಶದವರಿಗೆ ಹೆಚ್ಚಾಗುತ್ತದೆ ಎಂಬುದಾದರೆ ಅವರು ಆಕ್ಷೇಪಣೆ ಸಲ್ಲಿಸಲಿ. ಯಾರಿಗೂ ಹೆಚ್ಚಾಗುವುದಿಲ್ಲ ಎಂಬುದು ನಮ್ಮ ಭಾವನೆ. ಎಲ್ಲವೂ ಸರಿ ಇದೆ ಎಂದೇನೂ ಹೇಳುವುದಿಲ್ಲ. ನಮ್ಮ ಮೇಲೆ ಸರ್ಕಾರ ಇದೆ, ಮುಖ್ಯಮಂತ್ರಿ ಇದ್ದಾರೆ, ಉಪ ಮುಖ್ಯಮಂತ್ರಿ ಇದ್ದಾರೆ, ನಗರಾಭಿವೃದ್ಧಿ ಇಲಾಖೆ ಇದೆ. ಅವರು ಕ್ರಮ ಕೈಗೊಳ್ಳಲಿದ್ದಾರೆ' ಎಂದರು.

'ವಲಯ ವರ್ಗೀಕರಣದ ಆಧಾರದಲ್ಲಿ ಈವರೆಗೆ ಯುನಿಟ್ ದರದಲ್ಲಿ ಪ್ರತಿ ಚದರಡಿಗೆ ಶೇ 50ರಷ್ಟು ಪಾರ್ಕಿಂಗ್ ಶುಲ್ಕವನ್ನು ಆಸ್ತಿ ತೆರಿಗೆಯಲ್ಲಿ ಸಂಗ್ರಹಿಸಲಾಗುತ್ತಿದೆ. ವಸತಿ ಪ್ರದೇಶದಲ್ಲಿ ಎಲ್ಲರಿಗೂ ಚದರ ಅಡಿಗೆ ₹2 ಮಾಡಲಾಗಿದೆ. ಸಿ ಅಥವಾ ಡಿ ವಲಯ ವರ್ಗೀಕರಣದವರಿಗೆ ಹಳೆಯ ಲೆಕ್ಕಾಚಾರದಂತೆ ಚದರಡಿಗೆ ₹1.20 ಅಥವಾ ₹1.50 ಆಗುತ್ತದೆ ಎಂದು ಇದೀಗ ಹೇಳುತ್ತಿದ್ದಾರೆ. ಇದನ್ನೆಲ್ಲ ಪರಿಶೀಲಿಸಿ, ಸರಿಪಡಿಸುತ್ತೇವೆ' ಎಂದು ಹೇಳಿದರು.

'ವಸತಿ ಪ್ರದೇಶದಲ್ಲಿ ಹಲವರು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅವರು ವಸತಿ ಪ್ರದೇಶದ ಪ್ರಕಾರ ಆಸ್ತಿ ತೆರಿಗೆ ಪಾವತಿಸುತ್ತಿರುವುದು ಕಾನೂನು ಉಲ್ಲಂಘನೆ ಅಲ್ಲವೇ? ಪಾರ್ಕಿಂಗ್ ಶುಲ್ಕ ಒಂದೇ ರೀತಿ ಇರಬೇಕು ಎಂದು ನಾವು ಶುಲ್ಕ ನಿಗದಿ ಮಾಡಿ, ಹಿಂದಿನ ದರಕ್ಕಿಂತ ಕಡಿಮೆ ಮಾಡಿದ್ದೇವೆ. ಸರಾಸರಿ ತೆಗೆದುಕೊಂಡಿರುವುದರಿಂದ ಕೆಳಗಿರುವ ಜನರಿಗೆ ಹೆಚ್ಚಾಗಬಹುದು, ಮೇಲಿನವರಿಗೆ ಕಡಿಮೆಯಾಗಬಹುದು. ಆಕ್ಷೇಪಣೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದರು.

'ವಾಣಿಜ್ಯ ಕಟ್ಟಡಗಳಿಗೆ ಕಷ್ಟ': 'ವಸತಿಯೇತರರಿಗೆ ಹೆಚ್ಚು ಆಸ್ತಿ ತೆರಿಗೆ ಹಾಕುತ್ತಿದ್ದೇವೆ. ಅವರಿಗೆ ಪಾರ್ಕಿಂಗ್ ಶುಲ್ಕವೂ ಹೆಚ್ಚಾಗಿ ಕಷ್ಟವಾಗಿದೆ. ಆದ್ದರಿಂದ ಅವರಿಗೆ ಪಾರ್ಕಿಂಗ್ ಶುಲ್ಕದಲ್ಲಿ ಹೆಚ್ಚು ಕಡಿಮೆ ಮಾಡಲಾಗಿದೆ' ಎಂದು ಹೇಳಿದರು.

'ವಾಣಿಜ್ಯ ಕಟ್ಟಡಗಳಿಗಿಂತ ವಸತಿ ಕಟ್ಟಡಗಳಲ್ಲಿ ಹೆಚ್ಚು ನಿಯಮ ಉಲ್ಲಂಘನೆಯಾಗುತ್ತಿದೆ. ವಸತಿ ಪ್ರದೇಶದಲ್ಲೇ ನಿಯಮ ಪಾಲನೆಯಾಗುತ್ತಿಲ್ಲ. ವಾಣಿಜ್ಯ ಪ್ರದೇಶದಲ್ಲಿ ಉಲ್ಲಂಘನೆ ತುಂಬಾ ಕಡಿಮೆ' ಎಂದರು.

'ಕಾಯ್ದೆಯಂತೆ ಕಸ ನಿರ್ವಹಣೆ ಶುಲ್ಕ'

'2016ರ ಪರಿಸರ ಕಾಯ್ದೆಯಂತೆ 2020ರಲ್ಲಿ ಬಿಬಿಎಂಪಿ ಬೈಲಾ ಮಾಡಲಾಗಿದೆ. ಅದರಂತೆ ಕಸ ನಿರ್ವಹಣೆ ಸೇವಾ ಶುಲ್ಕ ವಿಧಿಸಲಾಗಿದೆ. 2020ರಲ್ಲಿ ಕೌನ್ಸಿಲ್ ಇದ್ದಾಗಲೇ ಶುಲ್ಕ ವಿಧಿಸಲು ನಿರ್ಧಾರ ಮಾಡಲಾಗಿತ್ತು. ಆಗ ನಿರ್ಧರಿಸಿದ್ದ ಶುಲ್ಕಕ್ಕಿಂತ ಅರ್ಧದಷ್ಟು ಮಾತ್ರ ಇದೀಗ ಜಾರಿ ಮಾಡಲಾಗಿದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'2020ರಲ್ಲಿ ನಿಯಮವಾಗಿದ್ದರೂ, ಅದನ್ನು ಜಾರಿಗೆ ತರದಿರುವುದು ಅಪರಾಧ. ಅದನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ. ಹೀಗಾಗಿ, ಕಸ ನಿರ್ವಹಣೆ ಸೇವಾ ಶುಲ್ಕವನ್ನು ಈ ವರ್ಷದಿಂದಲೇ ಹಾಕಲಾಗುತ್ತಿದೆ. ₹683 ಕೋಟಿ ಸಂಗ್ರಹವಾಗಬಹುದೆಂಬ ನಿರೀಕ್ಷೆಯಿದ್ದು, ವಸತಿ ಪ್ರದೇಶಗಳಿಂದ ₹230 ಕೋಟಿ ಸಂಗ್ರಹವಾಗಬಹುದು. ರಾಜ್ಯ ಇತರೆ ನಗರಗಳು ಹಾಗೂ ಮುಂಬೈ, ಪುಣೆ ನಗರಗಳಲ್ಲೂ ಈ ಶುಲ್ಕ ಜಾರಿಯಲ್ಲಿದೆ' ಎಂದರು.

'ಕಸ ನಿರ್ವಹಣೆ ಸೇವಾ ಶುಲ್ಕದಿಂದ ನಿತ್ಯದ ಕಾರ್ಯಾಚರಣೆ ನಡೆಸಬಹುದು. ಸಂಸ್ಕರಣೆಗೆ ನಾವು ಇನ್ನೂ ಹೆಚ್ಚು ಬಂಡವಾಳ ಹೂಡಿಕೆ ಮಾಡಬೇಕಿದೆ. ಶುಲ್ಕ ಪಾವತಿಸುವುದರಿಂದ ನಾಗರಿಕರಿಗೆ ಜವಾಬ್ದಾರಿ ಬರುತ್ತದೆ. ಏನೂ ಕೊಡದೆ ಪಾಲಿಕೆಯಿಂದ ಸೇವೆ ಕೇಳುವುದು ಸರಿಯಲ್ಲ. ಶುಲ್ಕ ಕೊಟ್ಟು ಸೇವೆ ಕೇಳಬೇಕು. ಗಾಡಿ ಬಂದಿಲ್ಲ, ಕಸ ಹೋಗಿಲ್ಲ, ಕಸ ಎಲ್ಲಿ ಹಾಕುತ್ತಿದ್ದಾರೆ ಎಂದು ಪ್ರಶ್ನಿಸಬೇಕು. ನಿತ್ಯ ₹2, ₹3 ಕೊಟ್ಟರೆ ಈ ಪ್ರಶ್ನೆ ಕೇಳುತ್ತಾರೆ ಎಂಬ ಭಾವನೆ ನಮ್ಮದು' ಎಂದು ಹೇಳಿದರು.

ಮಾಲ್‌ಗೆ ಹೋಗಬೇಡಿ: ತುಷಾರ್

'ನಗರದ ಮಾಲ್‌ಗಳಲ್ಲಿ ಪಾರ್ಕಿಂಗ್ ಶುಲ್ಕ ಹೆಚ್ಚಿದೆ ಎಂದರೆ ಅಲ್ಲಿಗೆ ಹೋಗಬೇಡಿ. ಚಿಕ್ಕಪೇಟೆ, ಗಾಂಧಿನಗರದ ಮಾರುಕಟ್ಟೆಗಳಿಗೆ ಜನರು ಹೋಗಲಿ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಮಾಲ್‌ಗಳಲ್ಲಿ ಪಾರ್ಕಿಂಗ್ ಶುಲ್ಕ ಹೆಚ್ಚಿದೆಯಲ್ಲಾ, ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ತುಷಾರ್, 'ಹೆಚ್ಚು ನಿಯಮ ಮಾಡಿದರೆ ಅನುಷ್ಠಾನ ಕಷ್ಟಸಾಧ್ಯ. ಮಾರುಕಟ್ಟೆ ಮುಕ್ತ ಪ್ರದೇಶ. ಅವರು ಹೆಚ್ಚು ಶುಲ್ಕ ಹಾಕುತ್ತಿದ್ದಾರೆ, ಮೋಸ ಮಾಡುತ್ತಿದ್ದಾರೆ ಎಂದರೆ ಅಲ್ಲಿಗೆ ಹೋಗಬೇಡಿ. ಬೇರೆ ಕಡೆಗೆ ಹೋಗಿ' ಎಂದು ಸಲಹೆ ನೀಡಿದರು.

'ಕಾಂತರಾಜ ವರದಿ ಶೀಘ್ರವೇ ಚರ್ಚೆಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂತರಾಜ ವರದಿಯನ್ನು ಸರ್ಕಾರ ಸ್ವೀಕರಿಸಿದೆ. ಸಚಿವ ಸಂಪುಟ ಸಭೆಗೆ ತಂದು ಸಾಧಕ–ಬಾಧಕಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಚ್. ಕಾಂತರಾಜ ಅವರು ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ನಡೆಸಿದ್ದ ಜಾತಿವಾರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ ಅನುಷ್ಠಾನವಾದರೆ, ನೇಕಾರರ ಸಹಿತ ಯಾವ ಸಮುದಾಯದ ಸಂಖ್ಯೆ ಎಷ್ಟಿದೆ? ಅವರ ಸ್ಥಿತಿ–ಗತಿ ಏನು ಎಂದು ತಿಳಿಯುತ್ತದೆ. ಇದರಿಂದ ಅಸಮಾನತೆ ತೊಡೆದು ಹಾಕಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ದೇವರ ದಾಸಿಮಯ್ಯ ಅವರ ಆದಿಯಾಗಿ ದಾರ್ಶನಿಕರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸಬಾರದು. ದಾರ್ಶನಿಕರ ಕೊಡುಗೆ, ಸಂಘಟನೆ, ಹೋರಾಟದ ಜೊತೆಗೆ ಸಮಸ್ಯೆಗಳ ಚರ್ಚೆಯೂ ಆಗಲಿ ಎಂಬ ಕಾರಣಕ್ಕೆ ಜಯಂತಿಗಳನ್ನು ಆಚರಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ನೇಕಾರ ಸಮುದಾಯ ಭವನ ನಿರ್ಮಿಸುವ ಬೇಡಿಕೆ ಇದ್ದು, ಮುಖ್ಯಮಂತ್ರಿಯವರ ಗಮನಕ್ಕೆ ತಂದು ನಿವೇಶನ ಒದಗಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಮಾತನಾಡಿ, 'ದೇವರ ದಾಸಿಮಯ್ಯ ಜನಿಸಿದ ಊರಾದ ಮುದನೂರಿಗೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ₹10 ಕೋಟಿ ಘೋಷಣೆ ಮಾಡಿದ್ದರು. ಇಲ್ಲಿಯವರೆಗೆ ₹2 ಕೋಟಿಯ ಕೆಲಸ ಆಗಿರಬಹುದು. ಪೂರ್ಣಗೊಳಿಸಲು ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು.

ನೆಲಮಂಗಲ ಗಾಯತ್ರಿ ಪೀಠದ ದಯಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ್, ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಸೋಮಶೇಖರ್, ಮಾಜಿ ಮೇಯರ್ ಎಸ್.ಹರೀಶ್, ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಉಪಸ್ಥಿತರಿದ್ದರು.

ಎದ್ದು ಹೋದ ಉಮಾಶ್ರೀ

'ಕಾರ್ಯಕ್ರಮಗಳನ್ನು ನಡೆಸುವಾಗ ಲೋಪಗಳು ಆಗಬಾರದು. ಏನಾಗಿದೆ ಎಂಬುದನ್ನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ನಾನು ಬರಬಾರದಿತ್ತು. ಆದರೂ ಬಂದಿದ್ದೇನೆ' ಎಂದು ತಿಳಿಸಿದ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರು ವೇದಿಕೆಯಿಂದ ನಿರ್ಗಮಿಸಿದರು. ಬಳಿಕ ಅವರು ಪ್ರತಿಕ್ರಿಯೆಗೆ ಲಭ್ಯವಾಲಿಲ್ಲ.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಪ್ರಯುಕ್ತ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಸಚಿವ ಶಿವರಾಜ ಎಸ್. ತಂಗಡಗಿ ಮತ್ತು ಗಣ್ಯರು ಪುಷ್ಪನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

22ಕ್ಕೆ ದರ್ಶನ್ ಪ್ರಕರಣ ವಿಚಾರಣೆ

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರ ಆರೋಪಿಗಳಿಗೆ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಏ.22ರಂದು ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ದರ್ಶನ್, ಪವಿತ್ರಾ ಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿದೆ. ಉಳಿದ ಹತ್ತು ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು.

'ಭವನ' ಕಾಮಗಾರಿ: ಖರ್ಗೆ ಅತೃಪ್ತಿ

2019	₹81 ಕೋಟಿ	₹120 ಕೋಟಿ	₹138 ಕೋಟಿ	12,212 ಚದರ ಮೀಟರ್
ನೂತನ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ	ತಾಂತ್ರಿಕ ಮಂಜೂರಾತಿ ಮೊತ್ತ	2020ರಲ್ಲಿ ಪರಿಷ್ಕೃತ ಅಂದಾಜು ಮೊತ್ತ	ಭವನ ನಿರ್ಮಾಣಕ್ಕೆ ಆಗಿರುವ ವೆಚ್ಚ	ಕಟ್ಟಡದ ವಿಸ್ತೀರ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಲೋಕೋಪಯೋಗಿ ಇಲಾಖೆಯು ಇಲ್ಲಿನ ಚಾಣಕ್ಯಪುರಿಯಲ್ಲಿ ನಿರ್ಮಿಸಿರುವ ಕರ್ನಾಟಕ ಭವನದ ಕಾಮಗಾರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅತೃಪ್ತಿ ವ್ಯಕ್ತಪಡಿಸಿದರು.

ಬುಧವಾರ ಸಂಜೆ ನಡೆದ ನೂತನ ಭವನ 'ಕಾವೇರಿ'ಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ನೂತನ ಕಟ್ಟಡದಲ್ಲಿ ಮುಖ್ಯಮಂತ್ರಿ, ರಾಜ್ಯಪಾಲರು ಹಾಗೂ ಸಚಿವರ ಕೊಠಡಿಗಳು ಚೆನ್ನಾಗಿವೆ. ಆದರೆ, ಶಾಸಕರ ಕೊಠಡಿಗಳು ಅವೈಜ್ಞಾನಿಕವಾಗಿವೆ. ಸಿಟ್‌ಔಟ್ ಸಹ ಇಲ್ಲ. ಒಂದು ಕೊಠಡಿ ಮೂಲಕವೇ ಇನ್ನೊಂದು ಕೊಠಡಿಗೆ ಹೋಗಬೇಕಿದೆ. ಎರಡು ಕೊಠಡಿಗಳ ನಡುವಿನ ಗೋಡೆಯನ್ನು ಒಡೆದು ಈ ಲೋಪ ಸರಿಪಡಿಸಬೇಕು' ಎಂದು ಸೂಚಿಸಿದರು.

'ಕಟ್ಟಡದ ಮೇಲ್ವಿಚಾರಣೆಯನ್ನು ಹಲವು ಬಾರಿ ಮಾಡಿದ್ದೇನೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೊಂಡಿದ್ದಾರೆ. ಅವರು ಅಲ್ಲಿ ಇಲ್ಲಿ ಓಡಾಡಿದ್ದಾರೆ. ಇಲ್ಲಿನ ಕೊಠಡಿಗಳನ್ನು ನೋಡಿದಂತಿಲ್ಲ' ಎಂದು ವ್ಯಂಗ್ಯವಾಗಿ ಹೇಳಿದರು.

ನೂತನ ಭವನ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕಟ್ಟಡದ ಲೋಪಗಳ ಬಗ್ಗೆ ಖರ್ಗೆ ಅವರು ಸಲಹೆ ನೀಡಿದ್ದಾರೆ. ಅವುಗಳನ್ನು ಸರಿಪಡಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದರು. ಆಗ ಖರ್ಗೆ, 'ಪರಿಶೀಲಿಸುವುದು ಏನಿದೆ. ಅವುಗಳನ್ನು ಸರಿಪಡಿಸಿ' ಎಂದರು.

ಖರ್ಗೆ ಮಾತನಾಡಿ, 'ಕರ್ನಾಟಕ ಭವನವು ಮೊದಲು ಮೈಸೂರು ಭವನ ಆಗಿತ್ತು. ಅದಕ್ಕೆ ಶಂಕುಸ್ಥಾಪನೆ ನೆರವೇರಿಸಿದವರು ಲಾಲ್ ಬಹದ್ದೂರ್ ಶಾಸ್ತ್ರಿ. ಕಟ್ಟಡ ಉದ್ಘಾಟಿಸಿದವರು ಇಂದಿರಾ ಗಾಂಧಿ. ಅಧ್ಯಕ್ಷತೆ ವಹಿಸಿದವರು ನಿಜಲಿಂಗಪ್ಪ. ಅವರ ಹೆಸರುಗಳನ್ನು ನೂತನ ಕಟ್ಟಡದಲ್ಲಿ ಉಲ್ಲೇಖಿಸಬೇಕಿತ್ತು' ಎಂದರು.

ಈ ಭವನದಲ್ಲಿ ಎರಡು ವಿವಿಐಪಿ ಸ್ವೀಟ್‌ಗಳು, 32 ಸ್ವೀಟ್ ರೂಮ್‌ಗಳು ಹಾಗೂ 18 ರೂಮ್‌ಗಳು ಇವೆ.

ನೂತನ ಭವನವನ್ನು ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿದ್ದರಾಮಯ್ಯ ಉದ್ಘಾಟಿಸಿದರು. ರಾಜ್ಯ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್, ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ, ಬಿಜೆಪಿ ಶಾಸಕ ಅರವಿಂದ ಬೆಲ್ಲದ, ಪರಿಷತ್ ಸದಸ್ಯರಾದ ಗೋವಿಂದರಾಜ್, ಸಲೀಂ ಅಹ್ಮದ್ ಚಿತ್ರದಲ್ಲಿದ್ದಾರೆ

ಆರೋಗ್ಯ ಸೇವೆಯಲ್ಲಿ ಎ.ಐ ಬಳಕೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸೇವಾ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆಯ ಸಾಧ್ಯತೆ ಪರಿಶೀಲಿಸಲು ಕರ್ನಾಟಕ ಆರೋಗ್ಯ ಇಲಾಖೆ ಮತ್ತು ನೆದರ್‌ಲೆಂಡ್‌ನ ಆರೋಗ್ಯ ಇಲಾಖೆ ಕ್ರಮ ತೆಗೆದುಕೊಂಡಿವೆ.

'ಸಿ–ಕ್ಯಾಂಪ್' (ಸೆಂಟರ್ ಫಾರ್ ಸೆಲ್ಯುಲಾರ್ ಮತ್ತು ಮಾಲಿಕ್ಯುಲರ್ ಪ್ಲಾಟ್‌ಫಾರಂ) ನಗರದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ನೆದರ್‌ಲೆಂಡ್‌ನ ಆರೋಗ್ಯ ಸಚಿವೆ ಬಾರ್ಬರ ಗೋಜಿನ್ನೇ ಭಾಗಿಯಾಗಿದ್ದರು.

ಆರೋಗ್ಯ ಸೇವಾ ಕ್ಷೇತ್ರ, ಔಷಧ ಅಭಿವೃದ್ಧಿ ಮತ್ತು ವೈದ್ಯಕೀಯ ತಪಾಸಣಾ ಕ್ಷೇತ್ರದಲ್ಲಿ ಎ.ಐ ಮತ್ತು ರೋಬೊ ಬಳಕೆಯ ಸಾಧ್ಯತೆಗಳನ್ನು ಎರಡೂ ಆರೋಗ್ಯ ಇಲಾಖೆಗಳು ಪರಸ್ಪರ ಸಹಯೋಗದಲ್ಲಿ ಅಧ್ಯಯನ ನಡೆಸಲು ಒಪ್ಪಿಕೊಳ್ಳಲಾಗಿದೆ.

ದಿನೇಶ್ ಗುಂಡೂರಾವ್, 'ಆರೋಗ್ಯ ಕ್ಷೇತ್ರದ ವಿವಿಧ ಹಂತಗಳಲ್ಲಿ ಸಿ–ಕ್ಯಾಂಪ್ ಈಗಾಗಲೇ ಎ.ಐ ಅನ್ನು ಬಳಸುತ್ತಿದೆ. ಅದರ ಈವರೆಗಿನ ಅನುಭವಗಳು, ನಮಗೆ ಉತ್ತಮ ಕಲಿಕಾ ಸಾಮಗ್ರಿಗಳಾಗಿವೆ. ಅದನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಪರಿಶೀಲಿಸಲಾಗುತ್ತದೆ' ಎಂದರು. ಬಾರ್ಬರ ಗೋಜಿನ್ನೇ, 'ನಮ್ಮ ಪ್ರಯೋಗದ ಅಂಶಗಳನ್ನು ಭಾರತದ ಆರೋಗ್ಯ ಕ್ಷೇತ್ರದೊಂದಿಗೆ ಹಂಚಿಕೊಳ್ಳಲು ಉತ್ಸುಕರಾಗಿದ್ದೇವೆ. ಅದನ್ನು ಕರ್ನಾಟಕದಿಂದಲೇ ಆರಂಭಿಸುತ್ತಿರುವುದು ಉತ್ತಮ ಬೆಳವಣಿಗೆ' ಎಂದರು.

'ಜಾನಪದ ಕಲೆಗಳಲ್ಲಿ ಬದುಕಿನ ಮೌಲ್ಯ ಅನಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾನಪದ ಕಲೆಗಳು ಬದುಕಿನ ಮೌಲ್ಯಗಳನ್ನು ಒಳಗೊಂಡಿದ್ದು, ವ್ಯಕ್ತಿತ್ವ ರೂಪಿಸಲು ಸಹಕಾರಿಯಾಗಿವೆ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಮತ ವ್ಯಕ್ತಪಡಿಸಿದರು.

ಸರ್ಕಾರಿ ಕಲಾ ಕಾಲೇಜು ಮತ್ತು ರಂಗಚಾರಕ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಹೆಜ್ಜೆ ಗೆಜ್ಜೆ ಮಹಿಳಾ ಜಾನಪದ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

'ಕಲೆಯಿಂದ ಸಿಗುವ ಆನಂದವು ಹಣದಿಂದ ದೊರೆಯದು. ವಿದ್ಯಾರ್ಥಿಗಳು ಶಾಲಾ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಕೊಳ್ಳಬೇಕು. ನಮ್ಮ ಸಂಸ್ಕೃತಿ ಮತ್ತು ಪರಂಪರೆ ಉಳಿಸಲು ಕಲೆ ಸಹಕಾರಿ' ಎಂದರು.

ವಿಧಾನ ಪರಿಷತ್ತಿನ ಸದಸ್ಯ ಪುಟ್ಟಣ್ಣ ಅವರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಆರ್. ಕಾವಲಮ್ಮ ಅವರನ್ನು ಸನ್ಮಾನಿಸಿ, ಸರ್ಕಾರಿ ಕಲಾ ಕಾಲೇಜಿನ ಇತಿಹಾಸ ಸ್ಮರಿಸಿದರು.

ಎಸ್.ಎಂ.ಕೃಷ್ಣ ಸ್ಮಾರಕ ಓಪನ್ ಟೆನಿಸ್ ಟೂರ್ನಿ

ಅಲೆಕ್ಸಾಂಡರ್‌ಗೆ ರಾಘವ್ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಯಾಂಕರಹಿತ ಆಟಗಾರ ರಾಘವ್ ಜೈಸಿಂಘನಿ ಅವರು ಬುಧವಾರ ಎಸ್.ಎಂ.ಕೃಷ್ಣ ಸ್ಮಾರಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಬಿಂದಾ ಅವರಿಗೆ ಆಘಾತ ನೀಡಿ ಎರಡನೇ ಸುತ್ತು ಪ್ರವೇಶಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ರಾಘವ್ 2-6, 6-3, 6-4ರಿಂದ ಇಟಲಿಯ ಆಟಗಾರನನ್ನು ಸೋಲಿಸಿದರು. 27 ವರ್ಷ ವಯಸ್ಸಿನ ರಾಘವ್, ಕ್ವಾಲಿಫೈಯರ್ ಹಂತದಲ್ಲಿ ಎರಡು ಪಂದ್ಯಗಳನ್ನು ಗೆದ್ದು ಮುಖ್ಯಸುತ್ತು ಪ್ರವೇಶಿಸಿದ್ದರು.

ಅಗ್ರ ಶ್ರೇಯಾಂಕದ ಬ್ರಿಟನ್‌ನ ಜೇ ಕ್ಲಾರ್ಕ್ 6-4, 4-6, 7-6 (2)ರಿಂದ ಭಾರತದ ಕಬೀರ್ ಹನ್ಸ್ ಅವರನ್ನು ಹಿಮ್ಮೆಟ್ಟಿಸಿದರು. ಎರಡನೇ ಶ್ರೇಯಾಂಕದ ಆಲಿವ ರ್‌ಕ್ರಾಫರ್ಡ್ (ಬ್ರಿಟನ್) 4-6, 7-6 (2), 7-5ರಿಂದ ಆಸ್ಟ್ರೇಲಿಯಾದ ಕೋಡೆ ಆ್ಯಂಡರ್ಸನ್ ಅವರನ್ನು ಸೋಲಿಸಿದರು.

ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಬಿಂದಾ ಮೊದಲ ಸುತ್ತಿನಲ್ಲೇ ನಿರಾಸೆ ಮೂಡಿಸಿದರು. ಶ್ರೇಯಾಂಕರಹಿತ ಭಾರತದ ಆಟಗಾರ ರಾಘವ್ ಜೈಸಿಂಘನಿ 2-6, 6-3, 6-4ರಿಂದ ಇಟಲಿಯ ಆಟಗಾರನಿಗೆ ಆಘಾತ ನೀಡಿದರು.

ಮೈಸೂರಿನ ಎಸ್.ಡಿ. ಪ್ರಜ್ವಲ್ ದೇವ್ 6-4, 6-4ರಿಂದ ಕೃಷ್ ತ್ಯಾಗಿ ವಿರುದ್ಧ, ಕರಣ್ ಸಿಂಗ್ 6-1, 7-5ರಿಂದ ಆದಿಲ್ ಕಲ್ಯಾಣಪುರ ವಿರುದ್ಧ; ಮನೀಷ್ ಸುರೇಶ್‌ಕುಮಾರ್ 6-2, 7-6 (2)ರಿಂದ ಯುವನ್ ನಂದಲ್ ವಿರುದ್ಧ; ಇಶಾಕ್ ಇಕ್ಬಾಲ್ 6-2, 6-1ರಿಂದ ಮಾನ್ ಕೇಶರ್ವಾನಿ ವಿರುದ್ಧ ಮತ್ತು ಆರ್ಯನ್ ಶಾ 6-2, 3-6, 6-3ರಿಂದ ನಿತಿನ್ ಕುಮಾರ್ ವಿರುದ್ಧ ಗೆಲುವು ಸಾಧಿಸಿದರು.

ಭಾರತದ ಕರಣ್ ಸಿಂಗ್ ಆಟದ ವೈಖರಿ –ಚಿತ್ರ: ಬಿ.ಕೆ. ಜನಾರ್ದನ್

ಜಾಗ್ವಾರ್ ಯುದ್ಧ ವಿಮಾನ ಅಪಘಾತ: ಪೈಲಟ್ ಸಾವು

ಪ್ರಜಾವಾಣಿ ವಾರ್ತೆ

ಜಾಮ್‌ನಗರ: ವಾಯುಪಡೆಗೆ ಸೇರಿದ ಜಾಗ್ವಾರ್ ಯುದ್ಧ ವಿಮಾನವು ಇಲ್ಲಿನ ವಾಯುನೆಲೆಗೆ ಹತ್ತಿರದ ಸುವರ್ದ ಗ್ರಾಮದ ಬಳಿ ಅಪಘಾತಕ್ಕೀಡಾಗಿದೆ. ಪೈಲಟ್‌ಗಳು ತರಬೇತಿ ಕಾರ್ಯದಲ್ಲಿ ತೊಡಗಿದ್ದಾಗ ಅವಘಡ ಸಂಭವಿಸಿದೆ.

ಯುದ್ಧ ವಿಮಾನದಲ್ಲಿ ಇಬ್ಬರುಪೈಲಟ್‌ಗಳಿದ್ದರು. ಒಬ್ಬರು ಸುರಕ್ಷಿತವಾಗಿ ಇಳಿದಿದ್ದು, ಇನ್ನೊಬ್ಬರು ಮೃತಪಟ್ಟಿದ್ದಾರೆ. ಗ್ರಾಮದ ಬಯಲು ಪ್ರದೇಶದಲ್ಲಿ ಅವಘಡ ಸಂಭವಿಸಿದೆ ಎಂದು ಜಿಲ್ಲಾ ಎಸ್‌ಪಿ ಪ್ರೇಮ್‌ಸುಖ ದೇಲು ತಿಳಿಸಿದ್ದಾರೆ. ಅಪಘಾತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ವಿಮಾನವು ನೆಲಕ್ಕೆ ಅಪ್ಪಳಿಸಿದೊಡನೆ ಬೆಂಕಿ ಹೊತ್ತಿಕೊಂಡಿದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಬ್ರಹ್ಮರಥೋತ್ಸವ: ವಸಂತೋತ್ಸವ, ಮೃಗಯಾತ್ರೋತ್ಸವ, ಶಯನೋತ್ಸವ, ಆಯೋಜನೆ ಹಾಗೂ ಸ್ಥಳ: ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ಯಲಹಂಕ, ಬೆಳಿಗ್ಗೆ 9.30

32ನೇ ಶ್ರೀರಾಮನವಮಿ ಸಂಗೀತೋತ್ಸವ: ನೃತ್ಯ: ಸಂಪದಾ, ಗಾಯನ: ಟಿ.ಎನ್.ಎಸ್. ಕೃಷ್ಣನ್, ಪಿಟೀಲು: ಮತ್ತೂರು ಆರ್. ಶ್ರೀನಿಧಿ, ಮೃದಂಗ: ಅರ್ಜುನ್ ಕುಮಾರ್, ಖಂಜಿರ: ಜಿ. ಗುರು ಪ್ರಸನ್ನ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5.15

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಸೌಮ್ಯ ರಾಮ್‌ಮೋಹನ್, ನಿರಂಜನ್ ಡಿಂಡೋಡಿ, ಪಿಟೀಲು: ಶಶಾಂಕ್, ಮೈಸೂರು ಕೇಶವ್, ಮೃದಂಗ: ದಿಗಂತ್ ಭಟ್, ಶಾಮ್ ಆನೂರ್, ಖಂಜಿರಾ: ಸುನಾದ್ ಆನೂರ್, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30

ಹರಿದಾಸ ಮಂಜರಿ: ರಶ್ಮಿ ನಟರಾಜ್, ರಕ್ಷಾ ನಟರಾಜ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಭರತನಾಟ್ಯ ಪ್ರದರ್ಶನ: ನರ್ತನ ಕೀರ್ತನ ಸಂಸ್ಥೆಯ ವಿದ್ಯಾರ್ಥಿಗಳಿಂದ, ನಿರ್ದೇಶನ: ಸೌಂದರ್ಯ ಶ್ರೀವತ್ಸ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5.30

25ನೇ ವರ್ಷದ ಪ್ರವಚನ ವಾಹಿನಿ: 'ಶ್ರೀರಾಮಚಂದ್ರ ರಾಮಾನುಜ 1,2,3' ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ವಸಂತ ನವರಾತ್ರಿ ಶ್ರೀರಾಮೋತ್ಸವ: ಭರತನಾಟ್ಯ: ನೃತ್ಯ ಲಹರಿ ಕಲಾಕೇಂದ್ರ ಟ್ರಸ್ಟ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ರಸ್ತೆ ನಿರ್ಮಾಣಕ್ಕೆ ಬಳಸಿದ ಟ್ರ್ಯಾಕ್ಟರ್ ಡೋಜರ್ ವಶಕ್ಕೆ • ಎಫ್‌ಐಆರ್ ದಾಖಲು; ತನಿಖೆ ಶುರು

ಮೀಸಲು ಅರಣ್ಯದಲ್ಲಿ ಮರಗಳ ಹನನ

ಪ್ರಜಾವಾಣಿ ವಾರ್ತೆ

ಧಾರವಾಡ: ತಾಲ್ಲೂಕಿನ ಬಣದೂರು ಶಾಖೆಯ ಹಳ್ಳಿಗೇರಿ ಮೀಸಲು ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಜಮೀನಿನಲ್ಲಿನ ನೂರಾರು ಮರಗಳ ಹನನಕ್ಕೆ ಸಂಬಂಧಿಸಿದಂತೆ ಜಮೀನು ಮಾಲೀಕ ನವೀನ್ ಸಿಂಗ್ ಠಾಕೂರ್ ವಿರುದ್ಧ ಪ್ರಕರಣ ದಾಖಲಾಗಿದೆ.

ನವೀನ್ ಸಿಂಗ್ ಜಮೀನಿನಲ್ಲಿನ (ಸರ್ವೆ ನಂಬರ್ 23, 24) ವಿವಿಧ ಜಾತಿಯ 177 ಮರ ಹಾಗೂ ಸರ್ವೆ ನಂಬರ್ 22ರ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೆ 26 ಮರಗಳನ್ನು ಕಡಿಯಲಾಗಿದೆ ಎಂದು ಎಫ್‌ಐಆರ್‌ನಲ್ಲಿ ದಾಖಲಾಗಿದೆ. ರಸ್ತೆ ನಿರ್ಮಾಣಕ್ಕೆ ಬಳಸಿದ ಟ್ರ್ಯಾಕ್ಟರ್ ಡೋಜರ್, ಕತ್ತರಿಸಿದ ಮರಗಳನ್ನು ವಶಕ್ಕೆ ಪಡೆಯಲಾಗಿದೆ.

ಆದರೆ, ಹಳ್ಳಿಗೇರಿ ಮೀಸಲು ಅರಣ್ಯದಲ್ಲಿ ಸರ್ವೆ ನಂಬರ್ 22ರ ಭಾಗದಲ್ಲಿ ಕಾಲು ದಾರಿಗೆ ಜಲ್ಲಿಕಲ್ಲು ಹಾಕಿ, ಅರ್ಧ ಕಿ.ಮೀ. ರಸ್ತೆ ನಿರ್ಮಿಸಲಾಗಿದೆ. ದಾರಿ ಬದಿಯ ಮರಗಳನ್ನು ಕಡಿಯಲಾಗಿದೆ.

ಜಮೀನು ಭಾಗದಲ್ಲಿ ಕೆಲ ಮರಗಳನ್ನು ಬುಡಸಮೇತ ಉರುಳಿಸಿದರೆ, ಕೆಲ ಮರಗಳನ್ನು ಕತ್ತರಿಸಲಾಗಿದೆ. ನಿರ್ಮಾಣ ಕಾರ್ಯಕ್ಕೆ ಜಲ್ಲಿ, ಸಿಮೆಂಟ್ ಇಟ್ಟಿಗೆ, 'ಎಂ' ಸ್ಯಾಂಡ್ ಸಂಗ್ರಹಿಸಲಾಗಿದೆ.

'ಜಮೀನಿನಲ್ಲಿನ ಮರ ಕಡಿಯಲು, ರಸ್ತೆ ನಿರ್ಮಿಸಲು ಇಲಾಖೆಯಿಂದ ಅನುಮತಿ ಪಡೆಯಬೇಕು. ಮೀಸಲು ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಾಣಕ್ಕೆ ಅವಕಾಶ ಇಲ್ಲ' ಎಂದು ಡಿಸಿಎಫ್ ವಿವೇಕ ಕವರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮೀಸಲು ಅರಣ್ಯದಲ್ಲಿ ರಸ್ತೆ ನಿರ್ಮಾಣ, ಮರಗಳ ಹನನದ ಹಿಂದೆ ಪ್ರಭಾವಿ ರಾಜಕೀಯ ವ್ಯಕ್ತಿ ಕೈವಾಡ ಇದೆ. ಅರಣ್ಯ ಇಲಾಖೆಯ ಕೆಲ ಅಧಿಕಾರಿಗಳು ಅವರ ಜತೆ ಕೈಜೋಡಿಸಿದ್ದಾರೆ' ಎಂದು ಜನ ಜಾಗೃತಿ ಸಂಘದ ಅಧ್ಯಕ್ಷ ಬಸವರಾಜ ಕೊರವರ ಆರೋಪಿಸಿದರು.

> **ಮೀಸಲು ಅರಣ್ಯದಲ್ಲಿ ರಸ್ತೆ ನಿರ್ಮಾಣ, ಮರಗಳ ಹನನಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿದೆ. ತನಿಖೆಯನ್ನು ಎಸಿಎಫ್‌ಗೆ ವಹಿಸಲಾಗಿದೆ**
> **ವಿವೇಕ ಕವರಿ**
> ಡಿಸಿಎಫ್, ಧಾರವಾಡ

ಧಾರವಾಡ ತಾಲ್ಲೂಕಿನ ಹಳ್ಳಿಗೇರಿ ಮೀಸಲು ಅರಣ್ಯ ಪ್ರದೇಶದಲ್ಲಿ ಕಾಲು ದಾರಿಯಲ್ಲಿ ಜಲ್ಲಿಕಲ್ಲು ಹಾಕಿ ರಸ್ತೆ ನಿರ್ಮಿಸಿದ್ದಾರೆ

ಚಿತ್ರ: ಬಿ.ಎಂ.ಕೇದಾರನಾಥ

ಸ್ಪರ್ಧಾ ವಾಣಿ

ಪ್ರಚಲಿತ ವಿದ್ಯಮಾನಗಳು

ಆಲಿವ್ ರಿಡ್ಲಿ ಆಮೆಗಳ ಗೂಡು

- ಆಲಿವ್ ರಿಡ್ಲಿ ಆಮೆಗಳು 'ಅರಿಬಾಡಾ' ಎಂದು ಹೆಸರಾದ ವಿಶಿಷ್ಟ ಸಾಮೂಹಿಕ ಗೂಡುಕಟ್ಟುವ ನಡವಳಿಕೆಗೆ ಹೆಸರುವಾಸಿಯಾಗಿವೆ.
- ಅಳಿವಿನಂಚಿನಲ್ಲಿರುವ ಪ್ರಭೇದಗಳಾಗಿರುವ ಈ ವಿಶಿಷ್ಟ ಆಮೆಗಳು ಒಡಿಶಾದ ರುಶಿಕುಲ್ಯ, ಗಹಿರ್ಮಾಥ ಮತ್ತು ದೇವಿ ನದಿಗಳ ಮುಖಜಭೂಮಿಯಲ್ಲಿ ಗೂಡುಕಟ್ಟಲು ಬೀಡುಬಿಟ್ಟಿವೆ.
- ಆಲಿವ್ ರಿಡ್ಲಿ ಆಮೆಗಳು ಸಾಮಾನ್ಯವಾಗಿ ಪ್ರತಿ 2-3 ವರ್ಷಗಳಿಗೊಮ್ಮೆ ಗೂಡು ಕಟ್ಟುತ್ತವೆ. ಈ ಹಿಂದೆ 2023 ರಲ್ಲಿ, ರುಶಿಕುಲ್ಯ ನದಿ ಮುಖಜ ಭೂಮಿಯ ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ದಾಖಲೆಯ 6,37,000 ಆಲಿವ್ ರಿಡ್ಲಿ ಆಮೆಗಳು ಗೂಡುಕಟ್ಟಿದವು.
- ಬಂಗಾಳ ಕೊಲ್ಲಿಯಲ್ಲಿ ಆಮೆಗಳ ಸಂಯೋಗಕ್ಕೆ ಅನುಕೂಲಕರ ಹವಾಮಾನ ಪರಿಸ್ಥಿತಿಗಳಿದ್ದು, ಲಕ್ಷಾಂತರ ಆಮೆಗಳು ಗರ್ಭ ಧರಿಸಿದ್ದು, ಗೂಡುಕಟ್ಟುವ ಪ್ರಕ್ರಿಯೆ ಆರಂಭಿವೆ. ಫೆಬ್ರುವರಿ ಮಾಸಾಂತ್ಯದಲ್ಲಿ ಗೂಡುಕಟ್ಟುವ ಪ್ರಕ್ರಿಯೆ ಮುಗಿಯಲಿದೆ.
- ಈ ವರ್ಷ ರುಶಿಕುಲ್ಯಾ ನದಿಯಲ್ಲಿ ಪ್ರವಾಹ ಉಂಟಾಗಿಲ್ಲ, ಇದರಿಂದ ಕಡಲತೀರದ ಸವೆತವಾಗಿಲ್ಲ. ಹೀಗಾಗಿ, ಹೊಸ ಮರಳು ದಿಬ್ಬಗಳು ನಿರ್ಮಾಣಗೊಂಡಿದ್ದು, ಆಲಿವ್ ರಿಡ್ಲಿ ಆಮೆಗಳಿಗೆ ಗೂಡುಕಟ್ಟಲು ಹೆಚ್ಚುವರಿ ಸ್ಥಳ ಲಭಿಸಿದೆ. ಇದರಿಂದ ಈ ಬಾರಿ ಕಳೆದ ಸಲಕ್ಕಿಂತ ಹೆಚ್ಚಿನ ಗೂಡುಗಳು ನಿರ್ಮಾಣವಾಗುವ ಸಾಧ್ಯತೆ ಇದೆ.
- ಗೂಡುಕಟ್ಟುವ ಆಮೆಗಳನ್ನು ಹಾಗೂ ಗೂಡುಗಳನ್ನು ರಕ್ಷಿಸಲು, ನ.1 ರಿಂದ ಮೇ 31 ರವರೆಗೆ 20 ಕಿ.ಮೀ. ವ್ಯಾಪ್ತಿಯಲ್ಲಿ ಮೀನುಗಾರಿಕೆ ನಿಷೇಧಿಸಲಾಗಿದೆ. ಕಡಲತೀರವನ್ನು ಸ್ವಚ್ಛಗೊಳಿಸಲಾಗಿದೆ ಮತ್ತು ಇತರ ಅಡಚಣೆಗಳನ್ನು ತಡೆಗಟ್ಟಲು ಬೇಲಿ ಹಾಕಲಾಗಿದೆ.
- ಭಾರತೀಯ ಪ್ರಾಣಿಶಾಸ್ತ್ರ ಸಮೀಕ್ಷೆ (ZSI: Zoological Survey of India) 2021 ರಿಂದ ಸುಮಾರು 15,000 ಆಮೆಗಳಿಗೆ ಟ್ಯಾಗ್ ಅಳವಡಿಸಿದೆ. ಈ ಉಪಕ್ರಮವು ಅವುಗಳ ನಡವಳಿಕೆ, ಗೂಡುಕಟ್ಟುವ ಮಾದರಿ ಮತ್ತು ಜೀವನ ಚಕ್ರಗಳ ಅಧ್ಯಯನ ಮಾಡುವ ಗುರಿಯನ್ನು ಹೊಂದಿದೆ. ಟ್ಯಾಗ್ ಮಾಡಲಾದ ಆಲಿವ್ ರಿಡ್ಲಿ ಆಮೆಗಳನ್ನು ಮರು ಪರಿಶೀಲಿಸುವುದು ಸಂಶೋಧನೆಗೆ ಅಮೂಲ್ಯ ದತ್ತಾಂಶವನ್ನು ಒದಗಿಸುತ್ತದೆ.

'ಡಿಜಿಟಲ್ ಆರ್ಥಿಕತೆ' ವರದಿ

- ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (MeitY), 'ಭಾರತದ ಡಿಜಿಟಲ್ ಆರ್ಥಿಕತೆಯ ಅಂದಾಜು ಮತ್ತು ಮಾಪನ' ಎಂಬ ಪ್ರಮುಖ ವರದಿಯನ್ನು ಬಿಡುಗಡೆ ಮಾಡಿದೆ.
- ಭವಿಷ್ಯದ ಬೆಳವಣಿಗೆಗೆ ಕಾರ್ಯತಂತ್ರ ರೂಪಿಸುವಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ನೀತಿ ನಿರೂಪಕರು ಹಾಗೂ ಉದ್ಯಮಿಗಳಿಗೆ ಈ ವರದಿಯು ನಿರ್ಣಾಯಕವಾಗಿದೆ.
- ಡಿಜಿಟಲ್ ಆರ್ಥಿಕತೆ ಡಿಜಿಟಲ್ ತಂತ್ರಜ್ಞಾನ ಬಳಸುವ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಡಿಜಿಟಲ್ ವಲಯದ ಕೈಗಾರಿಕೆಗಳು ಮಾತ್ರವಲ್ಲದೇ, ಬ್ಯಾಂಕಿಂಗ್, ಶಿಕ್ಷಣ, ವ್ಯಾಪಾರದಂಥ ಸಾಂಪ್ರದಾಯಿಕ ವಲಯಗಳ ಪಾಲನ್ನು ಇದು ಒಳಗೊಂಡಿದೆ.
- ವರದಿಯ ಪ್ರಕಾರ, ಇತ್ತೀಚಿನ ಅಂದಾಜುಗಳು ಮತ್ತು ಸಂಶೋಧನೆಗಳನ್ವಯ ಭಾರತದ ಡಿಜಿಟಲ್ ಆರ್ಥಿಕತೆಯು 2022-23ರಲ್ಲಿ ರಾಷ್ಟ್ರೀಯ ಆದಾಯದ ಸರಿಸುಮಾರು ಶೇ 11.74 ರಷ್ಟಿದ್ದು, ಇದು ₹ 31.64 ಲಕ್ಷ ಕೋಟಿಗೆ ಸಮನಾಗಿದೆ.
- ಈ ಅಂಕಿ ಅಂಶಗಳನ್ವಯ ಭಾರತ ಡಿಜಿಟಲ್ ಆರ್ಥಿಕತೆಯಲ್ಲಿ, OECD ಚೌಕಟ್ಟು ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ADB) ಶಿಫಾರಸು ಮಾಡಿದ ಇನ್‌ಪುಟ್-ಔಟ್‌ಪುಟ್ ವಿಧಾನಗಳನ್ನು ಬಳಸಿಕೊಳ್ಳುವಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಮುಂಚೂಣಿಯಲ್ಲಿದೆ.
- ICT ಸೇವೆಗಳು ಮತ್ತು ದೂರಸಂಪರ್ಕ ವಲಯಗಳನ್ನು ಒಳಗೊಂಡಿರುವ ಡಿಜಿಟಲ್ ಕೈಗಾರಿಕೆಗಳು ದೇಶದ ಮಾರುಕಟ್ಟೆಯ ಒಟ್ಟು ಮೌಲ್ಯವರ್ಧನೆಗೆ (GVA: Gross Value Added) ಸುಮಾರು ಶೇ 2 ರಷ್ಟು ಕೊಡುಗೆ ನೀಡುತ್ತವೆ. ಹೆಚ್ಚುವರಿಯಾಗಿ, ಬ್ಯಾಂಕಿಂಗ್ ಮತ್ತು ಶಿಕ್ಷಣದಂಥ ಸಾಂಪ್ರದಾಯಿಕ ವಲಯಗಳಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದಲೂ ಶೇ 2ರಷ್ಟು ದೇಶದ ಮಾರುಕಟ್ಟೆಯ ಮೌಲ್ಯವರ್ಧನೆ ಉಂಟಾಗುತ್ತದೆ.
- 2022-23ರಲ್ಲಿ ಡಿಜಿಟಲ್ ಆರ್ಥಿಕತೆ ವಲಯವು ಸುಮಾರು 14.67 ಮಿಲಿಯನ್ ಕಾರ್ಮಿಕರಿಗೆ ಉದ್ಯೋಗ ಒದಗಿಸಿದ್ದು, ಇದು ಭಾರತದ ಒಟ್ಟು ಉದ್ಯೋಗಿಗಳ ಪೈಕಿ ಶೇ 2.55 ಪಾಲನ್ನು ಒಳಗೊಂಡಿದೆ.
- ಭಾರತದ ಡಿಜಿಟಲ್ ಆರ್ಥಿಕತೆ ಒಟ್ಟಾರೆ ಆರ್ಥಿಕತೆಗಿಂತ 2 ಪಟ್ಟು ವೇಗವಾಗಿ ಬೆಳೆಯುವ ನಿರೀಕ್ಷೆಯಿದೆ ಎಂದು ಮುನ್ಸೂಚನೆಗಳು ಸೂಚಿಸಿವೆ, ವಿವಿಧ ವಲಯಗಳಲ್ಲಿ ಹೆಚ್ಚಲಿರುವ ಡಿಜಿಟಲೀಕರಣ ದಿಂದ ಇದು 2030 ರ ವೇಳೆಗೆ ರಾಷ್ಟ್ರೀಯ ಆದಾಯದ 5ನೇ ಒಂದು ಭಾಗದಷ್ಟಾಗುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.

ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾರತ

- ಭಾರತವು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಿಗೆ ದೀರ್ಘಕಾಲದ ಬದ್ಧತೆಯನ್ನು ವ್ಯಕ್ತಪಡಿಸಿದೆ. ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ (DRC) ಇತ್ತೀಚಿನ ಘಟನೆಗಳಲ್ಲಿ ಭಾರತದ ಈ ಬದ್ಧತೆಯು ಮತ್ತೊಮ್ಮೆ ಬೆಳಕಿಗೆ ಬಂದಿದೆ.
- ಶಾಂತಿಪಾಲಕರ ದುರಂತ ಸಾವಿನ ನಂತರವೂ, ಭಾರತ ಜಾಗತಿಕ ಶಾಂತಿಗಾಗಿ ತನ್ನ ಸಮರ್ಪಣೆ ಪ್ರದರ್ಶಿಸಿ, ವಿವಿಧ ಕಾರ್ಯಾಚರಣೆಗಳಿಗೆ ಹಲವಾರು ಪಡೆಗಳು ಮತ್ತು ಪೊಲೀಸರನ್ನು ನಿಯೋಜಿಸಿದೆ.
- ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯು ಅಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡಿಕೊಳ್ಳುವ ಅಥವಾ ಪುನಃಸ್ಥಾಪಿಸುವ ಗುರಿಯನ್ನು ಹೊಂದಿರುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.
- 1948 ರಲ್ಲಿ ಸ್ಥಾಪನೆಯಾದ ಇದು, ಸ್ವರಕ್ಷಣೆಯನ್ನು ಹೊರತುಪಡಿಸಿ, ಒಪ್ಪಿಗೆ, ನಿಷ್ಪಕ್ಷಪಾತ ಮತ್ತು ಬಲಪ್ರಯೋಗವಿಲ್ಲದೇ ಇರುವ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
- ಪ್ರಸ್ತುತ 125 ದೇಶಗಳಿಂದ ಸುಮಾರು 1,00,000 ಆಯ್ದ ಸಿಬ್ಬಂದಿ ವಿಶ್ವದಾದ್ಯಂತ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಸಕ್ರಿಯ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.
- ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಮೊದಲ ಕಾರ್ಯಾಚರಣೆ 1948 ರಲ್ಲಿ ನಡೆಯಿತು. ಈ ಕಾರ್ಯಾಚರಣೆಯಲ್ಲಿ ವಿಶ್ವಸಂಸ್ಥೆಯ ಒಪ್ಪಂದವೊಂದರ ಅನುಷ್ಠಾನದ ಮೇಲ್ವಿಚಾರಣೆ ವಹಿಸಲಾಗಿತ್ತು.
- ನಂತರ ದಶಕಗಳಲ್ಲಿ, 10 ಲಕ್ಷಕ್ಕೂ ಹೆಚ್ಚು ಯೋಧರು ವಿಶ್ವಸಂಸ್ಥೆಯ ಧ್ವಜದ ಅಡಿಯಲ್ಲಿ ಶಾಂತಿಪಾಲಕರಾಗಿ ಸೇವೆ ಸಲ್ಲಿಸಿದ್ದು, 70 ಕ್ಕೂ ಹೆಚ್ಚು ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡಿದ್ದಾರೆ.
- ಇಷ್ಟೆಲ್ಲ ಸಾಧನೆಗಳ ನಡುವೆಯೂ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯು ರಾಜಕೀಯ ಅಧಿಕಾರದ ಒತ್ತಡ, ಸಂಪನ್ಮೂಲಗಳ ಕೊರತೆ, ಆತಿಥೇಯ ರಾಷ್ಟ್ರಗಳ ಪ್ರತಿರೋಧ ಹಾಗೂ ಸರ್ವಾಧಿಕಾರ ಧೋರಣೆ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸುತ್ತಿದೆ.
- ಪೂರ್ವ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ (DRC) ದಲ್ಲಿ M23 ಬಂಡುಕೋರರೊಂದಿಗಿನ ಹೋರಾಟದಲ್ಲಿ ಆರು ಜನ UN ಶಾಂತಿಪಾಲಕರ ಸಾವಿಗೀಡಾದರು. ಅವರಲ್ಲಿ ಇಬ್ಬರು ದಕ್ಷಿಣ ಆಫ್ರಿಕನ್ನರು, ಒಬ್ಬರು ಉರುಗ್ವೆಯರು ಮತ್ತು ಮೂವರು ಮಲಾವಿಯನ್ ಶಾಂತಿಪಾಲಕರು ಸೇರಿದ್ದಾರೆ.
- ಕಾಂಗೋದಲ್ಲಿ UN ಶಾಂತಿಪಾಲನಾ ಕಾರ್ಯಾಚರಣೆ 20 ವರ್ಷಗಳಿಗೂ ಹೆಚ್ಚು ಕಾಲದಿಂದ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಅಲ್ಲಿ 14,000 ಸೈನಿಕರನ್ನು ನಿಯೋಜಿಸಲಾಗಿದೆ.
- ಖನಿಜಗಳಿಂದ ಸಮೃದ್ಧವಾಗಿರುವ ಪೂರ್ವ ಕಾಂಗೋದಲ್ಲಿ 100ಕ್ಕೂ ಹೆಚ್ಚು ಸಶಸ್ತ್ರ ಗುಂಪುಗಳು ಸಂಪನ್ಮೂಲಗಳ ಮೇಲಿನ ನಿಯಂತ್ರಣಕ್ಕಾಗಿ ಹೋರಾಟ ನಡೆಸುತ್ತಿವೆ. ಇದರಿಂದ ಆ ಪ್ರದೇಶದಲ್ಲಿ ದಶಕಗಳಿಂದ ಆಂತರಿಕ ಕ್ಷೋಭೆ ತಲೆದೋರಿದೆ.
- ಭಾರತ ಶಾಂತಿಪಾಲನಾ ಕಾರ್ಯಾಚರಣೆಗಳಿಗೆ ಅತಿ ಹೆಚ್ಚು ಕೊಡುಗೆ ನೀಡುವ ದೇಶವಾಗಿದೆ. ಭಾರತ ಇಲ್ಲಿಯವರೆಗೆ 49 ಕಾರ್ಯಾಚರಣೆಗಳಲ್ಲಿ 2,53,000 ಕ್ಕೂ ಹೆಚ್ಚು ಸೈನಿಕರನ್ನು ನಿಯೋಜಿಸಿದೆ.
- ಭಾರತೀಯ ಶಾಂತಿಪಾಲಕರು ತಮ್ಮ ತಾಂತ್ರಿಕ ಪರಿಣತಿಗೆ ಹೆಸರುವಾಸಿಯಾಗಿದ್ದು, ವಿವಿಧ ಕಾರ್ಯಾಚರಣೆಗಳಲ್ಲಿ ವೈದ್ಯಕೀಯ ಮತ್ತು ವ್ಯವಸ್ಥಾಪನಾ ಬೆಂಬಲವನ್ನು ಒದಗಿಸಿದ್ದಾರೆ.
- ಭಾರತವು ಹೆಲಿಕಾಪ್ಟರ್‌ಗಳು ಮತ್ತು ಎಂಜಿನಿಯರಿಂಗ್ ಘಟಕಗಳು ಸೇರಿದಂತೆ ವಿಶೇಷ ಮಿಲಿಟರಿ ಸಾಮರ್ಥ್ಯಗಳನ್ನು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಗೆ ಕೊಡುಗೆಯಾಗಿ ನೀಡಿದೆ.
- ನವದೆಹಲಿಯಲ್ಲಿರುವ ವಿಶ್ವಸಂಸ್ಥೆಯ ಶಾಂತಿಪಾಲನಾ ಕೇಂದ್ರ 67,000 ಕ್ಕೂ ಹೆಚ್ಚು ಸಿಬ್ಬಂದಿಗೆ ತರಬೇತಿ ನೀಡಿದ್ದು, ಲೈಂಗಿಕ ಶೋಷಣೆ ತಡೆಗಟ್ಟುವಿಕೆಯಂಥ ನಿರ್ಣಾಯಕ ತರಬೇತಿ ನೀಡಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಪ್ಲಾಸ್ಟಿಕ್ ಚೀಲಗಳ ಬಳಕೆಯ ಸಮಸ್ಯೆಗೆ ಪರಿಹಾರಗಳಾಗಿವೆ

ಎ. ಪಾಲಿಪ್ರೊಪಿಲೀನ್ ಚೀಲ ಬಳಕೆ ಮಾಡುವುದು
ಬಿ. ಪರಿಸರ ಸ್ನೇಹಿ ಪರ್ಯಾಯ ವಸ್ತುಗಳಾದ ಹತ್ತಿ, ಸೆಣಬು ಮತ್ತು ಇತ್ಯಾದಿಗಳಿಂದ ತಯಾರಿಸಿದ ಚೀಲಗಳನ್ನು ಬಳಸುವುದು
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಡಿ

2. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ 1995ರಲ್ಲಿ ಪ್ರಾರಂಭವಾದ ಕೇಂದ್ರ ವಲಯದ ಯೋಜನೆಯಾಗಿದೆ
ಬಿ. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಪ್ರತಿ ಎಂಪಿ ಕ್ಷೇತ್ರಕ್ಕೆ ವಾರ್ಷಿಕವಾಗಿ ₹ 5 ಕೋಟಿ ಒದಗಿಸಲಾಗುತ್ತದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಬಿ

3. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ರಾಜ್ಯದಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು 2001-02ರಲ್ಲಿ ಪ್ರಾರಂಭಿಸಲಾಗಿದೆ
ಬಿ. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರತಿ ಕ್ಷೇತ್ರಕ್ಕೆ ತಲಾ ₹500.00 ಲಕ್ಷಗಳನ್ನು ಒದಗಿಸಲಾಗುತ್ತದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಎ

4. ಭಾರತೀಯ ರಿಸರ್ವ್ ಬ್ಯಾಂಕ್ ಹಣದುಬ್ಬರವನ್ನು ತಗ್ಗಿಸಲು ಕೆಳಗಿನ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ?

1. ನಗದು ಮೀಸಲು ಅನುಪಾತವನ್ನು ಹೆಚ್ಚಿಸುವುದು
2. ಹೆಚ್ಚುವರಿ ನಗದು ಮೀಸಲು ಅನುಪಾತವನ್ನು ಜಾರಿಗೆ ತರುವುದು
3. ಶಾಸನೀಯ ದ್ರವ್ಯತಾ ಅನುಪಾತ ಹೆಚ್ಚಿಸುವುದು
4. ರೆಪೋ ದರವನ್ನು ಹೆಚ್ಚಿಸುವುದು

ಸರಿ ಉತ್ತರ ಗುರುತಿಸಿ
ಎ. 1, 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ: ಎ

5. ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಕೆಳಗಿನ ಯಾವ ಸಂದರ್ಭದಲ್ಲಿ ಹೆಚ್ಚುವರಿ ನಗದು ಮೀಸಲು ಅನುಪಾತವನ್ನು ಜಾರಿಗೆ ತಂದಿತ್ತು?

ಎ. ಆಹಾರದ ಹಣದುಬ್ಬರ ಹೆಚ್ಚಳವಾದ ಕಾರಣದಿಂದ.
ಬಿ. ಆಹಾರ ಉತ್ಪನ್ನಗಳ ಬೆಲೆಗಳು ಕಡಿಮೆಯಾದ ಕಾರಣದಿಂದ.
ಸಿ. 2000 ರೂ ಮೌಲ್ಯದ ನೋಟುಗಳ ಅಮಾನೀಕರಣದ ನಂತರ.
ಡಿ. ರಷ್ಯಾ-ಉಕ್ರೇನ್ ಯುದ್ಧದ ನಂತರ.

ಉತ್ತರ: ಸಿ

6. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಂವಿಧಾನದ ಅನುಚ್ಛೇದ 32 ಅಡಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಯಾವುದೇ ಸಂಬಂಧಪಟ್ಟ ವ್ಯಕ್ತಿ ಅಥವಾ ಬೇರೆಯವರು ಸಹ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಬಹುದು.
ಬಿ. ಸಂವಿಧಾನದ ಅನುಚ್ಛೇದ 226 ಅಡಿಯಲ್ಲಿ ಹೈಕೋರ್ಟ್‌ಗೆ ಯಾವುದೇ ಸಂಬಂಧಪಟ್ಟ ವ್ಯಕ್ತಿ ಅಥವಾ ಬೇರೆಯವರು ಸಹ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಬಹುದು.
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಡಿ

7. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದರೆ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಜನರ ಹಿತರಕ್ಷಣೆಗಾಗಿ ಹೂಡಲಾದ ಅರ್ಜಿಗಳಾಗಿವೆ.
ಬಿ. ಸಂವಿಧಾನದ ವಿಧಿ 32 ರನ್ವಯ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ವಿಸ್ತರಣೆಯಾಗಿದೆ.
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪುಡಿ. ಎರಡೂ ಸರಿ

ಉತ್ತರ: ಡಿ

8. ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ದುರ್ಬಲ ವರ್ಗಗಳ ಮೂಲಭೂತ ಹಕ್ಕುಗಳ ಅತಿಕ್ರಮಣಗಳ ವಿರುದ್ಧ ಇದನ್ನು ಸಲ್ಲಿಸಬಹುದು.
ಬಿ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿರುದ್ಧದ ದೌರ್ಜನ್ಯಗಳ ವಿರುದ್ಧ ಇದನ್ನು ಸಲ್ಲಿಸಲು ಅಸಾಧ್ಯ
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಎ

9. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತದಲ್ಲಿ 5ಜಿ ಸೇವೆ ಒದಗಿಸಲು ಪ್ರಧಾನಿ ನರೇಂದ್ರ ಮೋದಿ ಅಕ್ಟೋಬರ್ 1, 2023ರಂದು ಇಂಡಿಯಾ ಮೊಬೈಲ್ ಕಾಂಗ್ರೆಸ್‌ನಲ್ಲಿ ಉದ್ಘಾಟಿಸಿದರು
ಬಿ. ಅಲ್ಟ್ರಾ-ಫಾಸ್ಟ್ ಇಂಟರ್ನೆಟ್ ಮತ್ತು ವರ್ಧಿತ ಮಲ್ಟಿಮೀಡಿಯಾ ಅನುಭವಗಳನ್ನು ನೀಡಲು 5ಜಿ ನೆಟ್‌ವರ್ಕ್ ಸುಧಾರಿತ ತಂತ್ರಜ್ಞಾನಗಳನ್ನು ಬಳಸುತ್ತದೆ
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಬಿ

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

PUC CET MATHEMATICS

MULTIPLE CHOICE QUESTIONS

28) In a simultaneous throw of a pair dice the probability of getting a total more than 7 is

A) $\frac{7}{12}$ B) $\frac{5}{36}$
C) $\frac{5}{12}$ D) $\frac{7}{36}$

Ans:-C

Expln:- The sample space consists of 36 numbers
Let X be the sum of the numbers on two dice which takes the values
2, 3, 4, 6, 7, 8, 9, 10, 11, or 12
P(x=8) P(2,6), (3,5), (4,4), (5,3), (6,2)
(i.e. sum more than 7 which is 8)
$\frac{5}{36}$

$P(x=9)=P\{(3,6),(4,5),(5,4)(6,3)\}=\frac{4}{36}$

$P(x=10)=P\{(4,6),(5,5),(6,4)\}=\frac{3}{36}$

$P(x=11)=P\{(5,6),(6,5)\}=\frac{2}{36}$

$P(x=12)=P\{(6,6),\}=\frac{1}{36}$

$\text{Required Probability}=\frac{5}{36},\frac{4}{36},\frac{3}{36},\frac{2}{36},\frac{1}{36}=\frac{15}{36}=\frac{5}{12}$

29) If in the expansion of $(1+px)^n$, $n \in N$, the coefficients of x and x^2 are 8 and 24, then the values of n and p are

(A) n = 3, p = 2 (B) n = 5, p = 3
(C) n = 4, p = 3 (D) n = 4, p = 2

Ans: (D) n = 4, p = 2

$(1+px)^n = 1^n + nC_1px + nC_2p^2x^2 + ... + p^nx^n$

Coeff. of $x = np$, coeff. of $x^2 = nC_2p^2$

$= \frac{n(n+1)}{2}.p^2$

Given $np = 8$, $\frac{n(n-1)}{2}p^2 = 24$

$np = 8$ $(n^2-n)p^2 = 48$

$n^2p^2 - np.p = 48$

$64 - 8p = 48$

$\therefore 8p = 16$ $\therefore p = 2.$ $\therefore n = 4.$

30) If $A=\begin{bmatrix}1 & 0\\ 1 & 1\end{bmatrix}$ and $A^8 = aA + bI$, then (a, b)

(A) (8, 7) (B) (-7, 8)
(C) (8, -7) (D) (-8, -7)

Ans: (C) (8, -7)

31) If $y=2x^{n+1}+\frac{3}{x^n}$ then $x^2\frac{d^2y}{dx^2}$ is ....

a) y b) 6n(n + 1)y
c) n(n +1)y d) $x\frac{dy}{dx}+y$

Answer: (c)

$y = (2x)^{(n+1)} + (3x)^{(-n)}$

$\Rightarrow dy/dx = 2(n+1)x^n - (3nx)^{(-n-1)}$

$\Rightarrow (d^2y)/(dx^2) =$

$= 2n(n+1)x^{(n-1)} + 3n(n+1)x^{(-n-2)}$

$\Rightarrow x^2(d^2y)/(dx^2) = n(n+1)[(2x)^{(n+1)} + 3/x^n]$

$\Rightarrow x^2(d^2y)/(dx^2) = n(n+1)y$

32) If $y=|\cos x|+|\sin x|$, then $\frac{dy}{dx}$ at $x=\frac{2\pi}{3}$ is

(A) $\frac{1-\sqrt{3}}{2}$ (B) 0

(C) $\frac{1}{2}(\sqrt{3}-1)$ (D) None of these

Ans: (C) $\frac{1}{2}(\sqrt{3}-1)$

$\frac{dy}{dx}=\sin x+\cos x$ $\therefore\left(\frac{dy}{dx}\right)_{x=\frac{2\pi}{3}}=\sin 120^0+\cos 120^0$

$=\frac{\sqrt{3}}{2}-\frac{1}{2}=\frac{\sqrt{3}-1}{2}.$

33) If $\sqrt[3]{y}\sqrt{x}=\sqrt[6]{(x+y)^5}$

then dy/dx equal to..............

a) x/y b) x+y
c) x-y d) y/x

Ans:(d)

Expln:- $\sqrt[3]{y}\sqrt{x}=\sqrt[6]{(x+y)^5}$

Apply log on both sides

$\log(y^{1/3}x^{1/2}) = \log(x+y)^{5/6}$

$(1/3)\log y + (1/2)\log x = (5/6)\log(x+y)$

$(1/3y)(dy/dx) + (1/2x) =$

$= (5/6(x+y))(1+dy/dx)$

$(1/3y)(dy/dx) - (5/6(x+y))dy/dx =$

$= (5/6(x+y)) - (1/2x)$

$(dy/dx)[(1/3y) - (5/6(x+y))] =$

$= 5x - 3(x+y)/6x(x+y)$

$(dy/dx) =$

$= [(2x-3y)/6x(x+y)][6y(x+y)/(2x-3y)]$

$dy/dx = y/x$

34) $\int e^x\left(\frac{1+\sin x}{1+\cos x}\right)dx$ is

(A) $\tan\left(\frac{x}{2}\right)+C$ (B) $e^x\sin x+C$

(C) $e^x\tan\left(\frac{x}{2}\right)+C$ (D) e^x+C

Ans: (C) $e^x\tan\left(\frac{x}{2}\right)+C$

$\frac{1+\sin x}{1+\cos x}=\frac{1+2\sin\frac{x}{2}\cos\frac{x}{2}}{2\cos^2\frac{x}{2}}=\frac{1}{2}\sec^2\frac{x}{2}+\tan\frac{x}{2}$

Let $f(x)=\tan\frac{x}{2}$. Then $f'(x)=\frac{1}{2}\sec^2\frac{x}{2}$.

$\therefore\int e^x\left(\frac{1+\sin x}{1+\cos x}\right)dx=\int e^x[f(x)+f'(x)]$ form.

$=e^x f(x)=e^x.\tan\frac{x}{2}+C.$

NEET BIOLOGY

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

37) Amoeba and yeast reproduce asexually by fission and budding respectively, because they are:

a) Microscopic organisms
b) Heterotrophic organisms
c) Unicellular organisms
d) Uninucleate organisms

Ans:- c

38) A few statements with regard to sexual reproduction are given below;

i. Sexual reproduction does not always require two individuals
ii. Sexual reproduction generally involves gametic fusion
iii. Meiosis never occurs during sexual reproduction
iv. External fertilization is a rule during sexual reproduction

Choose the correct statements from the options below:

a) i and iv b) i and ii
c) ii and iii d) i and iv

Ans:- b

39) Lecithin, a small molecular weight organic compound found in living tissues, is an example of:

(a) Amino acids (b) Phospholipids
(c) Glycerides (d) Carbohydrates

Ans (b)

Expln:- Some lipids have phosphorous and a phosphorylated organic compound in them. These are phospholipids. They are found in cell membrane. Lecithin is one example. Option (c) is incorrect as glycerides are another group of lipids in which both glycerol and fatty acids are present. Option (a) and (d) are incorrect as amino acids and carbohydrates are separate groups of biomol

40) A multicellular, filamentous alga exhibits a type of sexual life cycle in which the meiotic division occurs after the formation of zygote. The adult filament of this alga has

a) haploid vegetative cells and diploid gametangia
b) diploid vegetative cells and diploid gametangia
c) diploid vegetative cells and haploid gametangia
d) haploid vegetative cells and haploid gametangia

Ans:- d

41) The male gametes of rice plant have 12 chromosomes in their nucleus. The chromosome number in the female gamete, zygote and the cells of the seedling will be, respectively,

a) 12, 24, 12 b) 24, 12, 12
c) 12, 24, 24 d) 24, 12, 24

Ans:- c

42) Given below are a few statements related to external fertilization. Choose the correct statements.

i. The male and female gametes are formed and released simultaneously
ii. Only a few gametes are released into the medium
iii. Water is the medium in a majority of organisms exhibiting external fertilization
iv. Offspring formed as result of external fertilization have better chance of survival than those formed inside an organism

a) iii and iv b) i and iii
c) ii and iv d) i and iv

Ans:- b

43) A transcription unit in DNA is defined primarily by the three regions in DNA and these are with respect to upstream and down stream end;

(a) Repressor, Operator gene, Structural gene
(b) Structural gene, Transposons, Operator gene
(c) Inducer, Repressor, Structural gene
(d) Promotor, Structural gene, Terminator

Ans (d)

Expln:- A transcription unit of DNA is defined primarily by the three regions in the DNA: (i) A promoter (ii) The structural gene (iii) A terminator

The promoter is said to be located towards 5′-end (upstream) of the structural gene (the reference is made with respect to the polarity of coding strand) The terminator is located towards 3′-end (downstream) of the coding strand.

44) The statements given below describe certain features that are observed in the pistil of flowers.

i. Pistil may have many carpels
ii. Each carpel may have more than one ovule
iii. Each carpel has only one ovule
iv. Pistil have only one carpel

Choose the statements that are true from the options below:

a) i and ii b) i and iii
c) ii and iv d) iii and iv

Ans:- a

45) Given below are two statements:

Statement I: Ligaments are dense irregular tissue
Statement II: Cartilage is dense regular tissue. In the light of above statements

choose the correct answer from the option given below:

a) Statement I is false but Statement II is true.
b) Both Statement I and II are true
c) Both Statement I and II are false
d) Statement I is true but Statement II is false

Ans:- (c) Ligaments are dense regular connective tissue that connect bone to bone. Cartilage is one of the types of specialised connective tissues

(Contd……..)

ನ್ಯಾ.ಶಿವರಾಜ್ ಪಾಟೀಲ, ಕುಂ.ವೀ., ವೆಂಕಟೇಶ್ ಕುಮಾರ್‌ಗೆ ನಾಡೋಜ ಗೌರವ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ.ಪಾಟೀಲ, ಸಾಹಿತಿ ಕುಂ.ವೀರಭದ್ರಪ್ಪ ಮತ್ತು ಹಿಂದೂಸ್ತಾನಿ ಗಾಯಕ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ನ್ಯಾ. ಶಿವರಾಜ್ ವಿ.ಪಾಟೀಲ


ಕುಂ. ವೀರಭದ್ರಪ್ಪ

ಎಂ.ವೆಂಕಟೇಶ್ ಕುಮಾರ್

'ವಿಶ್ವವಿದ್ಯಾಲಯದ 33ನೇ ನುಡಿಹಬ್ಬ (ಘಟಿಕೋತ್ಸವ) ಶುಕ್ರವಾರ (ಏಪ್ರಿಲ್ 4) ವಿದ್ಯಾರಣ್ಯ ಕ್ಯಾಂಪಸ್‌ನ 'ನವರಂಗ' ಬಯಲು ರಂಗಮಂದಿರದಲ್ಲಿ ನಡೆಯಲಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ನಾಡೋಜ ಪದವಿ ಪ್ರದಾನ ಮಾಡುವರು' ಎಂದು ಕುಲಪತಿ ಪ್ರೊ.ಡಿ.ವಿ. ಪರಮಶಿವಮೂರ್ತಿ ಬುಧವಾರ ತಿಳಿಸಿದರು.

ಮೈಸೂರು, ಕೊಡಗು, ಹಾಸನದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಮೈಸೂರು, ಕೊಡಗು ಮತ್ತು ಹಾಸನದಲ್ಲಿ ಬುಧವಾರ ಗುಡುಗು, ಮಿಂಚಿನಿಂದ ಕೂಡಿದ ಬಿರುಸಿನ ಮಳೆ ಸುರಿಯಿತು. ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ.

ಮೈಸೂರು ನಗರ, ಪಿರಿಯಾಪಟ್ಟಣ ತಾಲ್ಲೂಕಿನ ವಿವಿಧೆಡೆ ಸಂಜೆ ಮಳೆಯಾಗಿದ್ದು, ಶುಂಠಿ, ಮುಸುಕಿನ ಜೋಳ, ತಂಬಾಕು ಬೆಳೆಗೆ ಪೂರಕ ವಾತಾವರಣ ನಿರ್ಮಾಣವಾಗಿದೆ.

ಕೊಡಗು ಜಿಲ್ಲೆಯ ಕುಶಾಲನಗರ ಹಾಗೂ ಸುತ್ತಮುತ್ತ ಸುಮಾರು ಒಂದು ತಾಸು ಬಿರುಸಿನ ಮಳೆ ಸುರಿಯಿತು. ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಯ ಅಬ್ಬರ ಜೋರಾಗಿತ್ತು. ಸಕಲೇಶಪುರ ತಾಲ್ಲೂಕಿನಲ್ಲಿ ಮಧ್ಯಾಹ್ನ ಧಾರಾಕಾರ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿತ್ತು. ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹಾಗೂ ಹಿರೀಸಾವೆಯಲ್ಲಿ ಸಾಧಾರಣ ಮಳೆಯಾಗಿದೆ.

ಸುಧಾ, ಮಯೂರ ಓದಿರಿ

ಕರ್ನಾಟಕ ಗೃಹ ಮಂಡಳಿ
4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ-10/2025-26 ದಿನಾಂಕ: 02-04-2025
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿ ವತಿಯಿಂದ ಮೈಸೂರು ಜಿಲ್ಲೆ ಇಲವಾಲ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಮನೆಗಳನ್ನು ನಿಯಮಾನುಸಾರ ಹಂಚಿಕೆ ಮಾಡಿ, ಹಂಚಿಕೆಯಾಗದೆ ಬಾಕಿ ಉಳಿದಿರುವ ಹಾಗೂ ಹಂಚಿಕೆ ರದ್ದತಿಯಿಂದ ಖಾಲಿ ಉಳಿದಿರುವ ಮನೆಗಳನ್ನು **"ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ"** ಆನ್‌ಲೈನ್ ಮೂಲಕ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಆರಂಭಿಕ ಠೇವಣಿಯೊಂದಿಗೆ ಹಣವನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ನಮೂನೆ, ಮನೆಗಳ ಬೆಲೆ, ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ಕರ್ನಾಟಕ ಗೃಹ ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸಬಹುದು.
ಸಹಿ/- ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO30/AAPL/2025-26

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ
ನಂ. ಡಿಸಿಸಿಬಿ/ಕಟ್ಟಡ/01/2025-26 ದಿನಾಂಕ: 02-04-2025
ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬ್ಯಾಂಕಿನ ಪ್ರಧಾನ ಕಛೇರಿಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧ ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಕರ್ನಾಟಕ ಇ-ಪೋರ್ಟಲ್ ಜಾಲತಾಣ https//kppp.karnataka.gov.in ಮೂಲಕ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 09-04-2025ರ ಸಂಜೆ 5-00 ಗಂಟೆ ಆಗಿರುತ್ತದೆಂದು ತಿಳಿಯಪಡಿಸಿದೆ.

Tender No. MDCCB/2024-25/BD/WORK_INDENT7/CALL-2	Construction of MDCC Bank New Head Office building in Mandya

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಎಂ.ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು - 560 041
ದೂ: 080-29601928
ಸಂಖ್ಯೆ: ಆರ್‌ಜಿಯುಹೆಚ್‌ಎಸ್‌ಬಿ/ಪ್ರೊಕ್/ಜಿಇಎನ್/20/2025 ದಿನಾಂಕ: 02.04.2025
ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)
ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು 27ನೇ ಘಟಿಕೋತ್ಸವಕ್ಕೆ ಚಿನ್ನದ ಪದಕಗಳನ್ನು ಖರೀದಿ ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.
(Tender No: RGUHSK/2024-25/IND0017-Call-2)

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	01.04.2025 5:58 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	09.04.2025 2:00 ಗಂಟೆಗೆ
ಮಾದರಿ ಸಲ್ಲಿಕೆಯ ದಿನಾಂಕ	09.04.2025 2:01 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	10.04.2025 2:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
ಡಿಐಪಿಆರ್/ಎಸ್‌ಐ/21/2025-26 ಸಹಿ/- ಕುಲಸಚಿವರು

ಕರ್ನಾಟಕ ಗೃಹ ಮಂಡಳಿ
4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.
ಸಂಖ್ಯೆ:ಕಗೃಮಂ/ಕಾ/ಹಂಚಿಕೆ/ಕೆಂಚಲಗೂಡು/2025-26 ದಿನಾಂಕ: 02-04-2025
ಕಾಲಾವಕಾಶ ವಿಸ್ತರಣೆ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯು ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಜಯಪುರ ಹೋಬಳಿ ಕೆಂಚಲಗೂಡು ಗ್ರಾಮದಲ್ಲಿ ಈಗಾಗಲೆ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಗುಂಪು ಮನೆಗಳಿಗಾಗಿ ಕಾಯ್ದಿರಿಸಿರುವ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ **"ಹೆರಿಟೇಜ್ ಹೈಟ್ಸ್"** ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 2BHK ಮತ್ತು 3BHK ಫ್ಲಾಟ್‌ಗಳ ಹಂಚಿಕೆಗಾಗಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು ಪಾವತಿಸಿ ಅರ್ಜಿ ಸಲ್ಲಿಸಲು, ಕೊನೆಯ **ದಿನಾಂಕ: 02-04-2025** ರಂದು ನಿಗದಿಪಡಿಸಲಾಗಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕವನ್ನು 02-05-2025** ರವರೆಗೆ ವಿಸ್ತರಿಸಲಾಗಿರುತ್ತದೆ. ಉಳಿದಂತೆ **ದಿನಾಂಕ: 06-03-2025**ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/- ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO36/AAPL/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, SWD, ಬೊಮ್ಮನಹಳ್ಳಿ ವಲಯ,
9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-11
ಸಂಖ್ಯೆ:ಕಾಪಾಅ/SWD-ಬೊ/ತಿದ್ದುಪಡಿ-2/03/2024-25 ದಿನಾಂಕ: 02-04-2025
ತಿದ್ದುಪಡಿ-02 (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ.
ಉಲ್ಲೇಖ: 1) ಈ ಕಚೇರಿ ಪ್ರಕಟಣೆ ಸಂಖ್ಯೆ:ಕಾಪಾಅ/SWD/ಬೊ/ಟೆಂಡರ್-1/2024-25, ದಿನಾಂಕ: 03-03-2025
2) ಈ ಕಚೇರಿ ಪ್ರಕಟಣೆ ಸಂಖ್ಯೆ:ಕಾಪಾಅ/SWD/ಬೊ/ತಿದ್ದುಪಡಿ-1/01/2024-25, ದಿನಾಂಕ: 13-03-2025
ಮೇಲ್ಕಂಡ ಉಲ್ಲೇಖಿತ ಟೆಂಡರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಓದಿಕೊಳ್ಳುವುದು. ಪರಿಷ್ಕೃತ ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.

	ಟೆಂಡರ್‌ನ ಕಾರ್ಯಸೂಚಿ	ಪರಿಷ್ಕೃತ ದಿನಾಂಕಗಳು
1.	ಟೆಂಡರ್ ಡಾಕ್ಯುಮೆಂಟ್‌ಗಳನ್ನು (ಜಿಓಕೆ) ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	06.03.2025
2.	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:	15-04-2025ರ ಸಂಜೆ 4:00 ಗಂಟೆಯವರೆಗೆ
3.	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	16-04-2025ರ ಸಂಜೆ 4:30 ಗಂಟೆಗೆ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	19-04-2025

ಟೆಂಡರ್‌ನ ಉಳಿದ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, SWD, ಬೊಮ್ಮನಹಳ್ಳಿ ವಲಯ, ಬೃಬೆಂಮಪಾ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಚಿತ್ರದುರ್ಗ.
ಅಕ್ಷರ ದಾಸೋಹ ಕಾರ್ಯಕ್ರಮ
ಸಂ:ಜಿಪಂಚಿ:ಅದಾಕಾ/ ಕೆ.ಎಫ್.ಸಿ.ಎಸ್.ಸಿ/ಸಾ.ಗು.ಇ.ಟೆ:ಸಿಆರ್-59/2024-25
ದಿನಾಂಕ: 01.04.2025
ಇ-ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
2025-26ನೇ ಸಾಲಿಗೆ ಅಕ್ಷರ ದಾಸೋಹ ಕಾರ್ಯಕ್ರಮದಡಿ 06 ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ. ಗೋದಾಮುಗಳಿಂದ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮಾಡುವ ಸಂಬಂಧ ಅರ್ಹ ಹಾಗೂ ಆಸಕ್ತ ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000 ಪ್ರಕಾರ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಅರ್ಜಿಗಳು ಲಭ್ಯವಾಗುವ ದಿನಾಂಕ:01.04.2025 ರಿಂದ ದಿನಾಂಕ:02.05.2025 ಆನ್‌ಲೈನ್ ಟೆಂಡರ್ ಅರ್ಜಿ ಮತ್ತು ದಾಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:02.05.2025ರ ಸಂಜೆ 4.30 ಗಂಟೆ ಇ.ಎಂ.ಡಿ ಮೊತ್ತ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ: **ತಾಲ್ಲೂಕು ಹೆಸರು:** (1) ಚಿತ್ರದುರ್ಗ:- ಇಎಂಡಿ ಮೊತ್ತ:- **37000** (2) ಚಳ್ಳಕೆರೆ:-ಇಎಂಡಿ ಮೊತ್ತ:- **45000** (3) ಹಿರಿಯೂರು:- ಇಎಂಡಿ ಮೊತ್ತ:-**30000** (4) ಹೊಸದುರ್ಗ:- ಇಎಂಡಿ ಮೊತ್ತ:-**24000** (5) ಹೊಳಲ್ಕೆರೆ:- ಇಎಂಡಿ ಮೊತ್ತ:-**20000** (6) ಮೊಳಕಾಲ್ಮೂರು:- ಇಎಂಡಿ ಮೊತ್ತ:-**27000** ಎಂ.ಡಿ. ಮೊತ್ತ (ವಾರ್ಷಿಕ ಮೌಲ್ಯದ ಶೇಕಡ 2.5% ರಷ್ಟಕ್ಕೆ) ಹೆಚ್ಚಿನ ವಿವರಗಳಿಗಾಗಿ WWW.kppp.karnataka.gov.in ನಲ್ಲಿ ಪಡೆಯಬಹುದು ಹಾಗೂ ಮಾಹಿತಿಗಾಗಿ ಜಿಲ್ಲಾ ಪಂಚಾಯತ್, ಚಿತ್ರದುರ್ಗ ಅಕ್ಷರ ದಾಸೋಹ ಕಾರ್ಯಕ್ರಮ ವಿಭಾಗ ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
DIPR/CTA/KSMCA/01/2025-26 ಸಹಿ/- ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560009.
ದೂರವಾಣಿ: 080-22341230/35 ಇ-ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-03/108/2024-25/06 ದಿನಾಂಕ: 02-04-2025
ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)
ಶ್ರೀ ರಿಜ್ವಾನ್ ಅಹ್ಮದ್ ಶೈಕ್ ಅಮೀರ್ ಬಿನ್ ಇಕ್ಬಾಲ್ ಅಹ್ಮದ್ ಇವರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, **ಹೆಬ್ಬಾಡಿ ಗ್ರಾಮದ** ಸರ್ವೆ ಸಂಖ್ಯೆ: **323/1** ರ 0 ಎ - 35 ಗು ಮತ್ತು ಸರ್ವೆ ಸಂಖ್ಯೆ: **323/4** ರ 03ಎ - 33ಗು **ಒಟ್ಟು 04ಎ - 28ಗು** ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **"ವ್ಯವಸಾಯ ವಲಯ"** ದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1) ಈ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ದೊರಕುವುದಲ್ಲದೇ ಉದ್ಯೋಗಗಳು ಸೃಷ್ಟಿಯಾಗುತ್ತವೆ.
2) ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/- ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾಸಾಸಂಇ/ವಾ.ಪ್ರ/46/ಅಡ್ವರ್ಟೋರ್/2025-26

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ-06
ನಂ:ದಾಹನಪ್ರಾ:ತಾಶಾ:ಎಇಇ:ಕಸಾಸಂಪೋ:ಟೆಂಪ್ರ:10:2024-25/1. ದಿ:01-04-2025
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸೇವೆಗೆ ನೋಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿಲ್ಪಟ್ಟ ಕನ್ಸಲ್ಟೆಂಟ್ಸ್‌ಗಳಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು:- Providing Quality and Quantity Supervision Consultancy Services as 3rd Party(Third party) Inspection and Monitoring for all Developmental Works taken under authority funds and private layout works in Davangere-Harihara Urban Development Authority limits for the year-2025-26.
DHUDA/2024-25/SE0007
ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ:- 1,00,000/-
Last date & time for tender queries /clarifications 08-04-2025 upto 17.00 hours Pre Bid Meeting 09-04-2025 at 11.00 hours Last date and time for receipt of tender 15-04-2025 upto 17.00 hours Date & time for opening of Tender 17-04-2025 at 11.00 hours Note: The rates quoted should be including of all taxes.
1) ಯಾವ ಕಾರಣವನ್ನು ಸಹ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ.
2) ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ವಾಸಾಇ/ದಾವಣಗೆರೆ/02/ಕೆಎಸ್‌ಎಂಸಿಎ/2025-26 ಸಹಿ/- ಆಯುಕ್ತರು, ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /5054 ರಸ್ತೆ /ಟೆಂಡರು/2024-25/
ದಿನಾಂಕ 01-04-2025
ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **2023-24 ನೇ ಸಾಲಿನ 5054 ರಸ್ತೆ ನಿರ್ಮಾಣ ಯೋಜನೆಯಡಿ 04** ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 00, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 00 ಕೆಟಗರಿ II A 00 ಮತ್ತು ಕೆಟಗರಿ I 01** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 01-04-2025 ರಿಂದ ದಿನಾಂಕ 22-04-2025 ರಂದು ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 22-04-2025 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 23-04-2025 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/04/ಕೆಎಸ್‌ಎಂಸಿಎ/2025-26

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174-232201 ಫ್ಯಾಕ್ಸ್ ನಂ:08174-233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ /ಫ.ವ.ನಿ/ನ.ನಿಧಿ/02/2024-25 ದಿನಾಂಕ:-29-03-2025.
ಟೆಂಡರ್ ಪ್ರಕಟಣೆ:-(ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)
ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ 2024-25ನೇ ನಗರಸಭಾ ನಿಧಿ ಅಡಿಯಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document - KC8 ರ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:- http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರ.ಸಂ.1 ವಿವರ: DMA/2024-25/SE5046 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 133.90 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.
ಸಹಿ/-ಅಧ್ಯಕ್ಷರು, ನಗರಸಭೆ, ಅರಸೀಕೆರೆ. ಸಹಿ/-ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/02/ಕೆಎಸ್‌ಎಂಸಿಎ/2025-26

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ
ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ
ಸಂಖ್ಯೆ: ಕಕರಸಾ/ಕಾನಿಅ/ಡಿಬಿ/ಟೆ/1174/2024-25 ದಿನಾಂಕ: 29/03/2025
ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ: 38/2024-25
Through GOK e-procurement platform WWW.kppp.karnataka.gov.in
1) ಕಾಮಗಾರಿ ವಿವರ: ಯಾದಗಿರಿ ಜಿಲ್ಲೆಯ ಹುಣಸಗಿಯಲ್ಲಿ ನೂತನ ಬಸ್ ಘಟಕವನ್ನು ಇತರೆ ಉಪ-ಕೆಲಸಗಳೊಂದಿಗೆ ನಿರ್ಮಿಸುವ ಕಾಮಗಾರಿ, 2) ಲೆಕ್ಕ ಶೀರ್ಷಿಕೆ: ನಗರ ಭೂ ಸಾರಿಗೆ ಮತ್ತು ಬಂಡವಾಳ ವೆಚ್ಚದ ಅನುದಾನ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 750.00 ಲಕ್ಷ, ಗರಿಷ್ಠ ರೂ. 750.00 ಲಕ್ಷ**, 4) ಗುತ್ತಿಗೆದಾರರ ಅರ್ಹತೆ: ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ: **29-04-2025 ಸಾಯಂಕಾಲ 5:00 ಗಂಟೆಯವರೆಗೆ**, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ: ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **05-05-2025 ಸಾಯಂಕಾಲ 17.00 ಗಂಟೆಯವರೆಗೆ**, 8) ಟೆಂಡರ್ ಬಿಡ್ ತೆರೆಯುವ ದಿನಾಂಕ: **07-05-2025 ಮುಂಜಾನೆ 11:00 ಗಂಟೆಯವರೆಗೆ**, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033 / 08472-220663, 10) ಅಂತರಜಾಲ ತಾಣದ ವಿಳಾಸ: ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ದಿನಾಂಕ 11-04-2025 ರ ನಂತರ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ WWW.kppp.karnataka.gov.in
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/05/ಕೆ.ಎಸ್.ಎಂ.ಸಿ.&ಎ/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ-3(ಆರೋಗ್ಯ ಮತ್ತು ನೈರ್ಮಲ್ಯ),
ದಾಸಪ್ಪ ಆಸ್ಪತ್ರೆ ಆವರಣ, ಎನ್.ಆರ್. ರಸ್ತೆ, ಬೆಂಗಳೂರು - 560002.
ಸಂಖ್ಯೆ: ಕಾಅ-3/ಆ&ನೈ/ಟೆಂಡರ್/05/2024-25/ಕರೆ-3 ದಿನಾಂಕ: 02-04-2025
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ) - (ಕರೆ-3)
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು-3, ಆರೋಗ್ಯ ಮತ್ತು ನೈರ್ಮಲ್ಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲು (ತಾಂತ್ರಿಕ ಮತ್ತು ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಲಂಪ್ಸಮ್, ಟರ್ನ್‌ಕೀ, ಫಿಕ್ಸೆಡ್ ಕಾಸ್ಟ್, ನೋ ವೆರಿಯೇಷನ್ ಟೆಂಡರ್ ಆಧಾರದ ಮೇಲೆ ಬಿಬಿಎಂಪಿ ವ್ಯಾಪ್ತಿಯಲ್ಲಿ (52 ಸಂಖ್ಯೆಯ) ಹೊಸ ಇಂದಿರಾ ಕ್ಯಾಂಟೀನ್ (ಪ್ರಿ-ಕಾಸ್ಟ್ ಟೈಪ್) ನಿರ್ಮಾಣ ಮಾಡುವ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 2115.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 21.15 (ರೂ. 1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ, ಬಾಕಿ ರೂ. 20.15 ಲಕ್ಷ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಸಲ್ಲಿಸುವುದು)**

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **04-04-2025 ರಂದು 16.00 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **09-04-2025 ರಂದು 15.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **09-04-2025 ರಂದು 15.30 ಗಂಟೆಗೆ ವಿಶೇಷ ಆಯುಕ್ತರು (ಆ&ನೈ) ರವರ ಕಛೇರಿ ಇಲ್ಲಿ ನಡೆಯುವುದು.** 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21-04-2025 ರಂದು 16.00 ಗಂಟೆವರೆಗೆ.** 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **22-04-2025 ರಂದು 16.30 ಗಂಟೆಯ ನಂತರ.** 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕವಾಗಿ ಅರ್ಹರಾದ ಬಿಡ್ಡುದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು-3 ಆರೋಗ್ಯ ಮತ್ತು ನೈರ್ಮಲ್ಯ, ಬಿಬಿಎಂಪಿ.

ಕರ್ನಾಟಕ ಸರಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾಕುನೀಮತ್ತುನೈ/ವಿಯಾ/ಟೆ.ಪ್ರ/KKRDB/2025-26/04 ದಿನಾಂಕ:01/04/2025
ಅಲ್ಪಾವದಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) "ಇ-ಪ್ರೊಕ್ಯೂಮೆರ್ಂಟ್" ಮೂಲಕ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: 1) Providing Mini water supply to Guttibasaveshwar ashraya colony at Yaktapur village in Shorapur Tq.- Est Cost Rs.65.00 lakhs- Indent No.9193 2) ಲೆಕ್ಕ ಶಿರ್ಷಿಕೆ: KKRDB-2024-25 **3) ಗುತ್ತಿಗೆದಾರರ, ಅರ್ಹತೆ:** 3ನೇ ಹಾಗೂ ಮೇಲ್ಪಟ್ಟು ದರ್ಜೆ **4) ಟೆಂಡರ ಫಾರಂ ಪಡೆಯುವ ದಿನಾಂಕ:** 03/04/2025 ರಿಂದ 11/04/2025. **5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ. **6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ:**11/04/2025 ಸಾಯಂಕಾಲ 4.30 ಗಂಟೆವರೆಗೆ, **7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 15/04/2025 ಬೆಳಗ್ಗೆ 11.00 ಗಂಟೆಯ ನಂತರ. **8) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ:**17/04/2025 ಬೆಳಿಗ್ಗೆ 11.00 ಗಂಟೆಯ ನಂತರ **9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ:** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. **10) ಅಂತರ್ಜಾಲ ತಾಣದ ವಿಳಾಸ:** http://www.kppp.karnataka.gov.in
ಸಹಿ/- ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/06/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com, eepredkpl1@gmail.com
ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/06 ದಿನಾಂಕ:02.04.2025
ಅಲ್ಪಾವಧಿ ಟೆಂಡರ್ ಪಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ **KW**-1, 2, 3 ಮತ್ತು 4ರ ಪಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ **"kppp.karnataka.gov.in ಪೋರ್ಟಲ್"** ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2024-25 ನೇ ಸಾಲಿನ ಕಾಲೋನಿ/ಪ್ರಗತಿ ಕಾಲೋನಿ ಯೋಜನೆ, 2020-21-ಆಬಈ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು **"kppp.karnataka.gov.in ಪೋರ್ಟಲ್"** ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ **kppp.karnataka.gov.in portal** ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ **ದಿನಾಂಕ:03.04.2025** ರ ನಂತರ ದಿಂದ **Download** ಮಾಡಿಕೊಳ್ಳಬಹುದಾಗಿದೆ.
ಟೆಂಡರ ವಿವರ: ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: **03 ತಿಂಗಳು.** ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **03.04.2025 ಸಮಯ 10.00 ಗಂಟೆ ನಂತರ ದಿಂದ 15.04.2025ಸಮಯ 16.00 ಗಂಟೆವರೆಗೆ** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **03.04.2025 ಸಮಯ 11.00 ಗಂಟೆ ನಂತರ ದಿಂದ: 15.04.2025 ಸಮಯ 16.30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **16.04.2025 ಕಚೇರಿ ಸಮಯದಲ್ಲಿ.** ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು**
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಕೊಪ್ಪಳ.
ಡಿಐಪಿಆರ್/ಕೊಪ್ಪಳ/04/ಕೆಎಸ್‌ಎಂಸಿಎ/2025-26

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ
KMF
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ. ಬಿ ರಸ್ತೆ, ಧಾರವಾಡ - 580 004
ದೂ.ಸಂಖ್ಯೆ: 2467603/2468380 E-mail-dharwarnin@gmail.com
ಐಎಫ್‌ಟಿ ಸಂಖ್ಯೆ:-KMF/2025-26/IND1348 ದಿನಾಂಕ: 01-04-2025
ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., (ಧಾಮುಲ್) ಧಾರವಾಡವು ತಾಂತ್ರಿಕ ಮತ್ತು ವಾಣಿಜ್ಯ ದ್ವಿ-ಲಕೋಟಿ ಪದ್ಧತಿಯಲ್ಲಿ ಈ ಕೆಳಕಂಡ ಸರಕು / ವಸ್ತುವನ್ನು ನಮ್ಮ ಟೆಂಡರ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ಪೂರೈಸುವ ಕೆಲಸವನ್ನು ನಿರ್ವಹಿಸಲು ಅರ್ಹ ಮೂಲ ಉತ್ಪಾದಕರು/ಅಧಿಕೃತ ಡೀಲರ್ / ಪೂರೈಕೆದಾರರಿಂದ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ಸ್ಥಳ ಪರಿವೀಕ್ಷಿಸಿ ಟೆಂಡರ್ ಸಲ್ಲಿಸುವುದಾಗಿದೆ.

Sl. No	Particular	Qty	EMD Amount (In Rs.)
1	"Supply, Testing and Commissioning of RECIPROCATING TYPE TRIPLEX PLUNGER PUMP (HIRO NISHA make or equivalent) for 30 MTPD Powder Plant at Main Dairy, Dharwad Milk Union Ltd., Dharwad as per our technical specification mentioned in tender documents.	1 No	10,000/-

ಇ-ಟೆಂಡರ್ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ವನ್ನು ಇ-ಪೋರ್ಟಲ್ ನಿಯಮಾನುಸಾರ ಟೆಂಡರ್ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ:- **080-46010000 / 68948777, ಇ-ಮೇಲ್:-support@eprochelpdsk.com** ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ್ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ-ಪೋರ್ಟಲ್ ಜಾಲತಾಣದಿಂದ ಟೆಂಡರ್ ದಾಖಲಾತಿ ಲಭ್ಯವಾಗುವ ದಿನಾಂಕ.	ದಿ: 03.04.2025 ರಿಂದ ದಿ: 03.05.2025 ರ ಸಂಜೆ 4 ಗಂಟೆಗಿಂತ ಮೊದಲು.
2	ಇ-ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ: 03.05.2025, ರಂದು ಸಂಜೆ 4.00 ರ ವರೆಗೆ.
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 05.05.2025, ರಂದು ಸಂಜೆ 04.30 ರ ನಂತರ.
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ: 09.05.2025, ರಂದು ಬೆಳಿಗ್ಗೆ 11.00 ರ ನಂತರ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3 ಮತ್ತು 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.
ಇ-ಮೇಲ್ : splocaima21@gmail.com ದೂರವಾಣಿ : 080-29565353/29604556
No. SPLOCA/ADM/CR/37/2024-25 **Date: 02-04-2025**
ಟೆಂಡರ್ ಪ್ರಕಟಣೆ
The SPECIAL OFFICER & COMPETENT AUTHORITY IMA & OTHER KPIDFE SCAM CASES invites tenders from Interested agencies/ Firms/Companies/ Registered Manufacturers and Authorised Dealers in Karnataka for supply of MATERIALS & STATIONERY FOR SPLOCA, the interested may submit the proposal as detailed in the tender document through E-procurement portal on or before specified date.
Calendar of Events:

Commencement of download of e-Tender Form From website- **https://eproc. Karnataka.gov.in**	**04/04/2025**
Last Date for Queries on or before	**07/04/2025 till 5:00 p.m.**
Pre-Bid Meeting	**08/04/2025 at 11:00 a.m.**
Last Date for Uploading of Tender in e-procurement platform on or before	**09/04/2025 till 5:00 p.m.**
Opening of Technical Bid	**11/04/2025 till 12:00 p.m.**
Submission of Samples	**15/04/2025 at 11:00 am**
Opening of Financial Bid	**Will be intimated**
Approximate value of tender	**Rs. 20.00 Lakhs**

Place for any query: O/o SPLOCA, IMA & Other KPIDFE Scam Cases, 3rd Floor, Podium Block, V V Towers Bengaluru - 560001. E-mail: **splocaima21@gmail.com**
ಸಹಿ/-
ಸಹಾಯಕ ಆಯುಕ್ತರು,
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)ಕಂದಾಯ ಇಲಾಖೆ.
DIPR/CP/47/Zen/2025-26

ಸುಭಾಷಿತ

ಸಾಹಿತ್ಯವು ಶ್ರೀಮಂತರಿಗೆ ಕತೆಯನ್ನು ಕೊಡುತ್ತದೆ. ಬಡತನವು ಸಾಹಿತ್ಯಕ್ಕೆ ಕತೆಯನ್ನು ಕೊಡುತ್ತದೆ.

–ಬೀಚಿ

ದೊಡ್ಡ ಯೋಜನೆಗಳ ಭಾರದಲ್ಲಿ ಗೌಣವಾದ ಜನರ ನಿರೀಕ್ಷೆಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಇತಿಹಾಸದಲ್ಲೇ ಅತ್ಯಂತ ಬೃಹತ್ ಗಾತ್ರದ್ದು (₹ 19,930 ಕೋಟಿ) ಎಂದು ಹೇಳಿಕೊಳ್ಳಲಾಗಿರುವ 2025–26ನೇ ಸಾಲಿನ ಬಜೆಟ್ ಮಂಡನೆಯಾಗಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಬಜೆಟ್‌ನ ಗಾತ್ರದಲ್ಲಿ ಈ ಸಲ ಭಾರಿ ಹೆಚ್ಚಳ ಆಗಿದೆ. ಬಿಬಿಎಂಪಿಗೆ ಚುನಾಯಿತ ಸದಸ್ಯರಿಲ್ಲದೆ, ಅಧಿಕಾರಿಗಳೇ ಸತತ ಐದನೇ ವರ್ಷವೂ ಮಂಡಿಸಿದ ಬಜೆಟ್ ಇದಾಗಿದೆ. ಇದು, ಬೆಂಗಳೂರಿನ ನಾಗರಿಕರ ಸಾಂವಿಧಾನಿಕ ಹಕ್ಕಿನ ಸ್ಪಷ್ಟ ಉಲ್ಲಂಘನೆ ಎಂಬ ವಿವಿಧ ಸಂಘಟನೆಗಳ ಕೂಗು ಬೃಹತ್ ಯೋಜನೆಗಳ ಅಬ್ಬರದಲ್ಲಿ ಕರಗಿಹೋಗಿದೆ. 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಛಾಯೆ ಈ ಬಜೆಟ್‌ನಲ್ಲೂ ಮುಂದುವರಿದಿದ್ದು, ಅದರಡಿ ಎಂಟು ವಿಭಾಗಗಳ ಯೋಜನೆಗಳಿಗೆ ಹಣ ಎತ್ತಿಡುವ ಪ್ರಯತ್ನ ನಡೆದಿದೆ. ಬಜೆಟ್ ಸಿದ್ಧಪಡಿಸಿದವರು, ಅದರ 'ಭಾರಿ ಗಾತ್ರ'ದ ಕುರಿತು ಹೆಮ್ಮೆಯಿಂದ ಹೇಳಿಕೊಂಡರೂ ವರ್ಷಗಳಿಂದ ಯಾವ ಸಂಪನ್ಮೂಲಗಳಿಂದ ವರಮಾನ ಸಂಗ್ರಹ ಸಾಧ್ಯವಾಗಲಿಲ್ಲವೋ ಅದೇ ಮೂಲಗಳಿಂದ ದುಪ್ಪಟ್ಟು ವರಮಾನ ಗಳಿಸುವ ಗುರಿ ಹಾಕಿಕೊಂಡಿದ್ದಾರೆ. ಇದು ಕಾರ್ಯಸಾಧ್ಯವೇ ಎನ್ನುವ ಪ್ರಶ್ನೆ ಬಲವಾಗಿ ಕಾಡುತ್ತಿದೆ. ಉದಾಹರಣೆಗೆ, ಜಾಹೀರಾತು ಕರ, ಇ-ಖಾತೆ ವರ್ಗಾವಣೆ, ಸ್ವತ್ತುಗಳ ಬಾಡಿಗೆ, ಚಿತಾಗಾರದ ಶುಲ್ಕ, ಒಎಫ್‌ಸಿ ತೆರಿಗೆ ಸಂಗ್ರಹವನ್ನು ಕಳೆದ ವರ್ಷಕ್ಕೆ ಹೋಲಿಸಿದರೆ, ಬಹುತೇಕ ದ್ವಿಗುಣಗೊಳಿಸಿಕೊಳ್ಳಲು ಅಂದಾಜಿಸಲಾಗಿದೆ. ಇವುಗಳ ವರಮಾನ ಹಿಂದಿನ ವರ್ಷಗಳಲ್ಲಿ ಬಜೆಟ್ ನಿರೀಕ್ಷೆಯ ಅರ್ಧದಷ್ಟು ಮಾತ್ರ ಸಂಗ್ರಹವಾಗಿತ್ತು. ಸ್ವಂತ ಸಂಪನ್ಮೂಲಕ್ಕಿಂತಲೂ ಈ ಬಜೆಟ್ ಹೊರಗಿನ ಅನುದಾನವನ್ನೇ ಹೆಚ್ಚಾಗಿ ನೆಚ್ಚಿಕೊಂಡಿದ್ದು, ಪರಾವಲಂಬಿ ಯೋಜನೆಗಳೇ ಬಹಳಷ್ಟಿವೆ. ಬಜೆಟ್‌ನ ಒಟ್ಟು ವರಮಾನದ ಶೇಕಡ 44ರಷ್ಟು ಮೊತ್ತವನ್ನು ಸರ್ಕಾರದ ಅನುದಾನ, ಖಾತರಿ ಹಾಗೂ ಸಾಲದ ರೂಪದಲ್ಲಿ ನಿರೀಕ್ಷಿಸುವುದು ಅದರ ಪರಾವಲಂಬಿ ಸ್ಥಿತಿಗೆ ದ್ಯೋತಕ.

ಗುಂಡಿಮುಕ್ತ ರಸ್ತೆ, ತ್ಯಾಜ್ಯಮುಕ್ತ ಬಡಾವಣೆ, ದಟ್ಟಣೆಮುಕ್ತ ಸಂಚಾರ ವ್ಯವಸ್ಥೆಗೆ ಭರವಸೆದಾಯಕ ಯೋಜನೆಗಳು ಸಿಗಬಹುದೆಂಬ ಜನರ ನಿರೀಕ್ಷೆ ಹುಸಿಯಾಗಿದೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಬಿಬಿಎಂಪಿ ಮಣೆ ಹಾಕಿರುವುದು ಎದ್ದು ಕಾಣುವ ಅಂಶ. ರಾಜಧಾನಿ ಅಭಿವೃದ್ಧಿಯ ದಿಕ್ಕನ್ನೇ ಬದಲಿಸುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸುವ ಕನಸು ಬಿತ್ತಿರುವ ಬಜೆಟ್, ಅದಕ್ಕಾಗಿ ವಿಶೇಷ ಉದ್ದೇಶಿತ ಘಟಕ (ಎಸ್‌ಪಿವಿ) ಸ್ಥಾಪಿಸಿ, ₹73,600 ಕೋಟಿ ವಿನಿಯೋಗ ಮಾಡುವುದಾಗಿ ಪ್ರಸ್ತಾಪಿಸಿದೆ. ಸುರಂಗ ರಸ್ತೆ ನಿರ್ಮಾಣ, ಡಬಲ್ ಡೆಕರ್ ಯೋಜನೆ ಅನುಷ್ಠಾನ, ಎಲಿವೇಟೆಡ್ ಕಾರಿಡಾರ್ ಮತ್ತು ಹೊಸ ರಸ್ತೆಗಳ ನಿರ್ಮಾಣ, ವೈಟ್ ಟಾಪಿಂಗ್ ಹಾಗೂ ಸ್ಕೈ ಡೆಕ್ ಯೋಜನೆಯ ಅನುಷ್ಠಾನ ಸೇರಿದಂತೆ ಸಾರ್ವಜನಿಕ ಕಾಮಗಾರಿಗಳಿಗೆ ಬಜೆಟ್‌ನ ಒಟ್ಟಾರೆ ಮೊತ್ತದಲ್ಲಿ ಶೇ 65ರಷ್ಟು ಅನುದಾನವನ್ನು ಮೀಸಲಿಡಲಾಗಿದೆ. ಬಿಬಿಎಂಪಿಯ ಉದ್ದೇಶಿತ ಈ ಹೊಸ ಯೋಜನೆಗಳಿಗೆ ಮೆಟ್ರೊಪಾಲಿಟನ್ ಯೋಜನಾ ಸಮಿತಿಯ (ಎಂಪಿಸಿ) ಅನುಮೋದನೆ ಇಲ್ಲ. ಮಾಸ್ಟರ್ ಪ್ಲಾನ್ ಭಾಗವಾಗಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದುಕೊಳ್ಳಲು ಸದ್ಯ ಒಂದು ಮಾಸ್ಟರ್ ಪ್ಲಾನ್ ಸಹ ಇಲ್ಲ. ಹೀಗಿರುವಾಗ ಇಂತಹ ದೊಡ್ಡ ಯೋಜನೆಗಳಿಗೆ ಭಾರಿ ಮೊತ್ತವನ್ನು ವಿನಿಯೋಗಿಸುವುದು ಎಷ್ಟು ಸರಿ ಎಂಬುದು ತಜ್ಞರ ಪ್ರಶ್ನೆ. ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಶೇ 4ರಷ್ಟು ಮಾತ್ರ ಅನುದಾನ ಒದಗಿಸಲಾಗಿದೆ. ಇದು ಒಳಗೊಳ್ಳುವ ಅಭಿವೃದ್ಧಿ ಅಲ್ಲ ಎನ್ನುವುದು ತಜ್ಞರ ಆಕ್ಷೇಪ. ಬೃಹತ್ ಕಾಮಗಾರಿಗಳಿಗೆ ಆದ್ಯತೆ ನೀಡಿ, ವಾರ್ಡ್ ರಸ್ತೆ, ಚರಂಡಿ ಕಾಮಗಾರಿಗಳನ್ನು ಕಡೆಗಣಿಸಲಾಗಿದೆ. ಒಂದುವೇಳೆ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿದ್ದಿದ್ದರೆ ಈ ರೀತಿ ತಾರತಮ್ಯಕ್ಕೆ ಅವಕಾಶ ಇರುತ್ತಿರಲಿಲ್ಲ ಎಂಬ ವಾದದಲ್ಲಿ ತಥ್ಯವಿದೆ. ಗುಂಡಿಮುಕ್ತ ರಸ್ತೆ, ಹೂಳುಮುಕ್ತ ಚರಂಡಿ, ತ್ಯಾಜ್ಯಮುಕ್ತ ಬಡಾವಣೆ, ದಟ್ಟಣೆಮುಕ್ತ ಸಂಚಾರ ವ್ಯವಸ್ಥೆಗೆ ಭರವಸೆದಾಯಕ ಯೋಜನೆಗಳು ಸಿಗಬಹುದೆಂಬ ಜನರ ನಿರೀಕ್ಷೆ ಹುಸಿಯಾಗಿದೆ.

ಕಸಸಂಗ್ರಹ ಶುಲ್ಕವನ್ನು ಹೆಚ್ಚುವರಿಯಾಗಿ ನಾಗರಿಕರ ಮೇಲೆ ಹೊರಿಸಿದ ಬಜೆಟ್ ಕೂಡ ಇದಾಗಿದೆ. ಘನತ್ಯಾಜ್ಯ ನಿರ್ವಹಣೆಯು ನಗರವನ್ನು ಎರಡೂವರೆ ದಶಕಗಳಿಂದ ಕಾಡುತ್ತಿರುವ ಬಹುದೊಡ್ಡ ಸಮಸ್ಯೆ. ಈ ಸಮಸ್ಯೆ ನಿವಾರಣೆಗೆ ಒಂದು ಸುಸ್ಥಿರ ಹಾಗೂ ವ್ಯವಸ್ಥಿತ ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಪ್ರಬಲ ಆಕಾಂಕ್ಷೆ ಬಜೆಟ್‌ನಲ್ಲಿ ಗೋಚರಿಸಿಲ್ಲ. ನಗರದ ನಾಲ್ಕೂ ದಿಕ್ಕುಗಳಲ್ಲಿ ತಲಾ ನೂರು ಎಕರೆ ಜಾಗದಲ್ಲಿ ತ್ಯಾಜ್ಯ ನಿರ್ವಹಣೆ ಘಟಕ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಜೆಟ್‌ಗಳಲ್ಲಿ ಇದ್ದಂತಹ ಹೇಳಿಕೆಗಳು ಈ ಸಲದ ಬಜೆಟ್‌ನಲ್ಲೂ ಮುಂದುವರಿದಿವೆ. ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು 'ಬಿಬಿಎಂಪಿ ಒನ್ ಆ್ಯಪ್' ಅಭಿವೃದ್ಧಿಪಡಿಸಲು ನಿರ್ಧರಿಸಿರುವುದು ಗಮನಸೆಳೆಯುವಂತಹ ಘೋಷಣೆ. ಈ ಆ್ಯಪ್ ಏನಾದರೂ ಸಮರ್ಪಕವಾಗಿ ಅಭಿವೃದ್ಧಿ ಹೊಂದಿ ನಾಗರಿಕರ ಕೈಗೆ ಸಿಕ್ಕರೆ ನಗರದ ಸಮಸ್ಯೆಗಳ ಪರಿಹಾರಕ್ಕೆ ಸುಲಭದ ದಾರಿ ಸಿಕ್ಕಂತಾಗುತ್ತದೆ. ಆದರೆ, ಘೋಷಣೆಗಳ ಅನುಷ್ಠಾನದಲ್ಲಿ ಬಿಬಿಎಂಪಿ ಎಷ್ಟೊಂದು ಹಿಂದಿದೆ ಎಂಬುದನ್ನು ನಗರದ ಜನ ಬಲ್ಲರು.

ದಿನದ ಟ್ವೀಟ್

ಜನಾಕ್ರೋಶ ಆಗ ಕಾಣಲಿಲ್ಲವೇ?

ಪಾಪ್‌ಕಾರ್ನ್ ಮೇಲೂ ಜಿಎಸ್‌ಟಿ ಹೇರಿದಾಗ, ಮಕ್ಕಳ ಪುಸ್ತಕ, ಪೆನ್ಸಿಲ್ ಮೇಲೂ ತೆರಿಗೆ ಹಾಕಿ ಲೂಟಿ ಮಾಡಿದಾಗ, ಕನಿಷ್ಠ ಶೇವಣಿ ಹೆಸರಿನಲ್ಲಿ ₹ 43,500 ಕೋಟಿ ದಂಡವನ್ನು ವಸೂಲಿ ಮಾಡಿದಾಗ, ಜೀವವಿಮೆಗೂ ಶೇ 18ರಷ್ಟು ಜಿಎಸ್‌ಟಿ ವಿಧಿಸಿದಾಗ, ಜಿಎಸ್‌ಟಿ ಕಾರಣಕ್ಕಾಗಿ ಸಣ್ಣ ಉದ್ದಿಮೆಗಳು ಬಾಗಿಲು ಮುಚ್ಚಿದಾಗ, ಉದ್ಯೋಗ ಕಡಿತವಾದಾಗ, ಭಾರತೀಯರ ಖರೀದಿ ಸಾಮರ್ಥ್ಯ ಕುಸಿದು, ಬದುಕು ಬರ್ಬರವಾದಾಗ ಬಿಜೆಪಿ ಸ್ನೇಹಿತರಿಗೆ ಜನಾಕ್ರೋಶ ಕಾಣಲಿಲ್ಲವೇ?

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಕಿಡಿನುಡಿ



ವಿಧಾನಸೌಧ ಮೊದಲು 'ಯು' ಸರ್ಟಿಫಿಕೆಟ್ ಹೊಂದಿತ್ತು. ಈಗ ಅಲ್ಲಿ ನಡೆಯುತ್ತಿರುವುದನ್ನು ನೋಡಿ ಮಹಿಳೆಯರು, ಮಕ್ಕಳು ಅಸಹ್ಯ ಪಟ್ಟುಕೊಳ್ಳುವಂತಾಗಿದೆ. ಇಡೀ ವಿಧಾನಸಭೆ ನಡವಳಿಕೆಗಳಿಗೆ, ಸಿನಿಮಾಗಳಂತೆ 'ಎ' ಸರ್ಟಿಫಿಕೆಟ್ ನೀಡುವುದು ಒಳಿತು.

ಎಚ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 3-4-2000

- **'ರಾಜ್ಯಕ್ಕೆ ಕಳಂಕ ತಂದ ಕಂಬಾಲಪಲ್ಲಿ ನರಮೇಧ ಘಟನೆ'**

ಬೆಂಗಳೂರು, ಏ 2– 'ಕಂಬಾಲಪಲ್ಲಿ ನರಮೇಧ, ಶಾಸಕರ ಹತ್ಯೆಯಂಥ ಘಟನೆಗಳು ರಾಜ್ಯಕ್ಕೆ ಕಳಂಕ ತಂದಿವೆ' ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ವಿಷಾದಿಸಿದರು.

'ಪೊಲೀಸ್ ಇಲಾಖೆಯ ನಿದ್ರೆಗೆಡಿಸಿ, ಸರ್ಕಾರಕ್ಕೆ ಆತಂಕ ಉಂಟು ಮಾಡಿರುವ ಇಂಥ ಪ್ರಕರಣಗಳು ಇನ್ನೆಂದೂ ಮರುಕಳಿಸದಂತೆ ಕಟ್ಟೆಚ್ಚರವಹಿಸಿ' ಎಂದು ಅವರು ಪೊಲೀಸರಿಗೆ ಕರೆ ನೀಡಿದರು.

ಪೊಲೀಸ್ ಧ್ವಜ ದಿನಾಚರಣೆ ಅಂಗವಾಗಿ ಉತ್ತಮ ಸೇವೆ ಸಲ್ಲಿಸಿದ ಇಲಾಖೆಯ ಸಿಬ್ಬಂದಿಯನ್ನು ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳೊಂದಿಗೆ ಗೌರವಿಸಿ ಮುಖ್ಯಮಂತ್ರಿ ತಮ್ಮ ಅನಿಸಿಕೆ ಹಂಚಿಕೊಂಡರು.

- **ರಹಸ್ಯ ಭೇಟಿಗೆ ಪಾಕಿಸ್ತಾನದ ನಿಯಾಜ್ ದೆಹಲಿಗೆ**

ನವದೆಹಲಿ, ಏ. 2 (ಪಿಟಿಐ)– ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಭಾರತಕ್ಕೆ ಬಂದು 'ಹಿಂಬಾಗಿಲ ಗೋಪ್ಯ ಮಾತುಕತೆ' ನಡೆಸಿದ ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿಯಾಜ್ ಎ. ನಾಯ್ಕ್ ಇಂದು ಮತ್ತೆ ಇಲ್ಲಿಗೆ ಅನಿರೀಕ್ಷಿತವಾಗಿ ಆಗಮಿಸಿದ್ದಾರೆ.

ಅವರು ಭಾರತದ ಅಧಿಕಾರಿಗಳೊಂದಿಗೆ 'ಗೋಪ್ಯ ಸಮಾಲೋಚನೆ' ನಡೆಸಲಿದ್ದಾರೆ ಎಂದು ಮೂಲಗಳು ಇಂದು ರಾತ್ರಿ ತಿಳಿಸಿವೆ.

ನಾಯ್ಕ್ ಅವರ ಆಗಮನವನ್ನಷ್ಟೇ ದೃಢಪಡಿಸಿರುವ ಮೂಲಗಳು, ಅವರು ಯಾರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂಬುದನ್ನು ತಿಳಿಸಿಲ್ಲ.

50 ವರ್ಷಗಳ ಹಿಂದೆ

ಗುರುವಾರ, 3-4-1975

- **ಕಡಲಗಡಿ: ಇತ್ಯರ್ಥವಿಲ್ಲದೆ ಭಾರತ– ಬಾಂಗ್ಲಾ ಚರ್ಚೆ ಅಂತ್ಯ**

ನವದೆಹಲಿ, ಏ. 2– ಕಡಲ ತೀರದ ಗಡಿ ಗುರುತಿಸುವ ಭಾರತ– ಬಾಂಗ್ಲಾದೇಶದ ನಡುವಣ ಮಾತುಕತೆಯು ಯಾವುದೇ ಅಂತಿಮ ಇತ್ಯರ್ಥವಿಲ್ಲದೆ ಇಂದು ಮುಕ್ತಾಯವಾಯಿತು.

ಉಭಯತ್ರರಿಗೆ ಅನುಕೂಲವಾದ ಸ್ಥಳದಲ್ಲಿ ಹಾಗೂ ದಿನದಂದು ಮಾತುಕತೆಯನ್ನು ಮತ್ತೆ ಆರಂಭಿಸಲಾಗುವುದು ಎಂದು ಭಾರತದ ವಿದೇಶಾಂಗ ಮಂತ್ರಿ ವೈ.ಬಿ.ಚವ್ಹಾಣ್ ಅವರು ಪತ್ರಕರ್ತರಿಗೆ ತಿಳಿಸಿದರು.

- **ಮುಂಬೈಗೆ ರಣಜಿ ಪ್ರಶಸ್ತಿ**

ಮುಂಬೈ, ಏ. 2– ಕರ್ನಾಟಕದ ಮೇಲೆ 7 ವಿಕೆಟ್‌ಗಳ ಜಯ ಪಡೆದ ಮುಂಬೈ ತಂಡದವರು 25ನೇ ಬಾರಿಗೆ ರಣಜಿ ಟ್ರೋಫಿ ಕ್ರಿಕೆಟ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಈ ನ್ಯೂನತೆಗೆ ಮನುಷ್ಯರ ಕೈವಾಡವೇ ಕಾರಣ, ನಿವಾರಿಸುವುದು ಇಂದಿನ ತುರ್ತು

'ಪೂರ್ವಗ್ರಹದ ಸುಳಿ'ಯಲ್ಲಿ ಎ.ಐ.

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಯಾಂತ್ರಿಕ ಬುದ್ಧಿಮತ್ತೆಯ (ಯಾಂಬು– ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಬಳಕೆ ಶುರುವಾಗಿ ವರ್ಷಗಳೇ ಕಳೆದಿವೆ. ಅದನ್ನು ಬಳಸಿಕೊಂಡು ಲಾಭ ಗಳಿಸಿದವರು ಯಾಂಬುಗೆ ಇನ್ನಷ್ಟು ಶಕ್ತಿ ತುಂಬುವ ಇರಾದೆಯಲ್ಲಿದ್ದಾರೆ. ಅದರಿಂದ ಅಪಮಾನಿತರಾಗಿ ತಿರಸ್ಕರಿಸಲ್ಪಟ್ಟವರು ಮಾರುಕಟ್ಟೆಯಲ್ಲಿರುವ ಯಾಂಬುಗಳ ಬುದ್ಧಿ ಸರಿ ಇಲ್ಲ, ನಾವು ಕೇಳುವುದೊಂದು ಅವು ಹೇಳುವುದೊಂದು. ಅದರ ಬಳಕೆಯಿಂದ ಸಮಯವೂ ಹಾಳು, ನೆಮ್ಮದಿಯೂ ಇಲ್ಲ ಎಂದು ನೊಂದು ನುಡಿಯುತ್ತಾರೆ. ಬಳಕೆ ಶುರುವಾದ ದಿನದಿಂದ ಒಂದಲ್ಲ ಒಂದು ವಿವಾದ ಯಾಂಬುವನ್ನು ಸುತ್ತಿಕೊಳ್ಳುತ್ತಲೇ ಇದೆ.

ಯಾಂಬು ಬಹುಜನರ ಕೆಲಸ ಕಸಿಯುತ್ತದೆ, ಅದಕ್ಕೆ ಭಾವನೆಗಳಿಲ್ಲ, ಎಷ್ಟೋ ಪ್ರಶ್ನೆಗಳಿಗೆ ಅದರಲ್ಲಿ ಉತ್ತರವಿಲ್ಲ ಎಂಬ ಆರೋಪಗಳು ಮೊದಲಿನಿಂದಲೂ ಇವೆ. ಇವೆಲ್ಲಕ್ಕಿಂತಲೂ ಗಂಭೀರವಾದುದು ಯಾಂಬು ಪೂರ್ವಗ್ರಹಪೀಡಿತ ಎಂಬ ಆರೋಪ. ಯಾಂಬು ಕೆಲ ಜನಾಂಗದ ಜನರನ್ನು ಗುರುತಿಸುವುದೇ ಇಲ್ಲ, ಸಬಲರಿಗೆ, ಯುವಕರಿಗೆ ಮಣೆ ಹಾಕುತ್ತದೆ. ಅಂಗವಿಕಲರನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಸಾಮಾಜಿಕವಾಗಿ ಹಿಂದುಳಿದ ಪ್ರದೇಶಗಳ ಜನರ ಸಾಲದ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ. ಮಹಿಳೆಯರನ್ನು, ಆರ್ಥಿಕವಾಗಿ ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು, ಹಿಂದೊಮ್ಮೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರನ್ನು, ಕಪ್ಪುವರ್ಣೀಯರನ್ನು ಅಶಕ್ತರು, ಅಪರಾಧಿಗಳು ಎಂಬಂತೆ ಬಿಂಬಿಸುತ್ತಿದೆ. ನೌಕರಿಯ ನೇಮಕಾತಿಗಳಲ್ಲಿ ಲಿಂಗತಾರತಮ್ಯ ತೋರಿದ ನಿದರ್ಶನಗಳಿವೆ. ತನ್ನ ಉತ್ತರಗಳಲ್ಲಿ, ನಿರ್ಣಯಗಳಲ್ಲಿ ಪೂರ್ವಗ್ರಹ ತೋರುತ್ತದೆ ಎಂಬ ಆರೋಪವು ಯಾಂಬುವಿನ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದೆ.

ಉದಾಹರಣೆಗೆ, ಲ್ಯಾಬ್ ಕೋಟ್ ಧರಿಸಿರುವ ಮಹಿಳೆಯರನ್ನು ರಸ್ತೆ ಗುಡಿಸುವವರು ಅಥವಾ ಕ್ಲೀನರ್‌ಗಳು ಎಂದು ಕರೆದು ಅವಮಾನಿಸುತ್ತದೆ. ಪ್ಯಾಂಟು, ಷರ್ಟು ಧರಿಸಿದ ಮಹಿಳೆಯೊಬ್ಬರನ್ನು ಗಡ್ಡ–ಮೀಸೆ ಬೆಳೆಯದ ಎಳಸು ಯುವಕ ಎಂದು ಮೂದಲಿಸುತ್ತದೆ. ಮುಖಚಹರೆ ಪತ್ತೆ ಮಾಡುವ ಯಾಂಬು, ವ್ಯಕ್ತಿಯು ಗೌರವರ್ಣದವರಾಗಿದ್ದರೆ ಅವರನ್ನು ಸರಿಯಾಗಿ ಗುರುತು ಹಿಡಿಯುತ್ತದೆ. ಅವರೇನಾದರೂ ಕಪ್ಪುವರ್ಣದವರಾಗಿದ್ದರೆ ತಪ್ಪು ಹೆಸರುಗಳನ್ನು ಹೇಳುತ್ತದೆ. ಸೆರೇನಾ ವಿಲಿಯಮ್ಸ್, ಮಿಶಲ್ ಒಬಾಮ, ಓಪ್ರಾ ವಿನ್‌ಫ್ರೇ ಇವರನ್ನೆಲ್ಲ ಬೇರೆ ಹೆಸರಿನಿಂದ ಕರೆದಿತ್ತು. ಅಷ್ಟೇ ಅಲ್ಲ, ವಿನ್‌ಫ್ರೇ ಅವರಲ್ಲಿ ಶೇಕಡ 76ರಷ್ಟು ಪುರುಷ ಲಕ್ಷಣಗಳಿವೆ ಎಂದು ಹೇಳಿ ದೊಡ್ಡ ಮುಜುಗರ ಸೃಷ್ಟಿಸಿತ್ತು.

ಯಾಂಬು ಸೃಷ್ಟಿಸುವ ಬಹುಪಾಲು ಚಿತ್ರಗಳು ಯುವಕ–ಯುವತಿಯರದೇ ಆಗಿರುತ್ತವೆ. ವಯಸ್ಸಾದವರಿಗೆ ಅಲ್ಲಿ ಜಾಗವೇ ಇಲ್ಲ. ಪಕ್ಷಪಾತವಷ್ಟೇ ಅಲ್ಲ ಪೋಲಿತನಕ್ಕೂ ಯಾಂಬು ಕುಪ್ರಸಿದ್ಧವಾಗಿದೆ. ಮಸಾಚುಸೆಟ್ಸ್‌ನ ಟೆಕ್ನಾಲಜಿ ರಿವ್ಯೂ ಪತ್ರಿಕೆಯ ಪತ್ರಕರ್ತೆ ಮೆಲಿಸ್ಸಾ ಹೈಕ್ಕಿಲ ಅವರು ಮಾದಕ ಮಹಿಳೆಯರ ಚಿತ್ರಗಳನ್ನು ನೀಡು ಎಂದು ಯಾಂಬು ಆ್ಯಪ್ 'ಲೆನ್ಸಾ'ವನ್ನು ಕೇಳಿದಾಗ ಕಂಪ್ಯೂಟರ್ ತೆರೆಯ ಮೇಲೆ ಅರೆಬರೆ ಬಟ್ಟೆ ತೊಟ್ಟ ಮಹಿಳೆಯರ ಚಿತ್ರಗಳು ಮೂಡಿಬಂದವು. ಚಿತ್ರಗಳಲ್ಲಿದ್ದ ಮಹಿಳೆಯರೆಲ್ಲರೂ ಏಷ್ಯಾದವರೇ ಆಗಿದ್ದರು. ತುಂಡು ಉಡುಗೆ ತೊಟ್ಟ ಮೆಲಿಸ್ಸಾ ಅವರ ಐದಾರು ಚಿತ್ರಗಳು ಅಲ್ಲಿದ್ದವು! ಇಷ್ಟೇ ಅಲ್ಲ, ಬಳಕೆಯಲ್ಲಿರುವ ಚಾಟ್‌ಬಾಟ್‌ಗಳಿಗೆ ಸ್ತ್ರೀಯರ ಹೆಸರಿಟ್ಟು ಮಹಿಳೆಯರನ್ನು ಸೇವಕಿಯರೆಂದು ಅವಮಾನಿಸಲಾಗಿದೆ ಎಂದು ಲಂಡನ್ ಯೂನಿವರ್ಸಿಟಿಯ ಕಾನೂನು ವಿಭಾಗದ ಪ್ರೊಫೆಸರ್ ನೋರಾ ಲಾಯ್ಡೇನ್ ಅವರು ಕೆಂಡಾಮಂಡಲವಾಗಿದ್ದರು. ಸಮಸ್ಯೆಗಳಿಗೆ ಉತ್ತರ, ಸಮಾಧಾನ ಅಥವಾ ಪರಿಹಾರ ನೀಡುವಾಗ ಯಾಂಬು ಪೂರ್ವಗ್ರಹ ತೋರಿಸುತ್ತಿರುವುದು ಎದ್ದುಕಾಣಿಸುತ್ತಿದೆ. ಇದು ಅನೇಕ ಸಾಮಾಜಿಕ ಸಮಸ್ಯೆಗಳಿಗೂ ಕಾರಣವಾಗುತ್ತಿದೆ.

ಯಾಂತ್ರಿಕ ಬುದ್ಧಿಮತ್ತೆಯನ್ನು ವಾಣಿಜ್ಯ ಉಪಯೋಗಗಳಿಗೆ ಬಳಸಲು ಆರಂಭಿಸಿದ ದಿನಗಳಲ್ಲಿ ಎಂಟೋ ಹತ್ತೋ ವರ್ಚುವಲ್ ಅಸಿಸ್ಟೆಂಟ್ಸ್ (ನಿರಾಕಾರ ಸಹಾಯಕರು) ನಮಗೆ ಸಹಾಯ ಮಾಡುತ್ತಿದ್ದವು. ಈಗ ಅವುಗಳ ಸಂಖ್ಯೆಯು ಹಲವು ಲಕ್ಷ ದಾಟಿದೆ. ಮೊದಲು ಅವುಗಳಿಗೆ ಇಂಗ್ಲಿಷ್ ಭಾಷೆ ಮಾತ್ರ ಅರ್ಥವಾಗುತ್ತಿತ್ತು. ಈಗ ಜಗತ್ತಿನ ನೂರಾರು ಭಾಷೆಗಳಲ್ಲಿ ವ್ಯವಹರಿಸುವ ಕ್ಷಮತೆ ಪಡೆದಿವೆ. ಕನ್ನಡ, ತಮಿಳು, ತೆಲುಗು, ಮರಾಠಿ ಭಾಷೆಗಳಲ್ಲಿ ವ್ಯವಹರಿಸುವ ಯಾಂಬು ಮಾದರಿಗಳು ಮಾರುಕಟ್ಟೆಯಲ್ಲಿವೆ. ಅಲೆಕ್ಸಾ ಸಿರಿ, ಇವಾ, ಕಿಯಾ, ಕ್ಲಿಯಾಯ್ಸ್, ಕೋರ್ಟ್‌ನಾ, ಬಿಕ್ಸ್ ಬೈ, ಟೇ, ಎಲಿಜಾ, ವಾಟ್ಸನ್, ವಾಚಸ್ಪತಿಗಳು (ಚಾಟ್‌ಬಾಟ್) ಈಗಾಗಲೇ ನಮ್ಮ ನಿತ್ಯದ ಕೆಲಸಗಳಿಗೆ ನೆರವಾಗುತ್ತಿವೆ. ಸಾಧ್ಯವಾದಷ್ಟು ಸರಿ ಉತ್ತರ ನೀಡಿ ಸೈ ಎನಿಸಿಕೊಂಡು ಅಪಾರ ಜನಪ್ರಿಯತೆ ಪಡೆದಿವೆ. ತೀರಾ ಇತ್ತೀಚೆಗೆ ಮಾರುಕಟ್ಟೆಗೆ ಬಂದ ಯಾಂಬು ಗ್ರೋಕ್, ಭಾರತದಲ್ಲಿ ಬಹಳ ಬೇಗ ಜನಪ್ರಿಯವಾಗುತ್ತಿದೆ, ಅಷ್ಟೇ ವೇಗವಾಗಿ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದೆ.

ಯಾಂಬುವಿನಲ್ಲಿ ಪೂರ್ವಗ್ರಹ ಧೋರಣೆ ಪ್ರಕಟಗೊಳ್ಳಲು ಮೂರು ಮುಖ್ಯ ಕಾರಣಗಳಿವೆ. ದತ್ತಾಂಶ ತರಬೇತಿ (ಡೇಟಾ ಟ್ರೈನಿಂಗ್), ಕ್ರಮಾವಳಿ ರಚನೆ (ಅಲ್ಗೊರಿದಂ) ಮತ್ತು ಬಳಕೆದಾರನ ಪ್ರಶ್ನೆಯ ಕ್ರಮಗಳಲ್ಲಿರುವ ಧೋರಣೆಗಳನ್ನು ಆಧರಿಸಿ ಯಾಂಬು ಪೂರ್ವಗ್ರಹ ತೋರಿಸುತ್ತದೆ. ದತ್ತಾಂಶ ನೀಡುವವರು, ಕ್ರಮಾವಳಿ ರಚಿಸುವವರು, ಪ್ರಶ್ನೆ ಕೇಳುವವರು ಪೂರ್ವಗ್ರಹಪೀಡಿತರಾಗಿದ್ದರೆ ಅವರ ಧೋರಣೆಗಳು ಯಾಂಬು ನೀಡುವ ಉತ್ತರಗಳಲ್ಲಿ ಇದ್ದೇ ಇರುತ್ತವೆ. ಉದಾಹರಣೆಗೆ ಪ್ರತಿಮೆಯೊಂದನ್ನು ನಿರ್ಮಿಸುವ ಶಿಲ್ಪಿಯೇ ಪ್ರತಿಮೆಯ ಕೈ, ಕಾಲು, ಕಣ್ಣಿನ ದೃಷ್ಟಿ ರಚನೆಗಳನ್ನು ಸೂಕ್ಷ್ಮವಾಗಿ ಊನಗೊಳಿಸಿದ್ದರೆ ಕಲಾಕೃತಿಯು ಸುಂದರವಾಗಿ ಕಾಣಿಸುವುದಾದರೂ ಹೇಗೆ? ಯಾಂಬುವಿನ ವಿಷಯದಲ್ಲೂ ಹಾಗೆಯೇ ಆಗುತ್ತಿದೆ. ನಾವು ಈ ಮೊದಲೇ ಪೂರ್ವಗ್ರಹದಿಂದ ಕೂಡಿದ ಮಾಹಿತಿಯನ್ನು ಇಂಟರ್ನೆಟ್‌ನಲ್ಲಿ ಹಾಕಿದ್ದರೆ ಯಾಂಬು ನೀಡುವ ಉತ್ತರವು ಹಾಗೆಯೇ ಇರುತ್ತದಲ್ಲವೆ?

ಕೇಳುಗನ ನಿರ್ದೇಶನದಂತೆ ಕೆಲಸ ಮಾಡುವ ಯಾಂಬು, ಇಂಟರ್ನೆಟ್‌ನಲ್ಲಿ ಲಭ್ಯವಿರುವ ದತ್ತಾಂಶವನ್ನು ಬಳಸುತ್ತದೆ. ಜಗತ್ತಿಗೆ ಇಂಟರ್ನೆಟ್ ಕಾಲಿಟ್ಟು ಇನ್ನೂ 40 ವರ್ಷಗಳೂ ಆಗಿಲ್ಲ ಮತ್ತು ಅದರಲ್ಲಿ ಎಲ್ಲ ಮಾಹಿತಿಯು ದಾಖಲಾಗಿಲ್ಲ. ಇರುವ ಎಲ್ಲವೂ ನೂರಕ್ಕೆ ನೂರರಷ್ಟು ಸರಿ ಎನ್ನಲಾಗದು. ಅಲ್ಲಿರುವ ಪರಿಮಿತ ದತ್ತಾಂಶವನ್ನೇ ಆಧಾರವಾಗಿಟ್ಟುಕೊಂಡು ಕೆಲಸ ಮಾಡುವ ಯಾಂಬುವಿನ ಉತ್ತರಗಳು ಇಂಟರ್ನೆಟ್‌ನಲ್ಲಿರುವ ಮಾಹಿತಿಯನ್ನು ಪ್ರತಿಬಿಂಬಿಸುತ್ತವೆ. ಇಂಟರ್ನೆಟ್‌ನಲ್ಲಿ ಒಳ್ಳೆಯದು, ಕೆಟ್ಟದ್ದು, ತಪ್ಪು, ಸರಿ, ನೇರ, ವಕ್ರ, ನಿಷ್ಠುರ, ತಾರತಮ್ಯ, ಪಕ್ಷಪಾತಿತನ, ಸಭ್ಯ, ಅಸಭ್ಯ ಎಲ್ಲವೂ ಇವೆ. ಮಹಿಳೆಯರ, ದಮನಿತರ, ಕಪ್ಪುವರ್ಣದವರ, ಅಸಹಾಯಕರ ಕುರಿತು ನಾವು ನೀಡಿರುವ ದತ್ತಾಂಶವೇ ಪೂರ್ವಗ್ರಹಗಳಿಂದ ಕೂಡಿದ್ದರೆ ಯಾಂಬು ನೀಡುವ ನಿರ್ಣಯಗಳು ಸಹ ಅದೇ ತೆರನಾಗಿರುತ್ತವೆ. ಇಂಟರ್ನೆಟ್‌ಗೆ ಆ ಮಾಹಿತಿಯನ್ನು ನೀಡಿರುವವರು ನಾವೇ ಅಲ್ಲವೆ? ಆಗ ನಮ್ಮ ಪ್ರಶ್ನೆಗಳಿಗೆ ನಾವೇ ಶೇಖರಿಸಿಟ್ಟ ಉತ್ತರಗಳು ಸಿಗುತ್ತವೆ.

ಮುಖಚಹರೆ ಪತ್ತೆ ಮಾಡುವ ಯಾಂಬುಗೆ ನಾವು ಶ್ವೇತವರ್ಣದವರ ಚಿತ್ರಗಳನ್ನೇ ಹೆಚ್ಚಾಗಿ ತೋರಿಸಿ ತರಬೇತಿ ನೀಡಿದ್ದರೆ ಬೇರೆ ವರ್ಣದವರ ಚಿತ್ರಗಳನ್ನು ಅದು ಪ್ರಕಟಿಸುವುದೂ ಇಲ್ಲ, ರಚಿಸಿ ನೀಡುವುದೂ ಇಲ್ಲ. ಎಷ್ಟೋ ಸಲ ದತ್ತಾಂಶ ಸರಿ ಇದ್ದರೂ ಕೆಲವೊಮ್ಮೆ ಕ್ರಮಾವಳಿಯೇ ದೋಷಪೂರಿತವಾಗಿದ್ದು ಯಾಂಬು ಪ್ರಕಟಿಸುವ ಉತ್ತರಗಳು ಸರಿ ಇರುವುದಿಲ್ಲ. ಇನ್ನು ಯಾಂಬು ಬಳಸುವವರು ತಮ್ಮ ಚಿಂತನೆ, ಪಂಥಗಳಿಗೆ ಹೊಂದುವ ಪ್ರಶ್ನೆಗಳನ್ನು ಪದೇ ಪದೇ ಕೇಳಿ ಯಾಂಬುವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಾರೆ. ಪ್ರಶ್ನೆಗಳನ್ನು ಸ್ವೀಕರಿಸುವ ಯಾಂಬು ಸ್ವತಃ ಕಲಿತು ಉತ್ತರ ನೀಡುತ್ತದೆ. ಹೆಚ್ಚು ಹೆಚ್ಚು ದತ್ತಾಂಶ ದೊರಕಿದಂತೆಲ್ಲ ಯಾಂಬುವಿನ ಕಲಿಕೆಯೂ ಹೆಚ್ಚಾಗುತ್ತದೆ, ಉತ್ತರಗಳು ಸ್ಪಷ್ಟವಾಗಿರುತ್ತವೆ ಮತ್ತು ಸರಿಯಾಗಿಯೂ ಇರುತ್ತವೆ. ಉತ್ತರ ನೀಡುವ ಸಾಮರ್ಥ್ಯವು ಹೆಚ್ಚುತ್ತದೆ. ಉತ್ತರಗಳು ಸಾರ್ವತ್ರಿಕವೆನಿಸಿ ಪೂರ್ವಗ್ರಹ ಕಡಿಮೆಯಾಗುತ್ತದೆ. ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯೇ ತಾರತಮ್ಯಗಳಿಂದ ಕೂಡಿದೆ. ಅದೇ ದತ್ತಾಂಶ ಉಪಯೋಗಿಸಿ ಉತ್ತರಿಸುವ ಯಾಂಬು ಸಹಜವಾಗಿಯೇ ಪೂರ್ವಗ್ರಹ ತೋರುತ್ತದೆ. ತಪ್ಪು ಯಾಂಬುವಿನದ್ದಲ್ಲ, ದತ್ತಾಂಶವನ್ನು ನೀಡುವ ನಮ್ಮದು.

ಒಟ್ಟಿನಲ್ಲಿ ಯಾಂಬುವನ್ನು ದಾರಿ ತಪ್ಪಿಸುತ್ತಿರುವವರು ಇದರ ನಿರ್ಮಾತೃಗಳೇ. ಯಾಂಬು ಮಾದರಿ ನಿರ್ಮಿಸುವ ಎಂಜಿನಿಯರ್ ಗುರುವಿದ್ದಂತೆ, ಯಾಂಬು ಶಿಷ್ಯನಿದ್ದಂತೆ. ಗುರು ಶಿಷ್ಯನಿಗೆ ಯಾವುದು ಸರಿ, ಯಾವುದು ತಪ್ಪು, ಯಾವುದು ಮಾನ್ಯ, ಯಾವುದು ವರ್ಜ್ಯ ಎಂಬುದನ್ನು ನಿಖರವಾಗಿ ಹೇಳಿಕೊಡಬೇಕಲ್ಲವೇ? ಅದು ಗುರುವಿನ ಜವಾಬ್ದಾರಿಯೂ ಹೌದು. ಎಷ್ಟೇ ಸರಿಯಾಗಿ ಕಲಿಸಿದ್ದರೂ ಕೆಲವು ಶಿಷ್ಯರು ಅತಿಬುದ್ಧಿವಂತಿಕೆ ತೋರಿಸಿ ತಪ್ಪು ಮಾಡುತ್ತಾರೆ. ಅವರನ್ನು ತಿದ್ದಬೇಕು ಮತ್ತು ನಿಯಂತ್ರಿಸಬೇಕು.

ಚುರುಮುರಿ

ಜಿಬ್ಲಿ ಗಲಿಬಿಲಿ!

• ಗುರು ಪಿ.ಎಸ್.

'ಬನ್ರೀ ಇಲ್ಲಿ, ನೀವು ಹೋದ ವಾರ ನನಗೆ ಗ್ರಾಕ್ ಬಗ್ಗೆ ಹೇಳಿದ್ರಲ್ಲ, ನಾನು ಈ ವಾರ ನಿಮಗೆ ಹೊಸ ಆ್ಯಪ್ ಬಗ್ಗೆ ಹೇಳ್ತೀನಿ' ಮೊಬೈಲ್ ಫೋನ್ ನೋಡುತ್ತಾ ನನ್ನ ಕರೆದಳು ಹೆಂಡತಿ.

'ಯಾವ ಆ್ಯಪ್ ಮಾರಾಯ್ತಿ ಅದು' ಎನ್ನುತ್ತಾ ಹತ್ತಿರ ಹೋದೆ.

'ನೋಡ್ರಿ ಇದು ಜಿಬ್ಲಿ ಅಂತ. ನಮ್ಮ ಯಾವುದೇ ಫೋಟೊ ಇದರಲ್ಲಿ ಹಾಕಿದ್ರೆ, ಅದನ್ನ ನಮ್ಮ ಪೇಂಟಿಂಗ್ ಫೋಟೊ ಥರ ಅಥವಾ ಆ್ಯನಿಮೇಟ್ ರೀತಿ ಮಾಡಿಕೊಡುತ್ತೆ ರೀ' ಖುಷಿಯಿಂದ ಹೇಳಿದಳು.

'ಜಿಬ್ಲಿನೊ, ಗಿಬ್ಲಿನೋ' ವ್ಯಂಗ್ಯವಾಗಿ ಕೇಳಿದೆ.

'ಯಾವುದೋ ಒಂದು ಲಿ, ಸುಮ್ನೆ ಗಲಿಬಿಲಿ ಮಾಡಿಕೊಳ್ಳದೆ ಕೇಳ್ರಿ ಇಲ್ಲಿ, ಒಮ್ಮೊಮ್ಮೆ ನಮ್ಮ ಮೂಲ ಫೋಟೊದಲ್ಲಿ ಇರೋದು, ಇಲ್ಲದಿರೋದನ್ನೆಲ್ಲ ಸೇರಿಸಿ ಬಿಡುತ್ತೆ ರೀ, ಮಜವಾಗಿದೆ ಇದು'.

'ಹೌದಾ! ಇತ್ತೀಚೆಗೆ ನಮ್ಮ ಕಮಲ ಪಕ್ಷದಿಂದ ಹೊರಹೋದ ಲೀಡರ್ ಫೋಟೊ ಹಾಕಿ ನೋಡು ಏನ್ ಬರುತ್ತೆ ನೋಡೋಣ...'

ಫೋಟೊ ಅಪ್‌ಲೋಡ್ ಮಾಡಿದ ಹೆಂಡತಿ, 'ಇದೇನ್ರೀ ಇದು! ಮೂಲ ಫೋಟೊದಲ್ಲಿ ಅವರ ಸುತ್ತ ಜೆಸಿಬಿಗಳು ನಿಂತಿದ್ದವು, ಈ ಜಿಬ್ಲಿಯಲ್ಲಿ ನೋಡಿದ್ರೆ ಅವರೇ ಜೆಸಿಬಿ ಕೆಳಗೆ ನಿಂತಿರೋ ಥರ ತೋರಿಸ್ತಿದೆಯಲ್ಲರೀ...'

'ನಿನ್ನ ಫೋಟೊ ಹಾಕು, ಹೇಗ್ ತೋರಿಸುತ್ತೆ ನೋಡೋಣ' ಎಂದೆ.

ಹೆಂಡತಿಯ ಜಿಬ್ಲಿ ಫೋಟೊ ಬಂತು. 'ಇದೇನೇ ನಿನ್ನನ್ನ ಇಷ್ಟು ಸಿಂಪಲ್ ಆಗಿ ತೋರಿಸ್ತಿದೆ, ದಿನಕ್ಕೆ ಮೂರು ಡ್ರೆಸ್ ಚೇಂಜ್ ಮಾಡೋ ನೀನೇ, ಒಮ್ಮೆ ತೊಟ್ಟ ಬಟ್ಟೆ ಮತ್ತೊಮ್ಮೆ ತೊಡದಿರುವ ಬಗ್ಗೆ ಅಸಮಾಧಾನಗೊಂಡಂತೆ ಆಯ್ತು ಇದು' ಎಂದು ನಕ್ಕೆ.

'ಇರಿ, ನೀವು ಕೈತುಂಬಾ ದುಡ್ಡು ಹಿಡ್ಕೊಂಡಿರೊ ಫೋಟೊ ಹಾಕಿ ನೋಡ್ತೀನಿ' ಅಂದಳು ಹೆಂಡತಿ.

ನನ್ನ ಜಿಬ್ಲಿ ಫೋಟೊ ಬಂತು. ಕೈಯಲ್ಲಿ ದುಡ್ಡಿನ ಬದಲು ಒಂದು ಲೀಟರ್ ಹಾಲಿನ ಪ್ಯಾಕೆಟ್, ಅರ್ಧ ಲೀಟರಿನ ಡೀಸೆಲ್ ಬಾಟಲ್ ಇತ್ತು!

ಸಂಗತ

ಬೆಲೆ ಏರಿಕೆ ಮತ್ತು ಪರ್ಯಾಯ ಮಾರ್ಗ!

ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬೇಗೆಯಿಂದ ತಪ್ಪಿಸಿಕೊಳ್ಳಲು ಲಭ್ಯವಿರುವ ಮಾರ್ಗಗಳನ್ನು ಜಾಣ್ಮೆಯಿಂದ ಹುಡುಕಬೇಕಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಮುಂಜಾನೆ ವಾಕಿಂಗ್‌ಗೆ ಹೋದಾಗ ಭೇಟಿಯಾದ ಸ್ನೇಹಿತರೊಬ್ಬರು ನಂದಿನಿ ಹಾಲು, ಮೊಸರಿನ ಬೆಲೆ ಪ್ರತಿ ಲೀಟರ್‌ಗೆ ₹ 4 ಹೆಚ್ಚಿಗೆ ಆಗಿರುವ ವಿಷಯ ಪ್ರಸ್ತಾಪಿಸಿ ಬೇಸರ ವ್ಯಕ್ತಪಡಿಸಿದರು. 'ಹಾಲಿನ ಬೆಲೆ ಏರಿಕೆಯ ಬಿಸಿ ನಮಗೆ ತಟ್ಟಿಲ್ಲ' ಎಂದು ಹೇಳಿದಾಗ ಚಕಿತಗೊಂಡ ಅವರು, 'ಹೌದೇ, ಅದು ಹೇಗೆ ಸಾಧ್ಯ?' ಎಂದು ಕೇಳಿದರು.

'ನಮ್ಮ ಬಡಾವಣೆಗೆ ಸಮೀಪದ ಹಳ್ಳಿಗಳಿಂದ ಕೃಷಿ ಮಹಿಳೆಯರು ನಿತ್ಯ ಮುಂಜಾನೆ ಬಂದು ಹಾಲು, ಮೊಸರು, ಹಣ್ಣು, ತರಕಾರಿ ಮಾರುತ್ತಾರೆ. ಮನೆಗಳ ಬಳಿಗೇ ತಂದು ಕೊಡುತ್ತಾರೆ. ತಾಜಾ ಇರುತ್ತವೆ. ಮಾರುಕಟ್ಟೆಯ ಬೆಲೆಗೆ ಹೋಲಿಸಿದರೆ ಬೆಲೆ ಕೂಡ ಕಡಿಮೆ. ನಾವು ಇವರ ಬಳಿಯೇ ಹಾಲು, ಮೊಸರು, ತರಕಾರಿ ಖರೀದಿಸುತ್ತೇವೆ' ಎಂದು ಹೇಳಿದೆ.

ನನ್ನ ಮಾತು ಅವರಿಗೆ ಇಷ್ಟವಾಯಿತು. 'ಕೃಷಿ ಮಹಿಳೆಯರು ನಮ್ಮ ಬಡಾವಣೆಗೂ ಹಣ್ಣು– ತರಕಾರಿ ತರುತ್ತಾರೆ. ಆದರೆ ನಾನು ಈ ಕಡೆ ಗಮನವನ್ನೇ ಕೊಟ್ಟಿರಲಿಲ್ಲ. ಇನ್ನು ಮುಂದೆ ನಾವೂ ಅವರ ಬಳಿಯೇ ಖರೀದಿಸುತ್ತೇವೆ...' ಎಂದು ಸ್ನೇಹಿತ ನಗುತ್ತ ಹೇಳಿದರು.

ಕೃಷಿ ಮಹಿಳೆಯರು ಹಾಲು, ಮೊಸರು, ಬೆಣ್ಣೆ ಹಾಗೂ ತಮ್ಮ ಹೊಲ–ಗದ್ದೆಗಳಲ್ಲಿ ಬೆಳೆದ ಹಣ್ಣು–ತರಕಾರಿಯನ್ನು ಒಳಗೊಂಡ ಆಹಾರ ಸಾಮಗ್ರಿಯನ್ನು ಮಾರಾಟ ಮಾಡಲು ನಗರ ಹಾಗೂ ಪಟ್ಟಣಗಳಿಗೆ ಬರುತ್ತಾರೆ. ಉಚಿತ ಬಸ್ ಸೌಲಭ್ಯ ಇರುವುದರಿಂದ ಈಚೆಗೆ ಹೆಚ್ಚು ಹೆಚ್ಚು ಕೃಷಿ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಮಾರಲು ಬರುತ್ತಿದ್ದಾರೆ. ಇವರ ಬಳಿ ಖರೀದಿಸುವುದರಿಂದ ಹಣದ ಉಳಿತಾಯದ ಜತೆಗೆ, ಗುಣಮಟ್ಟದ ಆಹಾರ ವಸ್ತುಗಳನ್ನು ಪಡೆಯಬಹುದು. ಬೆಲೆ ಏರಿಕೆಯ ಭೂತವನ್ನು ಎದುರಿಸಲು ಸೂಕ್ತ ಪರ್ಯಾಯ ಮಾರ್ಗ ಹುಡುಕಿಕೊಳ್ಳಬೇಕು. ಇದು ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಸರಳ ವಿಧಾನ.

ಈಚಿಗೆ ಬೆಂಗಳೂರಿನಲ್ಲಿ 'ನಮ್ಮ ಮೆಟ್ರೊ' ಪ್ರಯಾಣ ದರವನ್ನು ವಿಪರೀತ ಎನ್ನುವ ಮಟ್ಟಿಗೆ ಹೆಚ್ಚಿಸಲಾಯಿತು. ಆಗ ಅನೇಕ ಮಹಿಳೆಯರು ಮೆಟ್ರೊ ಬಿಟ್ಟು, ಉಚಿತ ಬಸ್ ಪ್ರಯಾಣ ಆಯ್ಕೆ ಮಾಡಿಕೊಂಡರು. ಕೆಲವರು ಸ್ಕೂಟರ್ ಬಳಸತೊಡಗಿದರು ಎಂಬುದು ವರದಿಯಾಗಿತ್ತು. ಅಷ್ಟರಮಟ್ಟಿಗೆ ನಾವು ಜಾಣತನವನ್ನು ರೂಢಿಸಿಕೊಳ್ಳದಿದ್ದರೆ ಈಗಿನ ದಿನಮಾನದಲ್ಲಿ ಬದುಕು ನಡೆಸುವುದು ಕಷ್ಟವಾಗುತ್ತದೆ.

ಈ ಹಿಂದೆ ಟೊಮೆಟೊ ಬೆಲೆ ಗಗನಕ್ಕೇರಿದಾಗ ಅಡುಗೆಗೆ ಅದನ್ನು ಬಿಟ್ಟು ಹುಣಿಸೆಹಣ್ಣು ಬಳಸುವ ವಿಧಾನವನ್ನು ಮಹಿಳೆಯರು ಆಯ್ಕೆ ಮಾಡಿಕೊಂಡಿದ್ದರು. ಹುಣಿಸೆಹಣ್ಣು ಹೆಚ್ಚು ರುಚಿಕರ. ಜತೆಗೆ, ಆರೋಗ್ಯಕ್ಕೂ ಒಳ್ಳೆಯದು. ಹಿಂದೆ ನಮ್ಮ ಮನೆಯಲ್ಲಿ ಚಹಾ ಪುಡಿ ಇಲ್ಲದಾಗ ಅಮ್ಮ ಲಿಂಬೆ ಗಿಡದ ಎಲೆಗಳನ್ನು ಬಳಸಿ ಚಹಾ ಮಾಡುತ್ತಿದ್ದರು.

ಕೃಷಿ ಮಹಿಳೆಯರು ತಮ್ಮ ಉತ್ಪನ್ನಗಳನ್ನು ನಗರಗಳಲ್ಲಿ ಮಾರಾಟ ಮಾಡುವುದರಿಂದ ಅವರ ಕೈಗೆ ಹಣ ಬರುತ್ತದೆ. ಅವರ ಕೌಟುಂಬಿಕ ಉನ್ನತಿಗೂ ನೆರವಾಗುತ್ತದೆ. 'ಮಹಿಳೆಯ ಬಳಿ ಸದಾಕಾಲ ಸ್ವಲ್ಪವಾದರೂ ಸ್ವಂತದ ಹಣ ಇರುವುದು ಆಕೆಯ ಸುರಕ್ಷತೆಯ ಮೊದಲು ಹೆಜ್ಜೆ ಆಗಿದೆ' ಎಂದು ಅಮೆರಿಕದ ಲೇಖಕಿ ಕ್ಲೇರ್ ಬೂತ್ ಲುಸೆ ಹೇಳುವ ಮಾತು ವಾಸ್ತವದಿಂದ ಕೂಡಿದೆ.

ಆನ್‌ಲೈನ್ ವ್ಯಾಪಾರ ಈಗ ಜೋರು ಪಡೆದಿದೆ. ಇದು ಆಕರ್ಷಕವಾಗಿಯೂ ಕಾಣುತ್ತದೆ. ಮಾಲ್‌ಗಳಲ್ಲಿ ವಸ್ತುಗಳನ್ನು ಖರೀದಿಸುವುದು ಪ್ರತಿಷ್ಠೆಯಾಗಿದೆ. ಆದರೆ ಕೃಷಿಕರಿಂದ ನೇರವಾಗಿ ಖರೀದಿಸಿದರೆ ಅದು ಶ್ರಮದ ಸಂಸ್ಕೃತಿಯನ್ನು ಗೌರವಿಸಿದಂತೆ ಆಗುತ್ತದೆ. ಆಹಾರ ಪದಾರ್ಥಗಳ ತಾಜಾತನವನ್ನು ಪರಿಶೀಲಿಸಲು, ಬೆಲೆ ಚೌಕಾಸಿ ಮಾಡಲು, ಅಗತ್ಯವಿದ್ದಷ್ಟು ಮಾತ್ರ ಖರೀದಿಸಲು ಇಲ್ಲಿ ಮುಕ್ತ ಅವಕಾಶ ಇರುತ್ತದೆ. ಆದರೆ, ಆನ್‌ಲೈನ್ ವ್ಯಾಪಾರದಲ್ಲಿ ಇದು ಆಗದು.

ಬಾಗಲಕೋಟೆ– ಬೆಳಗಾವಿ ಹೆದ್ದಾರಿಯ ಬದಿಗೆ ಕಲಾದಗಿ ಎಂಬ ಗ್ರಾಮ ಇದೆ. ಇಲ್ಲಿ ಗುಣಮಟ್ಟದ ಸಪೋಟ, ದಾಳಿಂಬೆ, ಪೇರಲ, ಪಪ್ಪಾಯಿ ಹೇರಳವಾಗಿ ಬೆಳೆಯುತ್ತಾರೆ. ಕೃಷಿ ಮಹಿಳೆಯರು ತಾವು ಬೆಳೆದ ಹಣ್ಣುಗಳನ್ನು ಹೆದ್ದಾರಿಯ ಬದಿಗೆ ಕುಳಿತು ಮಾರುತ್ತಾರೆ. ಇವರೆಲ್ಲ ರಸ್ತೆ ಬದಿಯಲ್ಲಿ ಇರುವ ತಮ್ಮ ತೋಟ, ಹಣ್ಣಿನ ಗಿಡಗಳನ್ನು ಹೆಮ್ಮೆಯಿಂದ ತೋರಿಸುತ್ತಾರೆ. ಬಯಸಿದರೆ ಗಿಡಗಳಲ್ಲಿಯೇ ಪಕ್ವವಾದ ಹಣ್ಣು ತಂದುಕೊಡುತ್ತಾರೆ. ಇಂಥ ಹಣ್ಣುಗಳನ್ನು ಸವಿಯುವುದು ಖುಷಿಯ ಸಂಗತಿ.

ಹುಬ್ಬಳ್ಳಿ ನಗರದ ಹಳೇ ಹುಬ್ಬಳ್ಳಿಯಲ್ಲಿ 'ಮೊಸರಿನ ಪೇಟೆ' ಎಂಬ ಸಣ್ಣ ಪ್ರದೇಶ ಇದೆ. ಬಹಳ ವರ್ಷಗಳ ಹಿಂದೆ ಹಳ್ಳಿಗಳ ಮಹಿಳೆಯರು ಇಲ್ಲಿ ಕುಳಿತು ಮೊಸರು ಮಾರುತ್ತಿದ್ದರು. ಈಗ ಹೆಸರು ಮಾತ್ರ ಉಳಿದಿದೆ. ಮೊಸರು ಮಾರುವವರು ಬರುತ್ತಿಲ್ಲ. ಈ ಸೊಬಗು ಮತ್ತೆ ಮೂಡಿ ಬರುವಂತೆ ಅಲ್ಲಿನ ಜನ ಪ್ರಯತ್ನಿಸಬೇಕು.

ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಬನಶಂಕರಿ ದೇವಸ್ಥಾನಕ್ಕೆ ದೊಡ್ಡ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಸಮೀಪದ ಗ್ರಾಮಗಳ ಕೃಷಿ ಮಹಿಳೆಯರು ಸಜ್ಜೆ ರೊಟ್ಟಿ, ಶೇಂಗಾ ಚಟ್ನಿ, ಬೆಳ್ಳುಳ್ಳಿ ಖಾರ ಮತ್ತು ಮೊಸರನ್ನು ಬುಟ್ಟಿಗಳಲ್ಲಿ ತಂದು ಪ್ರವಾಸಿಗರಿಗೆ ಉಣಬಡಿಸುತ್ತಾರೆ. ಅಗಸ್ತ್ಯತೀರ್ಥ ಕೆರೆಯ ಕಟ್ಟೆಯ ಸುತ್ತಲೂ ಕುಳಿತು ಪ್ರವಾಸಿಗರು ಊಟ ಸವಿಯುತ್ತಾರೆ. ಕಡಿಮೆ ಹಣದಲ್ಲಿ ರುಚಿಕಟ್ಟಾದ ಪೌಷ್ಟಿಕ ಊಟ ದೊರೆಯುತ್ತದೆ. ಉಳಿದ ದೇವಸ್ಥಾನ ಮತ್ತು ಪ್ರವಾಸಿ ತಾಣಗಳಲ್ಲಿಯೂ ಇಂಥ ಊಟ ಪೂರೈಸುವ ಯೋಜನೆ ರೂಪಿಸಬೇಕು.

ಬೆಲೆ ಏರಿಕೆ, ಕಲಬೆರಕೆ, ಪ್ಲಾಸ್ಟಿಕ್ ಹಾವಳಿಯಿಂದ ಪಾರಾಗುವುದಕ್ಕೆ ಹಲವು ಮಾರ್ಗಗಳಿವೆ. ಅಂಥ ಮಾರ್ಗಗಳನ್ನು ಜಾಣ್ಮೆಯಿಂದ ಆಯ್ಕೆ ಮಾಡಿಕೊಂಡು ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು.

ವಾಚಕರ ವಾಣಿ

ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಕೈಜೋಡಿಸೋಣ

ಸರ್ಕಾರಿ ಶಾಲೆಗೆ ಸ್ವಂತ ಖರ್ಚಿನಲ್ಲಿ ಕೊಳವೆಬಾವಿ ಕೊರೆಯಿಸಿದ ಶಿಕ್ಷಕಿಯರಿಗೆ ಸಂಬಂಧಿಸಿದ ಸುದ್ದಿ (ಪ್ರ.ವಾ., ಏ.2) ಓದಿ ಖುಷಿಯಾಯಿತು. ಸರ್ಕಾರಿ ಶಾಲೆ ಎಂದರೆ ಎಲ್ಲದಕ್ಕೂ ಸರ್ಕಾರವೇ ಹೊಣೆ ಹೊರಲಿ ಎಂದು ಉದಾಸೀನ ತೋರುವವರೇ ಹೆಚ್ಚು. ಅಂತಹದರಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ನೀರಿನ ಅಭಾವ ಉಂಟಾದಾಗ ಸರ್ಕಾರದ ನೆರವಿಗೆ ಕಾಯದೆ ತಮ್ಮ ಸ್ವಂತ ಹಣದಿಂದ (₹2.50 ಲಕ್ಷ) ಕೊಳವೆಬಾವಿ ಕೊರೆಯಿಸಿ ಮಕ್ಕಳ ನೀರಿನ ದಾಹ ತಣಿಸಿದ ಚಿಕ್ಕಮಗಳೂರು ಜಿಲ್ಲೆಯ ಮಾಚಗೊಂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಶಿಕ್ಷಕಿಯರ ಕಾರ್ಯ ಪ್ರಶಂಸಾರ್ಹ. ಮಕ್ಕಳ ಭವಿಷ್ಯಕ್ಕಾಗಿ ಚಿಂತಿಸುವ ಇಂತಹ ಶಿಕ್ಷಕರು ಸಿಗುವುದು ಬಹಳ ಅಪರೂಪ. ಇವರಿಬ್ಬರ ನಡೆ ಎಲ್ಲರಿಗೂ ಮಾದರಿ.

ಸರ್ಕಾರಿ ಶಾಲೆಗಳು ಭಾರತದ ಶೈಕ್ಷಣಿಕ ವ್ಯವಸ್ಥೆಯ ಆತ್ಮ ಇದ್ದಂತೆ. ಆರ್ಥಿಕವಾಗಿ ಹೆಚ್ಚು ಚೈತನ್ಯ ಹೊಂದಿಲ್ಲದ ಕುಟುಂಬಗಳ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಈ ಶಾಲೆಗಳ ಪಾತ್ರ ಅಮೂಲ್ಯ. ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳು ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿವೆ. ಕುಡಿಯುವ ನೀರು, ಶೌಚಾಲಯದಂತಹ ಕನಿಷ್ಠ ಸೌಲಭ್ಯ ಒದಗಿಸುವುದಕ್ಕೂ ನಮಗಿನ್ನೂ ಸಾಧ್ಯವಾಗಿಲ್ಲ. ಇಷ್ಟಕ್ಕೂ ಸರ್ಕಾರಿ ಶಾಲಾ ಸಮಸ್ಯೆಗಳನ್ನು ಸರ್ಕಾರವೇ ನಿವಾರಣೆ ಮಾಡಲಿ ಎಂಬ ಧೋರಣೆ ಸರಿಯಲ್ಲ. ನಮ್ಮ ಸರ್ಕಾರಿ ಶಾಲಾ ಮಕ್ಕಳ ಬಗ್ಗೆ ಕಾಳಜಿ ವಹಿಸಿ ಈ ಶಾಲೆಗಳ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರೂ ಸರ್ಕಾರದೊಂದಿಗೆ ಕೈಜೋಡಿಸುವುದು ಅಗತ್ಯ. ಹೀಗಾದಾಗ ಸರ್ಕಾರಿ ಶಾಲೆಗಳ ಸಬಲೀಕರಣ ಸಾಧ್ಯವಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ವೃದ್ಧಿಸುತ್ತದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ದರ ಏರಿಕೆ: ತರ್ಕಕ್ಕೆ ನಿಲುಕದು

ಬೆಂಗಳೂರಿನಲ್ಲಿ ಕಾಫಿ, ಚಹಾ ದರ ವಿಷಯ ಅರ್ಥವೇ ಆಗುವುದಿಲ್ಲ. ಸರ್ಕಾರವು ಈ ತಿಂಗಳ ಒಂದರಿಂದ ಅನ್ವಯ ಆಗುವಂತೆ ನಂದಿನಿ ಹಾಲಿನ ಬೆಲೆಯನ್ನು ಲೀಟರ್‌ಗೆ ₹ 4 ಹೆಚ್ಚು ಮಾಡಿದೆ. ಆದರೆ ಕೆಲವು ಹೋಟೆಲ್ ಮತ್ತು ಅಂಗಡಿಗಳು ಒಂದು ಕಪ್ ಚಹಾ ಬೆಲೆಯನ್ನು ಮೂರು ರೂಪಾಯಿ ಹೆಚ್ಚು ಮಾಡಿರುವುದು ಆಶ್ಚರ್ಯವನ್ನು ಉಂಟುಮಾಡುತ್ತಿದೆ. ಒಂದು ಲೀಟರ್ ಹಾಲಿನಲ್ಲಿ ಕನಿಷ್ಠ ಅಂದರೂ 10 ಕಪ್ ಚಹಾ ಮಾಡುವ ಹೋಟೆಲ್‌ಗಳು ಯಾವ ಲೆಕ್ಕಾಚಾರದಲ್ಲಿ ಒಂದು ಕಪ್ ಚಹಾಕ್ಕೆ ಮೂರು ರೂಪಾಯಿ ಹೆಚ್ಚು ಮಾಡಿದವು ಎಂಬುದು ಅರ್ಥವೇ ಆಗುತ್ತಿಲ್ಲ. ನಂದಿನಿ ಹಾಲಿನ ದರ ಏರಿಕೆ ಮಾಡಿರುವುದು ರೈತರಿಗೆ ಒಂದಷ್ಟು ಲಾಭವಾಗಲಿ ಎಂದು. ಆದರೆ ರೈತರಿಗೆ ಲಾಭ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಹೋಟೆಲ್ ಹಾಗೂ ಅಂಗಡಿಗಳು ಅತಿಹೆಚ್ಚು ಲಾಭವನ್ನು ಪಡೆಯುತ್ತಿವೆ. ಇದು ಒಂದು ಬಗೆಯ 'ಹಗಲು ದರೋಡೆ'.

ಆರ್. ರಾಜೇಶ್, ಬೆಂಗಳೂರು

ಐ.ಟಿ. ಉದ್ಯಮವೆಂಬ ಬ್ರಹ್ಮರಾಕ್ಷಸ!

'ನಿತ್ರಾಣಗೊಂಡ ಟೆಕಿಗಳು' (ಪ್ರ.ವಾ., ಏ.1) ಎಂಬ ಶೀರ್ಷಿಕೆಯ ಸಮೀಕ್ಷಾ ವರದಿ ಓದಿದ ಮೇಲೆ ಗಾಬರಿ ಉಂಟಾಯಿತು. ಐ.ಟಿ. ಕ್ಷೇತ್ರ ಬ್ರಹ್ಮರಾಕ್ಷಸ ಇದ್ದಹಾಗೆ, ಅದು ಟೆಕಿಗಳ ರಕ್ತವನ್ನು ಹೀರುತ್ತಿದೆಯೇ? ಹೌದು ಎನ್ನುತ್ತಿದೆ ಈ ಸಮೀಕ್ಷೆ. ಅಧಿಕ ಕೆಲಸದ ಅವಧಿಯಿಂದಾಗಿ ಶೇಕಡ 83ರಷ್ಟು ಟೆಕಿಗಳು ನಿತ್ರಾಣಗೊಳ್ಳುತ್ತಿದ್ದಾರೆ ಎಂಬ ಅಂಶ ದಿಗಿಲು ಮೂಡಿಸುವಂತಹದು. ಯಾವುದೇ ಕ್ಷೇತ್ರದಲ್ಲಿ ನೌಕರರನ್ನು ಗಾಣದೆತ್ತುಗಳಂತೆ ದುಡಿಸಿಕೊಳ್ಳುವುದು ಸರಿಯಲ್ಲ. ತೀವ್ರ ಒತ್ತಡವು ಮನಸ್ಸಿನ ನೆಮ್ಮದಿ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆಡಳಿತ ಮಂಡಳಿಗಳು ಈ ಅಂಶಗಳತ್ತ ಗಮನ ಹರಿಸಬೇಕು.

ಎಚ್.ಎಸ್. ಸನತ್ ಕುಮಾರ್, ಚಂದಾಪುರ

ಸುಸ್ಥಿರ ಅಭಿವೃದ್ಧಿ ಚಿಂತನೆಗೆ ಸಿಗಲಿ ಮನ್ನಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡ ಕೃಷಿ ಜಮೀನುಗಳು ಬಳಕೆಯಾಗದೆ ಉಳಿದಿರುವುದು ಮತ್ತು ಇಲ್ಲಿ ಅಭಿವೃದ್ಧಿ ಎಂಬುದು ಕೇವಲ ನೆಪವಷ್ಟೆ ಎಂಬುದು 'ಅನ್ನದ ಬಟ್ಟಲಿಗೆ ಕನ್ನ' ಎಂಬ ಶೀರ್ಷಿಕೆಯಡಿ (ಒಳನೋಟ, ಪ್ರ.ವಾ., ಮಾರ್ಚ್ 30) ಪ್ರಕಟವಾದ ವರದಿಯಿಂದ ಮನವರಿಕೆ ಆಗುತ್ತದೆ. ಮನುಷ್ಯನನ್ನೂ ಒಳಗೊಂಡಂತೆ ಇಡೀ ಜೀವವೈವಿಧ್ಯ ಪರಸ್ಪರ ಅವಲಂಬಿತವಾಗಿದೆ. ಆದರೆ, ಮನುಷ್ಯ ಕೇಂದ್ರಿತ ಅಭಿವೃದ್ಧಿಯಲ್ಲಿ ಇಡೀ ಜೀವಜಗತ್ತು ಅಪಾಯದ ಅಂಚು ತಲುಪಿದೆ. ಕೈಗಾರಿಕೀಕರಣ, ನಗರೀಕರಣದ ಪರಿಣಾಮವಾಗಿ ಉಂಟಾಗುತ್ತಿರುವ ಪರಿಸರ ಮಾಲಿನ್ಯ ಹಾಗೂ ಇದರ ನೇರ ಪರಿಣಾಮ ಜನರ ಆರೋಗ್ಯದ ಮೇಲಾಗುತ್ತಿದ್ದರೂ ಅಧಿಕಾರಸ್ಥರು ಪರಿಸರ ಸಂರಕ್ಷಣೆಗೆ ಪೂರಕವಾಗಿ ಸ್ಪಂದಿಸುತ್ತಿಲ್ಲ.

ಭೂಸ್ವಾಧೀನದ ಪರಿಣಾಮವಾಗಿ ಕೃಷಿ ಚಟುವಟಿಕೆಗಳು ಕುಸಿಯುತ್ತಿವೆ. ಹಸಿರು, ಗಾಳಿ ಹಾಗೂ ಜಲಮೂಲಗಳು ಸರಿಪಡಿಸಲಾರದಷ್ಟು ಊನಗೊಂಡಿವೆ. ನಿಸರ್ಗ ಸಂರಕ್ಷಣೆಯನ್ನೂ ಒಳಗೊಂಡ ಸುಸ್ಥಿರ ಅಭಿವೃದ್ಧಿ ಚಿಂತನೆಗಳು ಮುನ್ನೆಲೆಗೆ ಬರಬೇಕು. ಸರ್ಕಾರವು ಅವುಗಳನ್ನು ಅಳವಡಿಸಿಕೊಳ್ಳಬೇಕು.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ವಯಸ್ಸಿನ ಗೊಂದಲ ನಿವಾರಿಸಿ

ರಾಜ್ಯದಲ್ಲಿ 2025–26ನೇ ಸಾಲಿನ ಪ್ರಾಥಮಿಕ ಶಾಲಾ ಪ್ರವೇಶ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಆದರೆ ಒಂದನೇ ತರಗತಿಯ ಮಕ್ಕಳ ದಾಖಲಾತಿ ವಯಸ್ಸಿನ ಗೊಂದಲವು ಪಾಲಕರು ಹಾಗೂ ಶಾಲೆಯವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. 6 ವರ್ಷ ಕಡ್ಡಾಯ ಎಂಬ ನಿಯಮದಿಂದಾಗಿ ಕೆಲ ಮಕ್ಕಳು ಪುನಃ ಒಂದು ವರ್ಷ ಯುಕೆಜಿಯಲ್ಲಿ ಶಿಕ್ಷಣ ಪಡೆಯಬೇಕಾಗುತ್ತದೆ. ಈ ಬಗ್ಗೆ ಸರ್ಕಾರದಿಂದ ಈವರೆಗೂ ಸ್ಪಷ್ಟವಾದ ನಿಲುವು ಹೊರಬಿದ್ದಿಲ್ಲ.

ಇಂತಹ ಗೊಂದಲಕ್ಕೆ ಇನ್ನೊಂದು ಪ್ರಮುಖ ಕಾರಣ ಸ್ಯಾಟ್ಸ್ ತಂತ್ರಾಂಶ. ಬಾಲವಿಹಾರ, ಎಲ್‌ಕೆಜಿ, ಯುಕೆಜಿ ದಾಖಲಾತಿ ಪಡೆದ ಮಕ್ಕಳ ವಿವರವನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸಬೇಕೆಂಬ ನಿಯಮ ಇಲ್ಲದ ಕಾರಣದಿಂದಾಗಿ ಬಹುತೇಕ ಶಾಲೆಗಳು ವಯಸ್ಸಿನ ಕಡ್ಡಾಯ ಮಿತಿಯ ವಿಷಯದಲ್ಲಿ ಪಾಲಕರಿಗೆ ತಪ್ಪು ಮಾಹಿತಿ ನೀಡಿ ದಾಖಲಾತಿ ಮಾಡಿಸಿಕೊಳ್ಳುತ್ತಿವೆ. ಒಂದು ವೇಳೆ ಯುಕೆಜಿಯಲ್ಲಿ ಸ್ಯಾಟ್ಸ್ ದಾಖಲಾತಿ ಆಗಿದ್ದರೂ ಒಂದನೇ ತರಗತಿಯಲ್ಲಿ ಹೊಸದಾಗಿ ಸ್ಯಾಟ್ಸ್ ಸಂಖ್ಯೆ ಸೃಷ್ಟಿಸಲು ಅವಕಾಶ ಇದೆ. ಇನ್ನಾದರೂ ಸರ್ಕಾರ ಇಂತಹ ತೊಂದರೆಗಳ ನಿವಾರಣೆಯತ್ತ ಗಮನಹರಿಸಲಿ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಖಾಸಗಿ ತೆಕ್ಕೆಗೆ ಮತ್ತಷ್ಟು ವಿಮಾನ ನಿಲ್ದಾಣಗಳು

ಹುಬ್ಬಳ್ಳಿ ವಿಮಾನ ನಿಲ್ದಾಣ ಸೇರಿದಂತೆ 11 ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ವಹಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಮೂಲಕ ವಿಮಾನ ನಿಲ್ದಾಣಗಳ ಖಾಸಗೀಕರಣ ಪ್ರಕ್ರಿಯೆಯ ಮೂರನೇ ಹಂತವನ್ನು ಕಾರ್ಯಗತಗೊಳಿಸಲು ಹೊರಟಿದೆ. ವಿಮಾನ ನಿಲ್ದಾಣ ನಿರ್ವಹಣೆಯ ಗುತ್ತಿಗೆ ಪಡೆಯಲು ಮುಂದಾಗಿರುವ ಉದ್ಯಮಿಗಳ ಪಟ್ಟಿಯಲ್ಲಿ ಗೌತಮ್ ಅದಾನಿಯ ಹೆಸರು ಮುಂಚೂಣಿಯಲ್ಲಿ ಇದೆ. 1999ರಲ್ಲಿ ಕೊಚ್ಚಿ ವಿಮಾನ ನಿಲ್ದಾಣದ ಮೂಲಕ ಆರಂಭವಾದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯು ಮುಂದುವರಿಯುತ್ತಿರುವುದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪಣೆ, ವಿರೋಧ ವ್ಯಕ್ತವಾಗುತ್ತಲೇ ಇದೆ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯ (ಎನ್‌ಎಂಪಿ) ಮೂಲಕ ಸರ್ಕಾರಿ ಉದ್ದಿಮೆ/ಆಸ್ತಿಗಳನ್ನು ಖಾಸಗೀಕರಣಗೊಳಿಸಿ, ಈ ಮೂಲಕ ಮುಂದಿನ ಐದು ವರ್ಷದಲ್ಲಿ ₹10 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಘೋಷಿಸಿದ್ದರು. ಈ ಹಣಕಾಸು ವರ್ಷದಲ್ಲಿ ₹47 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಇದರ ಭಾಗವಾಗಿ ಕೇಂದ್ರ ಸರ್ಕಾರವು ದೇಶದ 11 ವಿಮಾನ ನಿಲ್ದಾಣಗಳ ಖಾಸಗೀಕರಣ ಪ್ರಕ್ರಿಯೆಗೆ ಚಾಲನೆ ನೀಡಲು ಸಜ್ಜಾಗಿದೆ.

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಸದ್ಯ 129 ವಿಮಾನ ನಿಲ್ದಾಣಗಳನ್ನು ನಿರ್ವಹಿಸುತ್ತಿದೆ. ಅವುಗಳಲ್ಲಿ 25 ವಿಮಾನ ನಿಲ್ದಾಣಗಳನ್ನು 2022–2025ರ ನಡುವೆ ಖಾಸಗೀಕರಣಗೊಳಿಸಲು 2021ರಲ್ಲಿ ಕೇಂದ್ರ ಸರ್ಕಾರ ಯೋಜನೆ ರೂಪಿಸಿತ್ತು. ಈ ಪೈಕಿ, 11 ವಿಮಾನ ನಿಲ್ದಾಣಗಳ ಖಾಸಗೀಕರಣ ಪ್ರಕ್ರಿಯೆಯನ್ನು 2025ರ ಆರ್ಥಿಕ ವರ್ಷದೊಳಗೆ ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ಮತ್ತು ಅವುಗಳ ನಿರ್ವಹಣೆ ಮಾಡುವ ಪ್ರಕ್ರಿಯೆ ಆರಂಭವಾಗಿದ್ದು 1999ರಲ್ಲಿ. ಕೇರಳ ಸರ್ಕಾರ (ಶೇ 13ರಷ್ಟು ಪಾಲು), ಕೇಂದ್ರ ಸರ್ಕಾರ (ಶೇ 13ರಷ್ಟು ಪಾಲು) ಮತ್ತು ಅನಿವಾಸಿ ಭಾರತೀಯರ (ಶೇ 74ರಷ್ಟು ಪಾಲು) ಸಹಭಾಗಿತ್ವದಲ್ಲಿ ಕೊಚ್ಚಿ ವಿಮಾನ ನಿಲ್ದಾಣ ನಿರ್ಮಾಣವಾಗಿತ್ತು, 30 ದೇಶಗಳ 10 ಸಾವಿರ ಮಂದಿ ಅನಿವಾಸಿ ಭಾರತೀಯರು ಇದರಲ್ಲಿ ಬಂಡವಾಳ ಹೂಡಿಕೆ ಮಾಡಿದ್ದರು. ಹೀಗೆ, 1999ರ ಮೇ 25ರಂದು ಕಾರ್ಯಾರಂಭ ಮಾಡಿದ್ದ ಕೊಚ್ಚಿ ವಿಮಾನ ನಿಲ್ದಾಣ ದೇಶದ ಪಿಪಿಪಿ ಮಾದರಿಯ ಮೊದಲ ವಿಮಾನ ನಿಲ್ದಾಣ.

ನಂತರ 2004ರಲ್ಲಿ ಪಿಪಿಪಿ ಮಾದರಿಯಲ್ಲಿ ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ತೀರ್ಮಾನ ಕೈಗೊಳ್ಳಲಾಯಿತು. 2006ರಲ್ಲಿ ಪಿಪಿಪಿ ಮಾದರಿಯಲ್ಲಿಯೇ ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳ ಪುನರ್‌ನಿರ್ಮಾಣ ಮತ್ತು ಆಧುನೀಕರಣಕ್ಕೆ ಒಪ್ಪಿಗೆ ಸೂಚಿಸಲಾಗಿತ್ತು.

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರವೂ ಪಿಪಿಪಿ ಮಾದರಿ ಮುಂದುವರಿಯಿತು. ಎಎಐ ನಿರ್ಮಿಸಿ, ನಿರ್ವಹಣೆ ಮಾಡುತ್ತಿದ್ದ ವಿಮಾನ ನಿಲ್ದಾಣಗಳನ್ನು ದೀರ್ಘಾವಧಿಯ ಗುತ್ತಿಗೆಯ ಆಧಾರದಲ್ಲಿ ಖಾಸಗಿಯವರಿಗೆ ವಹಿಸಲು ಮುಂದಾಯಿತು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ 2019ರಲ್ಲಿ ಲಖನೌ, ಅಹಮದಾಬಾದ್, ಮಂಗಳೂರು, ಜೈಪುರ, ಗುವಾಹಟಿ ಮತ್ತು ತಿರುವನಂತಪುರ ವಿಮಾನ ನಿಲ್ದಾಣಗಳನ್ನು ಖಾಸಗಿಯವರಿಗೆ ವಹಿಸಿದೆ. ಈ ಆರೂ ವಿಮಾನ ನಿಲ್ದಾಣಗಳ ಗುತ್ತಿಗೆಯನ್ನು ಉದ್ಯಮಿ ಗೌತಮ್ ಅದಾನಿ ಅವರ ಕಂಪನಿಯೇ ಪಡೆದುಕೊಂಡಿದೆ ಎನ್ನುವುದು ಗಮನಾರ್ಹ.

2025ರ ಹೊತ್ತಿಗೆ 25 ವಿಮಾನ ನಿಲ್ದಾಣಗಳನ್ನು ಖಾಸಗೀಕರಣ ಮಾಡುವುದು ಕೇಂದ್ರ ಸರ್ಕಾರದ ಯೋಜನೆಯಾಗಿತ್ತು. ಆದರೆ, 2024ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದದ್ದರಿಂದ ಈ ಪ್ರಕ್ರಿಯೆ ಕೆಲ ಕಾಲ ಸ್ಥಗಿತಗೊಂಡಿತ್ತು. ಇದೀಗ 2026ರ ಮಾರ್ಚ್ ಒಳಗೆ ಈ ಪ್ರಕ್ರಿಯೆಯನ್ನು ಮುಗಿಸಲು ಸರ್ಕಾರ ನಿರ್ಧರಿಸಿದೆ ಎಂದು ವರದಿಯಾಗಿದೆ.

ನಷ್ಟದಲ್ಲಿರುವ ವಿಮಾನ ನಿಲ್ದಾಣಗಳನ್ನು ಲಾಭದಲ್ಲಿರುವ ವಿಮಾನ ನಿಲ್ದಾಣಗಳೊಂದಿಗೆ ವಿಲೀನ ಮಾಡಿ, ಅವುಗಳ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಖಾಸಗಿಯವರಿಗೆ ವಹಿಸುವುದು ಕೂಡ ಸರ್ಕಾರದ ಯೋಜನೆಯ ಭಾಗವಾಗಿದೆ. ಅಷ್ಟೇನೂ ಲಾಭದಾಯಕವಲ್ಲದ ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಭುವನೇಶ್ವರ ವಿಮಾನ ನಿಲ್ದಾಣದೊಂದಿಗೆ ಸೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇವೆರಡನ್ನೂ ಖಾಸಗಿಯವರಿಗೆ ವಹಿಸಲಾಗುತ್ತದೆ.

153 ದೇಶದಲ್ಲಿರುವ ವಿಮಾನ ನಿಲ್ದಾಣಗಳು

129* ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ನಿರ್ವಹಿಸುತ್ತಿರುವ ನಿಲ್ದಾಣಗಳು

14 ಪಿಪಿಪಿ ಮಾದರಿಯಲ್ಲಿ ಕಾರ್ಯಾಚರಿಸುತ್ತಿರುವ ವಿಮಾನ ನಿಲ್ದಾಣಗಳು

10 ರಾಜ್ಯ, ಜಂಟಿ ಮತ್ತು ಖಾಸಗಿ ನಿರ್ವಹಣೆಯ ವಿಮಾನ ನಿಲ್ದಾಣಗಳು

29 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಂಖ್ಯೆ

114 ದೇಶೀಯ ವಿಮಾನ ನಿಲ್ದಾಣಗಳ ಸಂಖ್ಯೆ

10 ಕಸ್ಟಮ್ಸ್ ವಿಮಾನ ನಿಲ್ದಾಣಗಳ ಸಂಖ್ಯೆ

*28 ನಿಲ್ದಾಣಗಳು ಕಾರ್ಯಾಚರಿಸುತ್ತಿಲ್ಲ

ಪಿಪಿಪಿ ಮಾದರಿಯ ವಿಮಾನ ನಿಲ್ದಾಣಗಳು (ನಿರ್ವಹಣೆ ಮಾಡುತ್ತಿರುವ ಸಂಸ್ಥೆ)

1	ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಸಿಐಎಎಲ್)
2	ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎಎಲ್)
3	ಹೈದರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಜಿಎಂಆರ್)
4	ಕಣ್ಣೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್)
5	ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಜಿಎಂಆರ್)
6	ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
7	ಅಹಮದಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
8	ಲಖನೌ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
9	ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
10	ಜೈಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
11	ಗುವಾಹಟಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
12	ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಅದಾನಿ)
13	ಪಶ್ಚಿಮ ಬಂಗಾಳದ ದುರ್ಗಾಪುರ ವಿಮಾನ ನಿಲ್ದಾಣ (ಬಿಎಪಿಎಲ್))
14	ಗೋವಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಜಿಎಂಆರ್)

ಖಾಸಗೀಕರಣ ಮಾಡಲು ಉದ್ದೇಶಿಸಿರುವ ವಿಮಾನ ನಿಲ್ದಾಣಗಳು

ಅಮೃತಸರ (ಪಂಜಾಬ್) ● ವಾರಾಣಸಿ (ಉತ್ತರ ಪ್ರದೇಶ) ● ಭುವನೇಶ್ವರ (ಒಡಿಶಾ) ● ಇಂದೋರ್ (ಮಧ್ಯಪ್ರದೇಶ) ● ರಾಯಪುರ (ಛತ್ತೀಸಗಢ) ● ತಿರುಚಿನಾಪಳ್ಳಿ (ತಮಿಳುನಾಡು) ● ಕುಷಿನಗರ (ಉತ್ತರಪ್ರದೇಶ) ● ಗಯಾ (ಬಿಹಾರ) ● ಹುಬ್ಬಳ್ಳಿ (ಕರ್ನಾಟಕ) ● ತಿರುಪತಿ (ಆಂಧ್ರಪ್ರದೇಶ)

ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಆರಂಭದಿಂದಲೂ ವಿರೋಧ ವ್ಯಕ್ತವಾಗುತ್ತಲೇ ಇದೆ. 2014ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶದ ಕೆಲವು ಬಂದರು, ರೈಲು ನಿಲ್ದಾಣಗಳ ನಿರ್ವಹಣೆಯನ್ನೂ ಖಾಸಗಿಯವರಿಗೆ ವಹಿಸಿತು. ಅದಾನಿ ಒಡೆತನದ ಕಂಪನಿಯು ಬಂದರುಗಳ ಗುತ್ತಿಗೆ ಪಡೆದಾಗ ವಿವಾದವೂ ಹುಟ್ಟಿಕೊಂಡಿತ್ತು. ಖಾಸಗೀಕರಣದಿಂದ ಸ್ಪರ್ಧಾತ್ಮಕತೆ, ನಾವೀನ್ಯ, ತಾಂತ್ರಿಕತೆ, ದಕ್ಷತೆ ಹೆಚ್ಚುತ್ತದೆ ಎನ್ನುವುದು ಸರ್ಕಾರದ ವಾದ. ಆದರೆ, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಂದರುಗಳ ನಿರ್ವಹಣೆಯಿಂದ ಖಾಸಗಿಯವರು ಲಾಭ ಮಾಡುವುದು ಸಾಧ್ಯವಾದರೆ, ಸರ್ಕಾರಕ್ಕೆ ಏಕೆ ಅದು ಸಾಧ್ಯವಿಲ್ಲ ಎನ್ನುವ ಪ್ರಶ್ನೆಗಳೂ ಕೇಳಿಬಂದಿವೆ.

ಆಧಾರ: ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ಸಂಸತ್ತಿನಲ್ಲಿ ಸಚಿವರ ಉತ್ತರಗಳು, ಪಿಐಬಿ ಪತ್ರಿಕಾ ಹೇಳಿಕೆಗಳು, ಮಾಧ್ಯಮ ವರದಿಗಳು ಅಸೋಸಿಯೇಷನ್ ಆಫ್ ಪ್ರೈವೇಟ್ ಏರ್‌ಪೋರ್ಟ್ ಆಪರೇಟರ್ಸ್

ಖಾಸಗೀಕರಣ ಎಂದರೆ...

ಸದ್ಯ, ದೇಶದಲ್ಲಿ 14 ವಿಮಾನ ನಿಲ್ದಾಣಗಳು ಸರ್ಕಾರಿ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ (ಪಿಪಿಪಿ) ಕಾರ್ಯಾಚರಿಸುತ್ತಿವೆ.

'ಖಾಸಗೀಕರಣ ಎಂದರೆ ವಿಮಾನ ನಿಲ್ದಾಣಗಳನ್ನು ಪೂರ್ಣವಾಗಿ ಖಾಸಗಿಯವರಿಗೆ ಮಾರುವುದು ಅಲ್ಲ. ನಿರ್ದಿಷ್ಟ ಅವಧಿಗೆ ವಿಮಾನ ನಿಲ್ದಾಣ ಹಾಗೂ ಅದಕ್ಕೆ ಸಂಬಂಧಿಸಿದ ಆಸ್ತಿಯನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡುವುದು. ನಿಲ್ದಾಣಗಳನ್ನು 50 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗುತ್ತದೆ. ಹಾಗಿದ್ದರೂ, ಗುತ್ತಿಗೆ ಅವಧಿಯಲ್ಲಿ ವಿಮಾನ ನಿಲ್ದಾಣದ ಭೂಮಿಯ ಮಾಲೀಕತ್ವವನ್ನು ವಿಮಾನ ನಿಲ್ದಾಣಗಳ ಪ್ರಾಧಿಕಾರವೇ ಹೊಂದಿರುತ್ತದೆ. ಒಪ್ಪಂದದ ಪ್ರಕಾರ, ಗುತ್ತಿಗೆ ಅವಧಿ ಮುಗಿದ ನಂತರ ವಿಮಾನ ನಿಲ್ದಾಣ ಹಾಗೂ ಇತರ ಆಸ್ತಿಗಳು ಮತ್ತೆ ಪ್ರಾಧಿಕಾರಕ್ಕೆ ಬರುತ್ತವೆ' ಎಂದು ಈ ಹಿಂದಿನ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ ಮೊಹೋಲ್ ಅವರು ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದರು.

ನಿಲ್ದಾಣಗಳ ಮೇಲೆ ಅದಾನಿ ಕಂಪನಿ ಕಣ್ಣು

ದೇಶದಲ್ಲಿ ಸರ್ಕಾರಿ, ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯಾಚರಿಸುತ್ತಿರುವ 14 ವಿಮಾನ ನಿಲ್ದಾಣಗಳ ಪೈಕಿ ಗೌತಮ್ ಅದಾನಿ ಒಡೆತನದ ಅದಾನಿ ಏರ್‌ಪೋರ್ಟ್ ಹೋಲ್ಡಿಂಗ್ ಲಿಮಿಟೆಡ್ (ಎಎಎಚ್‌ಎಲ್) ಸದ್ಯ ಏಳು ವಿಮಾನ ನಿಲ್ದಾಣಗಳನ್ನು ನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರವು 2019ರಲ್ಲಿ ಎರಡನೇ ಹಂತದಲ್ಲಿ ಖಾಸಗೀಕರಣ ಮಾಡುವಾಗ ಅದಾನಿ ಸಂಸ್ಥೆಯು 50 ವರ್ಷಗಳವರೆಗೆ ಆರು ನಿಲ್ದಾಣಗಳನ್ನು ನಿರ್ವಹಿಸುವ ಗುತ್ತಿಗೆ ಪಡೆದಿತ್ತು. ಪಿಪಿಪಿ ಮಾದರಿ ಆದರೂ, ಈ ನಿಲ್ದಾಣಗಳಲ್ಲಿ ಅದಾನಿ ಕಂಪನಿಯೇ ಶೇ 100ರಷ್ಟು ಪಾಲುದಾರಿಕೆ ಹೊಂದಿದೆ. ಆಗ ಗುತ್ತಿಗೆಯನ್ನು ಅದಾನಿ ಸಂಸ್ಥೆಗೆ ನೀಡಿದ್ದಕ್ಕೆ ಆಕ್ಷೇಪವೂ ವ್ಯಕ್ತವಾಗಿತ್ತು. ಅದಾನಿಗೆ ನೀಡುವುದಕ್ಕಾಗಿಯೇ ಸರ್ಕಾರ ನಿಯಮಗಳನ್ನು ಬದಲಿಸಿತ್ತು ಎಂದು ಕಾಂಗ್ರೆಸ್ ಆರೋಪಿಸಿತ್ತು. ಎಎಎಚ್‌ಎಲ್, 2021ರಲ್ಲಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆಯ ಹೊಣೆಯನ್ನು 'ಜಿವಿಕೆ'ಯಿಂದ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ನವಿಮುಂಬೈ ವಿಮಾನ ನಿಲ್ದಾಣವನ್ನು ಅದು ಅಭಿವೃದ್ಧಿ ಪಡಿಸುತ್ತಿದ್ದು, ಶೀಘ್ರದಲ್ಲಿ ಬಳಕೆಗೆ ಮುಕ್ತವಾಗಲಿದೆ.

ಸರ್ಕಾರವು ವಿಮಾನ ನಿಲ್ದಾಣಗಳನ್ನು ಖಾಸಗೀಕರಣ ಮಾಡಲು ಮುಂದಾದರೆ, ಸಂಸ್ಥೆಯು ಅವುಗಳ ಖರೀದಿಗೆ ಬಿಡ್ ಮಾಡಲಿದೆ ಎಂದು ಎಎಎಚ್‌ಎಲ್ ಸಿಇಒ ಅರುಣ್ ಬನ್ಸಾಲ್ ಈ ಹಿಂದೆ ಹೇಳಿದ್ದರು. ವಿಮಾನ ನಿಲ್ದಾಣ ನಿರ್ವಹಣಾ ಉದ್ಯಮವನ್ನು ವಿಸ್ತರಿಸಲು ಹೊರಟಿರುವ ಅದಾನಿ ಸಂಸ್ಥೆಯು ಈಗ ಸರ್ಕಾರ ಖಾಸಗೀಕರಣಗೊಳ್ಳಲಿರುವ ನಿಲ್ದಾಣಗಳ ನಿರ್ವಹಣೆ ಗುತ್ತಿಗೆ ಪಡೆಯಲು ಪ್ರಯತ್ನಿಸಬಹುದು ಎಂದು ಹೇಳಲಾಗುತ್ತಿದೆ.

ವಿಮಾನ ನಿಲ್ದಾಣಗಳ ನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿರುವ ಮತ್ತೊಂದು ಖಾಸಗಿ ಕಂಪನಿ ಜಿಎಂಆರ್ ಏರ್‌ಪೋರ್ಟ್ ಲಿಮಿಟೆಡ್. ದೆಹಲಿ, ಹೈದರಾಬಾದ್ ಮತ್ತು ಗೋವಾದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ನಿರ್ವಹಿಸುತ್ತಿರುವ ಈ ಕಂಪನಿ ಕೂಡ ಇನ್ನಷ್ಟು ವಿಮಾನ ನಿಲ್ದಾಣಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಯತ್ನಿಸಬಹುದು ಎನ್ನಲಾಗುತ್ತಿದೆ.



ಪತ್ರಕರ್ತನಾದ ಅಚ್ಯುತ್ ಕುಮಾರ್

ಪ್ರಸಕ್ತ ರಾಜಕೀಯ ಸನ್ನಿವೇಶಗಳನ್ನು ವಿಡಂಬನಾತ್ಮಕವಾಗಿ ಚಿತ್ರಿಸಿರುವ 'ಪೆರಿ ಪೆರಿ ಪಿತೂರಿ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ಗಿರೀಶ್ ಎ.ಎಂ ಕಥೆ ಬರೆದು, ನಿರ್ದೇಶನ ಮಾಡಿದ್ದಾರೆ.

ನಟ ಅಚ್ಯುತ್ ಕುಮಾರ್ ಪತ್ರಕರ್ತನ ಪಾತ್ರದಲ್ಲಿ ಅಭಿನಯಿಸಿದ್ದಾರೆ. 'ನಾನು ಮುಂಬೈನ ಐಐಟಿ ವಿದ್ಯಾರ್ಥಿ. ಸಿನಿಮಾ ಮೇಲಿನ ಆಸಕ್ತಿಯಿಂದ ಈ ರಂಗಕ್ಕೆ ಬಂದಿರುವೆ. ಕಾರ್ಪೋರೆಟ್ ಹಾಗೂ ರಾಜಕೀಯದ ನಡುವಿನ ವ್ಯವಸ್ಥೆ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದೇವೆ. ನೂರಾರು ಸಿನಿಮಾಸಕ್ತರು ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ' ಎಂದರು ನಿರ್ದೇಶಕರು.

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ ಸೇರಿದಂತೆ ಕೆಲ ಚಿತ್ರೋತ್ಸವಗಳಲ್ಲಿ ಈ ಚಿತ್ರ ಈಗಾಗಲೇ ಪ್ರದರ್ಶನಗೊಂಡಿದೆ. ಬೆಂಗಳೂರು, ಮಂಗಳೂರು, ತುಮಕೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ವರ್ಷಾ ರಾಮಚಂದ್ರ, ಕಿರಣ್ ಲಖಾನಿ ಮೊದಲಾದವರು ತಾರಾಗಣದಲ್ಲಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

ಕಮಲದ ಕಥೆ ಹೇಳುವ 'ಪದ್ಮಗಂಧಿ'

ನಟ ಸುಚೇಂದ್ರ ಪ್ರಸಾದ್ ನಿರ್ದೇಶಿಸುತ್ತಿರುವ 'ಪದ್ಮಗಂಧಿ' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಚಿತ್ರಕ್ಕೆ ಎಸ್.ಆರ್ ಲೀಲಾ ಕಥೆ ಬರೆದು, ಬಂಡವಾಳ ಹೂಡಿದ್ದಾರೆ.

'ಸಸ್ಯಶಾಸ್ತ್ರದ ಪ್ರಕಾರ ಏಷ್ಯಾ ಖಂಡದ ದೇಸೀ ಹೂವಾದ ಕಮಲ, ಪುರಾಣ ಕಾಲದಿಂದಲೂ ಶ್ರೇಷ್ಠ ಪುಷ್ಪ. ಸಮರ ಕಲೆಗಳಲ್ಲಿಯೂ ಈ ಹೂವಿನ ಐತಿಹ್ಯವಿದೆ. ಮಹಾಭಾರತದಲ್ಲಿ ಪದ್ಮವ್ಯೂಹದ ಪ್ರಸ್ತಾಪ ಬರುತ್ತದೆ. ಇಂಥ ಕಮಲದ ಕುರಿತು ವಿಶಿಷ್ಟ ಕಥೆಯನ್ನು ಹೊಂದಿರುವ ಚಿತ್ರವಿದು. ಎಸ್.ಆರ್ ಲೀಲಾ ಈ ವಿಷಯದ ಕುರಿತು ಆಳವಾದ ಅಧ್ಯಯನ ಮಾಡಿ ಕಥೆ ಬರೆದಿದ್ದಾರೆ' ಎಂದು ಸುಚೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭಗೊಂಡಿದ್ದು, ಮೇ ತಿಂಗಳಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆ ತಂಡದ್ದು. ದೀಪಕ್ ಪರಮಶಿವನ್ ಸಂಗೀತ, ಮನು ಯಾಪ್ಲಾರ್ ಮತ್ತು ನಾಗರಾಜ್ ಅದ್ವಾನಿ ಛಾಯಾಚಿತ್ರಗ್ರಹಣ, ಎನ್. ನಾಗೇಶ್ ನಾರಾಯಣಪ್ಪ ಸಂಕಲನವಿದೆ.


ಸುಚೇಂದ್ರ ಪ್ರಸಾದ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹಮಾಸ್ ಅನ್ನು ಬೆಂಬಲಿಸುತ್ತಿದ್ದಾರೆ ಎನ್ನುವ ಆರೋಪದ ಮೇರೆಗೆ ಅಮೆರಿಕ ಸರ್ಕಾರವು ಭಾರತ ಮೂಲದ ಪಿಎಚ್‌ಡಿ ವಿದ್ಯಾರ್ಥಿನಿ ರಂಜನಿ ಶ್ರೀನಿವಾಸನ್ ಅವರ ವೀಸಾ ಅನ್ನು ದಿಢೀರ್ ರದ್ದುಗೊಳಿಸಿತ್ತು. ರಂಜನಿ ಅವರು ಸ್ವಯಂ ಗಡೀಪಾರಾಗಿ ಭಾರತಕ್ಕೆ ಹಿಂದಿರುಗಿದ್ದರು. ಈ ನಡುವೆ ಯುವತಿಯೊಬ್ಬರು ಪ್ಯಾಲೆಸ್ಟೀನ್ ಪರ ಹಿಂದಿಯಲ್ಲಿ ಘೋಷಣೆ ಕೂಗುತ್ತಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ರಂಜನಿ ಅವರದ್ದೇ ವಿಡಿಯೊ ಎಂದು ಕೆಲವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿರುವ ಯುವತಿ ರಂಜನಿ ಅಲ್ಲ ಎನ್ನುವುದು ಖಚಿತವಾಯಿತು. ವಿಡಿಯೊದಲ್ಲಿ ಅಲ್ ಜಝೀರಾ ಸುದ್ದಿವಾಹಿನಿಯ ಲಾಂಛನ ಇದ್ದು, ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ಪ್ರತಿಭಟನೆಯ ಬಗ್ಗೆ ಆ ವಾಹಿನಿಯು ಮಾಡಿದ ವರದಿಯ ವಿಡಿಯೊ ಅದಾಗಿದೆ ಎನ್ನುವುದು ತಿಳಿಯಿತು. ಈ ಕುರಿತು ರಂಜನಿ ಅವರನ್ನು ಸಂಪರ್ಕಿಸಿದಾಗ, ಈ ವಿಡಿಯೊ ಚಿತ್ರೀಕರಣವಾಗಿರುವ ಅವಧಿಯಲ್ಲಿ ಅವರು ಅಮೆರಿಕದಲ್ಲಿ ಇರಲೇ ಇಲ್ಲ ಎನ್ನುವುದು ತಿಳಿಯಿತು. ಅದು ರಂಜನಿ ಅವರ ವಿಡಿಯೊ ಎಂದು ಪ್ರಚಾರ ಮಾಡುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಬ್ರಹ್ಮಚರ್ಯ ಎಂದರೆ ಏನು?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

165

ಬ್ರಹ್ಮಚರ್ಯ ಎಂದರೆ ಏನು? ಬ್ರಹ್ಮ ಅಂದರೆ ದೇವರು, ಬ್ರಹ್ಮ ಅಂದರೆ ಸುಖ, ಆನಂದ. ಚರ್ಯ ಅಂದರೆ ನಡಿಗೆ. ಹೆಜ್ಜೆ ಹಾಕುವುದು. ಯಾರಿಗೆ ಆನಂದ ಬೇಕೋ ಅವರು ಈ ದಾರಿಯಲ್ಲಿ ನಡೆಯಬೇಕು. ಸಣ್ಣಸಣ್ಣ ವಿಷಯಗಳನ್ನು ಬದಿಗೆ ಸರಿಸಿ ಆನಂದದತ್ತ ನಡೆಯುವ ಪ್ರತಿಯೊಬ್ಬರೂ ಬ್ರಹ್ಮಚಾರಿಗಳು. ಬ್ರಹ್ಮಚರ್ಯ ಎಂದರೆ ಮದುವೆ ಮಾಡಿಕೊಳ್ಳದೇ ಇರುವುದು ಎಂದು ನಾವು ಅಂದುಕೊಂಡಿದ್ದೇವೆ. ಅಷ್ಟೇ ಅರ್ಥವಲ್ಲ. ಬ್ರಹ್ಮಚರ್ಯ ಎಂದರೆ ಮೀಸಲು. ಅಲ್ಲಮಪ್ರಭು ಒಂದು ವಚನದಲ್ಲಿ 'ಸತಿಯ ಕಂಡು ವ್ರತಿಯಾದ ಬಸವಣ್ಣ, ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ, ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯಾ ಬಸವಣ್ಣ, ಗುಹೇಶ್ವರಾ ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದ ಬಸವಣ್ಣ ಒಬ್ಬನೇ' ಎಂದು ಹೇಳುತ್ತಾರೆ. ಈ ಮಾತನ್ನು ಹೇಳಿದವರು ಮದುವೆಯಾಗದ ಅಲ್ಲಮಪ್ರಭುಗಳು. ಬ್ರಹ್ಮಚಾರಿ ಎಂದು ಕರೆಸಿಕೊಂಡ ಬಸವಣ್ಣ ಮದುವೆಯಾದವರು. ಬಸವಣ್ಣ ಮನಸ್ಸು, ದೇಹ, ಹೃದಯ ಯಾವುದನ್ನೂ ಕೆಡಿಸಿಕೊಳ್ಳದೆ ಬದುಕಿದ್ದರು. ಅದಕ್ಕೇ ಅವರನ್ನು ಬ್ರಹ್ಮಚಾರಿ ಎಂದು ಕರೆದರು. ಬಸವಣ್ಣನವರು ಪ್ರಧಾನ ಮಂತ್ರಿಯಾಗಿದ್ದರು, ಹಣಕಾಸು ಮಂತ್ರಿಯಾಗಿದ್ದರೂ ಮೀಸಲು ಬಿಟ್ಟಿರಲಿಲ್ಲ. ಅದಕ್ಕೆ ಬ್ರಹ್ಮಚಾರಿಯಾಗಿಯೇ ಉಳಿದರು.

ಹಾಗಾದರೆ ದೇವರಿಗೆ ಏನು ಮೀಸಲು ಮಾಡಬೇಕು? ಹಾಲು ಮೀಸಲು ಮಾಡಬೇಕು ಎಂದರೆ ಕರು ಎಂಜಲು ಮಾಡಿದೆ. ಹೂವು ಮೀಸಲು ಮಾಡೋಣ ಎಂದರೆ ದುಂಬಿ ಎಂಜಲು ಮಾಡಿದೆ. ನೀರು ಮೀಸಲು ಮಾಡೋಣ ಎಂದರೆ ಮೀನು ಎಂಜಲು ಮಾಡಿದೆ. ಭಗವಂತನೆ ಏನು ಮೀಸಲು ಮಾಡಲಿ ಅಂತ ಕೇಳಿದರೆ ಭಗವಂತನಿಗೆ ಹೊರಗಿನ ವಸ್ತುಗಳನ್ನು ಮೀಸಲು ಮಾಡುವುದಲ್ಲ. ನಮ್ಮ ಹೃದಯವೇ ಮೀಸಲು ಮಾಡಬೇಕು. ಅದೇ ಬ್ರಹ್ಮಚರ್ಯ. ನೀವು ಬಸ್ಸಿನಲ್ಲಿ ಹೋಗುತ್ತೀರಿ. ಬಸ್ಸು ಪ್ರಯಾಣಿಕರಿಂದ ತುಂಬಿಕೊಂಡಿದೆ. ಒಬ್ಬರ ಕಾಲ ಮೇಲೆ ಇನ್ನೊಬ್ಬರು ನಿಂತಿದ್ದಾರೆ. ಆದರೂ ನೀವು ಸೀಟ್ ಮೀಸಲು ಮಾಡಿದ್ದರೆ ನಿಮ್ಮ ಸೀಟಿನಲ್ಲಿ ಯಾರೂ ಕುಳಿತುಕೊಳ್ಳುವುದಿಲ್ಲ. ಅದು ಖಾಲಿಯೇ ಇರುತ್ತದೆ. ಹಾಗೆಯೇ ಹೃದಯವನ್ನು ದೇವರಿಗೆ ಮೀಸಲು ಮಾಡಿಬಿಟ್ಟರೆ ಅಲ್ಲಿ ರೂಪ, ವಾಸನೆ, ರುಚಿ ಮುಂತಾದ ಯಾವುದೇ ಆಕರ್ಷಣೆ ಬಂದರೂ ದೇವರು ಅಲ್ಲಿ ನೆಲೆಸುತ್ತಾನೆ. ದೇವರು ಅಂದರೆ ಒಳ್ಳೆಯದು ಎಂದು ಅರ್ಥ.

ಹಳ್ಳಿಗಳಲ್ಲಿ ಜಾನುವಾರುಗಳಿಗೆ ಸೀಲ್ ಹಾಕುತ್ತಾರೆ. ಯಾಕೆಂದರೆ ಬೇರೆ ಹೊಲಗಳಲ್ಲಿ ಮೇಯಬಾರದು ಅಂತ. ಬ್ರಹ್ಮಚರ್ಯ ಎಂದರೆ ನಮಗೆ ನಾವೇ ಹಾಕಿಕೊಳ್ಳುವ ಸೀಲ್. ಬೇರೆಯವರ ವಸ್ತುಗಳನ್ನು ಮೋಹಿಸಬಾರದು ಅಂತ. ಬಸವಣ್ಣನವರು 'ಆನು ಪಶು, ನೀನು ಪಶುಪತಿ' ಎನ್ನುತ್ತಾರೆ. ನಮ್ಮ ದನ ಬೇರೆಯವರ ಹೊಲದಲ್ಲಿ ಮೇಯ್ದರೆ ದನಕ್ಕೆ ಯಾರೂ ಬಯ್ಯೋದಿಲ್ಲ. ಮಾಲೀಕನಿಗೆ ಬಯ್ಯುತ್ತಾರೆ. ಅದಕ್ಕೆ ಬಸವಣ್ಣನವರು 'ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ ಒಡೆಯಾ ನಿಮ್ಮ ಬಯ್ಯದಂತೆ ಮಾಡು' ಎನ್ನುತ್ತಾರೆ. 'ನನ್ನ ಮನಸ್ಸು ತುಡುಗ ದನದಂತೆ. ಬೇರೆಯವರ ವಸ್ತುಗಳನ್ನು ನೋಡಿ ಬಯಸಿದರೆ ದೇವರೇ ನಿನಗೆ ಬಯ್ಯುತ್ತಾರೆ. ಅದಕ್ಕೆ ನನ್ನನ್ನು ಒಳ್ಳೆಯವನನ್ನಾಗಿ ಮಾಡು' ಎಂದು ಕೇಳಿಕೊಳ್ಳುತ್ತಾರೆ ಅವರು. ಇದು ಮೀಸಲು ಮಾಡುವಿಕೆ. ಜೀವನದಲ್ಲಿ ಮೀಸಲು ವ್ರತ ಪಾಲನೆ ಮಾಡಿದರೆ ಸಂತೋಷ ವೃದ್ಧಿಯಾಗುತ್ತದೆ. ಯಶಸ್ಸು ಸಿಗುತ್ತದೆ. ಉತ್ಸಾಹಿಯಾಗುತ್ತಿ. ಮನಸ್ಸು ಚಂಚಲ ಆಗೋದಿಲ್ಲ. ಬೆಳಿಗ್ಗೆ ಎದ್ದು ಒಂದು ಹೂವಿನ ಮುಖ ನೋಡಿ. ಅದು ಎಂದಾದರೂ ಸಾಬೂನು ಹಚ್ಚಿ ಮುಖ ತೊಳಕೊಂಡ್ಯೆತೇನು? ಆದರೂ ಯಾವಾಗಲೂ ಫ್ರೆಶ್ ಆಗಿರುತ್ತದೆ. ನಮ್ಮ ಮುಖವೂ ಹಾಗೆಯೇ ಇರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ಏಪ್ರಿಲ್ 3, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಷಷ್ಠಿ ಗಂ. 21-42 ನಕ್ಷತ್ರ: ರೋಹಿಣಿ ಗಂ. 07-02 ಯೋಗ: ಸೌಭಾಗ್ಯ ಗಂ. 24-01 ಕರಣ: ಕೌಲವ ಗಂ. 10-41, ಮೀನ ಮಾಸದ 20 ನೇ ದಿನ, ಮಳೆನಕ್ಷತ್ರ: ರೇವತಿ 2.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-28 **ಸೂರ್ಯಾಸ್ತ:** 06-39
ಮುಸ್ಲಿಂ ದಿನಾಂಕ: 04 ಶವ್ವಾಲ್
ಅದೃಷ್ಟ ಸಂಖ್ಯೆ: 6, 9

ಮೇಷ: ಗುತ್ತಿಗೆದಾರರು, ಮರ-ಮಟ್ಟು ಹಾಗೂ ಕಲ್ಲಿನ ವ್ಯಾಪಾರಿಗಳಿಗೆ ದುಪ್ಪಟ್ಟು ಆದಾಯ ಉಂಟಾಗಲಿದೆ. ಆಭರಣ ಅಥವಾ ಕಲಾಕೃತಿಗಳನ್ನು ಖರೀದಿಸುವ ಮನಸ್ಸಾಗುವುದು.

ವೃಷಭ: ವ್ಯವಹಾರದಲ್ಲಿ ಪಾಲುದಾರರಿಂದ ಮೋಸವಾಗುವ ಸಾಧ್ಯತೆ ಹೆಚ್ಚಿದ್ದು, ಪಾಲುದಾರಿಕೆಯನ್ನು ಮುಂದುವರಿಸುವ ನಿರ್ಧಾರ ಸದ್ಯಕ್ಕೆ ಬೇಡ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

ಮಿಥುನ: ದಲ್ಲಾಳಿ ವ್ಯವಹಾರ ಹಾಗೂ ವೃತ್ತಿ ವ್ಯಾಪಾರಗಳಲ್ಲಿ ಶ್ರದ್ಧೆಯಿಂದ ಕೆಲಸ ಮಾಡುವವರಿಗೆ ಉತ್ತಮ ಫಲಿತಾಂಶ ಸಿಗಲಿದೆ. ಸ್ವಾರ್ಥ ಅಥವಾ ಇಷ್ಟಾರ್ಥದ ಈಡೇರಿಕೆಗಾಗಿ ಪರರನ್ನು ಹಿಂಸಿಸಬೇಡಿ.

ಕರ್ಕಾಟಕ: ಶುಭ ಕಾರ್ಯಗಳಿಗೆ ಸಣ್ಣ-ಪುಟ್ಟ ವಿಘ್ನಗಳು ಎದುರಾಗಬಹುದು. ಹಿರಿಯ ಅಧಿಕಾರಿಗಳಿಂದ ಯಾವುದೇ ವಿಚಾರವನ್ನೂ ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲ. ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರುವುದು.

ಸಿಂಹ: ವಿವಾಹ ಸಂಬಂಧಿ ಕಾರ್ಯಗಳಿಗಾಗಿ ಓಡಾಟ ಹೆಚ್ಚುವುದು. ಉದ್ಯೋಗದಲ್ಲಿ ಸಮಸ್ಯೆಗಳು ಎದುರಾದರೂ ಸಂಜೆ ಹೊತ್ತಿಗೆ ನಿವಾರಣೆ ಆಗಲಿವೆ. ಪರರಿಗೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ.

ಕನ್ಯಾ: ವೃತ್ತಿಯಲ್ಲಿ ನೆರವಾಗಬಲ್ಲಂತಹ ವ್ಯಕ್ತಿಗಳೊಂದಿಗೆ ಸ್ನೇಹ–ಸಂಬಂಧ ಆರಂಭವಾಗುತ್ತದೆ. ಕಾರ್ಮಿಕರೊಂದಿಗೆ ಮೃದುವಾಗಿ ವರ್ತಿಸಿದರೆ ಮಾತ್ರ ನಿಮಗೆ ಲಾಭವಾಗುವುದು.

ತುಲಾ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಹಂತಹಂತವಾಗಿ ಚೇತರಿಕೆಯಾಗಲಿದೆ. ವಿದೇಶಿ ವಸ್ತು ಅಥವಾ ಭೋಗದ ವಸ್ತುಗಳ ಖರೀದಿಗಾಗಿ ಧನ ವ್ಯಯ ಮಾಡುವಿರಿ.

ವೃಶ್ಚಿಕ: ಕಳೆದು ಹೋಗಿರಬಹುದೆಂದು ಭಾವಿಸಿದ್ದ ದಾಖಲೆ ಪತ್ರಗಳು ಸಿಕ್ಕು, ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಜೀವನ ಶೈಲಿಗೆ ಸಂಬಂಧಿಸಿದಂತೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಸಮಯ.

ಧನು: ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುವುದರಿಂದ, ರೈತರು ತಾವು ಮಾಡಿದ್ದ ಸಾಲವನ್ನು ತೀರಿಸಿಕೊಳ್ಳುವ ಅವಕಾಶ ಒದಗುವುದು. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಯಾಗುವಿರಿ. ಬಿಳಿ ಬಣ್ಣ ಶುಭ ತರಲಿದೆ.

ಮಕರ: ಚರ್ಮಸಂಬಂಧಿತ ಸಮಸ್ಯೆಗಳು ಕಾಣಿಸಿದಲ್ಲಿ ಆಯುರ್ವೇದ ಚಿಕಿತ್ಸೆಯ ಮೊರೆ ಹೋಗುವುದರಿಂದ ಶಾಶ್ವತ ಪರಿಹಾರ ದೊರಕಲಿದೆ. ಧನಾಗಮನ ಹೆಚ್ಚಿದ್ದರೂ ಬಹುಪಾಲು ಮೊತ್ತ ಖರ್ಚಾಗಲಿದೆ.

ಕುಂಭ: ಕಚೇರಿಯಲ್ಲಿ ಬೇಸರ ತರುವಂತಹ ಘಟನೆಗಳು ನಡೆದರೂ ಧೃತಿಗೆಡದೆ, ಭವಿಷ್ಯದ ಬಗ್ಗೆ ಆಶಾಭಾವನೆ ಬೆಳೆಸಿಕೊಳ್ಳಿ. ನೆರೆಹೊರೆಯವರು ನಿಮ್ಮ ವಿರುದ್ಧ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇದೆ.

ಮೀನ: ಈ ದಿನದ ಸಂದಿಗ್ಧ ಪರಿಸ್ಥಿತಿಯಲ್ಲಿ ತಾಳ್ಮೆ ಹಾಗೂ ಎಚ್ಚರಿಕೆಯಿಂದ, ಮಾರ್ಗದರ್ಶಕರ ಸಲಹೆಯಂತೆ ನಡೆದುಕೊಳ್ಳುವುದು ಉತ್ತಮ. ಮಾತಿನ ಚಾತುರ್ಯದಿಂದ ಜನರ ಮನ ಗೆಲ್ಲುವಿರಿ.

ಪದಬಂಧ 6000

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ರುತಿಗೆ ಹೊಂದದ ಸ್ವರ (4)
3.ಅರವತ್ತು ವರ್ಷದ ಹುಟ್ಟುಹಬ್ಬ (4)
5.ಮಾನವಂತನಿಗೆ ತೋರಿದ ಮನ್ನಣೆ (3)
6.ಜಗಳಕ್ಕೊಂದು ಪರ್ಯಾಯ ಪದ (3)
8.ಲಾಂಗೂಲ ಹಿಡಿದಿರುವ ಹುಡುಗ (3)
9.ಪ್ರಶ್ನೆಗೆ ಪೂರಕವಾಗಿ ಹೇಳುವಂತಹ ಮಾತು (3)
10.ತಿರುಗಿಸಿದರೂ ಇದು ಚಿನ್ನ (3)
12.ಬಿದಿಗೆಯಂದು ಖರೀದಿಸಿದ ಕೊಡ (3)
14.ಈತ ಲೆಕ್ಕ ಬರೆಯುವವನು (4)
15.ಶಕ್ತಿಯನ್ನು ಕಳೆದುಕೊಂಡವನು (4)

ಮೇಲಿಂದ ಕೆಳಕ್ಕೆ
1.ಕಾಗೆ ಬಂಗಾರವಿದು (3)
2.ಸರಸದಲ್ಲೂ ವಿರಸದಲ್ಲೂ ಕಾಣುತ್ತಿರುವ ದ್ರವ (2)
3.ವರಮಾನವುಳ್ಳ ಅರಣ್ಯ (2)
4.ಹುತ್ತ ಇಲ್ಲಿದೆ (3)
7.ಅತಿಯಾಗಿ ಮಾತಾಡುವವನು (5)
8.ಕಡುಬನ್ನು ಹಿಡಿದಿರುವ ಅನುಯಾಯಿ! (5)
9.ಉದಯ ಕಾಲದಲ್ಲಿ ಶೇಖರಿಸಿದ ನೀರು (3)
11.ಹೆಪ್ಪುಗಟ್ಟಿದ ವಸ್ತು (3)
12.ಕಂಬಿ ಹಿಂದೆ ತೋರಿದ ಬಿನ್ನಾಣ (2)
13.ತಿರುಗಿದಾಗ ದ್ವೇಷ ಕಾಣಿಸುತ್ತಿದೆಯಲ್ಲಾ! (2)



5999ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವ್ಯಾಘ್ರನಖ 3.ಕಲಾವಿದ
5.ತಲೆಬರಹ 7.ಠಸ್ಸೆ
8.ರವಿಕಿರಣ 10.ಮಾಸ
12.ಕಾಲಹರಣ 14.ಅಕಳಂಕ
15.ಮಧುಮಾಸ

ಮೇಲಿಂದ ಕೆಳಕ್ಕೆ:
1.ವ್ಯಾಸಪೀಠ 2.ಖಚಿತ
4.ವಿವಾಹ 6.ಬರ್ಬರ
9.ವಿರಹ 11.ಸಹವಾಸ
12.ಕಾರ್ಮಿಕ 13.ಣಸಮ

ಸುಡೊಕು 6385

	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6384 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,615
ಇಂದಿನ ಅಂತ್ಯ	23,332
▲	166
ದಿನದ ಗರಿಷ್ಠ	23,350

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹510

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹223-562
ದ್ವಿತಳಿ (ಬಿ.ವಿ)	₹285-688

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹198
ಗುಡ್ ಲಾಟ್	₹189

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,200-2,200
ಮಧ್ಯಮ	₹800-1,200
ಸಣ್ಣ	₹400-800

ಸಂಕ್ಷಿಪ್ತ ಸುದ್ದಿ

ಪಿಎಫ್‌ಆರ್‌ಡಿಎ ಅಧ್ಯಕ್ಷರಾಗಿ ರಾಮನ್ ನೇಮಕ

ನವದೆಹಲಿ (ಪಿಟಿಐ): ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಅಧ್ಯಕ್ಷರಾಗಿ ಎಸ್. ರಾಮನ್ ಅವರು ನೇಮಕವಾಗಿದ್ದಾರೆ.

ಹಾಲಿ ಅಧ್ಯಕ್ಷ ದೀಪಕ್ ಮೊಹಂತಿ ಅವರ ಅಧಿಕಾರಾವಧಿಯು ಮೇ ತಿಂಗಳಿಗೆ ಮುಕ್ತಾಯವಾಗಲಿದೆ. ಅವರಿಂದ ತೆರವಾಗುವ ಸ್ಥಾನಕ್ಕೆ ರಾಮನ್ ಅವರನ್ನು ನೇಮಕ ಮಾಡಲಾಗಿದೆ. ಪ್ರಸ್ತುತ ಅವರು ಡೆಪ್ಯುಟಿ ಸಿಎಜಿ ಆಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಹೊಸ ಅಧ್ಯಕ್ಷರ ಅಧಿಕಾರಾವಧಿಯು 5 ವರ್ಷ ಅಥವಾ ಅವರಿಗೆ 65 ವರ್ಷ ತುಂಬುವವರೆಗೆ ಇರಲಿದೆ. ಸಂಪುಟದ ನೇಮಕಾತಿಗಳ ಸಮಿತಿ ಈ ನೇಮಕಕ್ಕೆ ಅನುಮೋದನೆ ನೀಡಿದೆ. ರಾಮನ್ ಅವರು, 1991ರ ಬ್ಯಾಚ್‌ನ ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಸೇವೆಯ ಅಧಿಕಾರಿಯಾಗಿದ್ದಾರೆ.

ಅಮೂಲ್ ಆದಾಯ ಶೇ 14ರಷ್ಟು ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು (ಜಿಸಿಎಂಎಂಎಫ್) ₹65,911 ಕೋಟಿ ವಹಿವಾಟು ನಡೆಸಿದೆ ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಜಯನ್ ಮೆಹ್ತಾ ತಿಳಿಸಿದ್ದಾರೆ.

2023–24ರಲ್ಲಿ ₹59,259 ಕೋಟಿ ವಹಿವಾಟು ನಡೆಸಿತ್ತು. ಇದಕ್ಕೆ ಹೋಲಿಸಿದರೆ ಶೇ 11ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದ್ದಾರೆ.

2024–25ರಲ್ಲಿ ಅಮೂಲ್ ಬ್ರ್ಯಾಂಡ್‌ನ ಒಟ್ಟು ಆದಾಯವು ₹90 ಸಾವಿರ ಕೋಟಿ ಆಗಿದೆ. 2023–24ರಲ್ಲಿ ₹80 ಸಾವಿರ ಕೋಟಿ ಆದಾಯ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 14ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಗುಜರಾತ್‌ನ 18,600 ಗ್ರಾಮಗಳಲ್ಲಿ ಒಕ್ಕೂಟವು ಕಾರ್ಯ ನಿರ್ವಹಿಸುತ್ತಿದ್ದು, 36 ಲಕ್ಷ ರೈತರು ಇದರಡಿ ಇದ್ದಾರೆ. ಒಟ್ಟು 18 ಹಾಲು ಒಕ್ಕೂಟಗಳಿವೆ. ಪ್ರತಿದಿನ 3 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ.

ಮುಂಬೈ ಧಾರಣೆ

ಶೇಂಗಾ

02-04-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1358 (1348)
ಸೂರ್ಯಕಾಂತಿ ಎಣ್ಣೆ ಕಚ್ಚಾ	1365 (1355)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹90,600 (90,650)
ಬೆಳ್ಳಿ ಕೆ.ಜಿ ₹99,500 (99,600)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ತಯಾರಿಕಾ ಚಟುವಟಿಕೆ ಎಂಟು ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆಯು ಮಾರ್ಚ್ ತಿಂಗಳಲ್ಲಿ 8 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ತಿಳಿಸಿದೆ.

ಫೆಬ್ರುವರಿಯಲ್ಲಿ ಸೂಚ್ಯಂಕ 56.3 ರಷ್ಟಿತ್ತು. ಮಾರ್ಚ್‌ನಲ್ಲಿ 58.1 ದಾಖಲಾಗಿದೆ. ಹೆಚ್ಚಿದ ಬೇಡಿಕೆ ಮತ್ತು ಉತ್ಪಾದನೆಯಿಂದಾಗಿ ಸೂಚ್ಯಂಕವು ಏರಿಕೆ ಕಂಡಿದೆ ಎಂದು ತಿಳಿಸಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ಆಧಾರದ ಮೇಲೆ ಲೆಕ್ಕ ಹಾಕುವ ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಪ್ರಗತಿ ಎಂದು ಪರಿಗಣಿಸಲಾಗುತ್ತದೆ.

ಬೇಡಿಕೆ ಮತ್ತು ಉತ್ಪಾದನೆಯಲ್ಲಿನ ಇಳಿಕೆಯಿಂದಾಗಿ ಫೆಬ್ರುವರಿ ತಿಂಗಳಲ್ಲಿ ಈ ವಲಯದ ಪ್ರಗತಿಯು 14 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿತ್ತು.

ಸಾಧಕ–ಬಾಧಕ ಚರ್ಚಿಸಿ ಅನುಷ್ಠಾನ: ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿಕೆ

ವಾರ್ಷಿಕ ಟೋಲ್ ಪಾಸ್‌ಗೆ ಸಿದ್ಧತೆ

ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹ ವ್ಯವಸ್ಥೆಯ ಸರಳೀಕರಣಕ್ಕೆ ಮುಂದಾಗಿದೆ. ಇದರ ಭಾಗವಾಗಿ ಖಾಸಗಿ ವಾಹನಗಳಿಗೆ ವಾರ್ಷಿಕ ಟೋಲ್ ಪಾಸ್ ವಿತರಣೆಗೆ ಸಿದ್ಧತೆ ನಡೆದಿದೆ ಎಂದು ಕೇಂದ್ರ ಸರ್ಕಾರವು, ಬುಧವಾರ ಸಂಸತ್‌ಗೆ ತಿಳಿಸಿದೆ.

'ಖಾಸಗಿ ವಾಹನ ಮಾಲೀಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವುದು ಸರ್ಕಾರದ ಉದ್ದೇಶವಾಗಿದೆ. ಹಾಲಿ ಇರುವ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ (ಇಟಿಸಿ) ವ್ಯವಸ್ಥೆ ಬಳಸಿಕೊಂಡೇ ಈ ಟೋಲ್ ಪಾಸ್ ವಿತರಿಸಲಾಗುವುದು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಪಾಸ್ ವಿತರಣೆ ಬಗ್ಗೆ ಸರ್ಕಾರ ಸಿದ್ಧತೆಯಲ್ಲಿ ತೊಡಗಿದೆ. ಇದರಿಂದ ವಾಹನ ಮಾಲೀಕರಿಗೆ ಆಗುವ ಆರ್ಥಿಕ ಪರಿಣಾಮದ ಬಗ್ಗೆಯೂ ಚರ್ಚಿಸಲಾಗುತ್ತದೆ. ಇದರ ಸಾಧಕ- ಬಾಧಕದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ಪಾಸ್ ವಿತರಣಾ ವ್ಯವಸ್ಥೆಯು ಜಾರಿಗೆ ಬರಲಿದೆ ಎಂದು ವಿವರಿಸಿದ್ದಾರೆ.

ಹೆದ್ದಾರಿಗಳಲ್ಲಿ ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಆಧರಿತ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹಕ್ಕೆ (ಇಟಿಸಿ) ಚಾಲನೆ ನೀಡಲು ನಿರ್ಧರಿಸಲಾಗಿದೆ. ದೇಶದ ಆಯ್ದ ಹೆದ್ದಾರಿಗಳಲ್ಲಿ ಈ ವ್ಯವಸ್ಥೆ ಜಾರಿಗೆ ಕ್ರಮ ವಹಿಸಲಾಗುವುದು. ಹಾಲಿ ಇರುವ ಟೋಲ್ ಪ್ಲಾಜಾದ ಸೌಲಭ್ಯ ಬಳಸಿಕೊಂಡೇ ಈ ವ್ಯವಸ್ಥೆಯ ಅನುಷ್ಠಾನಕ್ಕೆ ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯಕ್ಕೆ ಸೇರಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಡಿ ಹೆದ್ದಾರಿಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ಹೇಳಿದ್ದಾರೆ.

ಹೆದ್ದಾರಿಗಳ ಅಭಿವೃದ್ಧಿ ಸಂಬಂಧ 2014–15ರಲ್ಲಿ ಖಾಸಗಿ ಸಹಭಾಗಿತ್ವದಡಿ ₹19,232 ಕೋಟಿ ಹೂಡಿಕೆಯಾಗಿತ್ತು. 2023–24ರಲ್ಲಿ ₹34,805 ಕೋಟಿ ಹೂಡಿಕೆಯಾಗಿದೆ ಎಂದು ವಿವರಿಸಿದ್ದಾರೆ.

ಕರ್ನಾಟಕದ ಟೋಲ್ ಆದಾಯ

(ಕೋಟಿಗಳಲ್ಲಿ)



ಶುಲ್ಕ ಸಂಗ್ರಹ: ಉತ್ತರ ಪ್ರದೇಶ ಅಗ್ರಸ್ಥಾನ

2024-25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿ ಅಂತ್ಯದವರೆಗೆ ರಾಷ್ಟ್ರೀಯ ಹೆದ್ದಾರಿ ಶುಲ್ಕದ ರೂಪದಲ್ಲಿ ಉತ್ತರ ಪ್ರದೇಶವು ₹7,060 ಕೋಟಿ ಆದಾಯ ಸಂಗ್ರಹಿಸಿದ್ದು, ರಾಜ್ಯಗಳ ಪೈಕಿ ಅಗ್ರಸ್ಥಾನದಲ್ಲಿದೆ.

ಇದೇ ಅವಧಿಯಲ್ಲಿ ಕರ್ನಾಟಕವು ₹4,002 ಕೋಟಿ ಸಂಗ್ರಹಿಸಿದೆ. 2023–24ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ವಾರ್ಷಿಕ ಆದಾಯ ಸಂಗ್ರಹವು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ.

ರಾಜಸ್ಥಾನ ₹5,967 ಕೋಟಿ ಹಾಗೂ ಮಹಾರಾಷ್ಟ್ರವು ₹5,115 ಕೋಟಿ ಆದಾಯ ಸಂಗ್ರಹಿಸಿದೆ ಎಂದು ಗಡ್ಕರಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಆರ್‌ಬಿಐ ಡೆಪ್ಯುಟಿ ಗವರ್ನರ್ ಆಗಿ ಪೂನಂ ಗುಪ್ತಾ ನೇಮಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿಯ (ಎನ್‌ಸಿಎಇಆರ್) ಮಹಾನಿರ್ದೇಶಕಿ ಪೂನಂ ಗುಪ್ತಾ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಡೆಪ್ಯುಟಿ ಗವರ್ನರ್ ಆಗಿ ನೇಮಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡೆಪ್ಯುಟಿ ಗವರ್ನರ್ ಆಗಿದ್ದ ಎಂ.ಡಿ. ಪಾತ್ರಾ ಅವರ ಅಧಿಕಾರಾವಧಿಯು ಜನವರಿಯಲ್ಲಿ ಮುಕ್ತಾಯಗೊಂಡಿತ್ತು. ಖಾಲಿಯಾಗಿದ್ದ ಈ ಹುದ್ದೆಗೆ ಪೂನಂ ಅವರನ್ನು ಮೂರು ವರ್ಷದ ಅವಧಿಗೆ ನೇಮಿಸಲು ಸಂಪುಟದ ನೇಮಕಾತಿಗಳ ಸಮಿತಿಯು ಒಪ್ಪಿಗೆ ನೀಡಿದೆ ಎಂದು ಹೇಳಿವೆ.

ಎನ್‌ಸಿಎಇಆರ್ ದೇಶದ ಆರ್ಥಿಕ ನೀತಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವ ಪ್ರಮುಖ ಸಂಸ್ಥೆಯಾಗಿದೆ.

ಪೂನಂ ಅವರು ಸದ್ಯ ಪ್ರಧಾನ ಮಂತ್ರಿ ಅವರ ಆರ್ಥಿಕ ಸಲಹಾ ಸಮಿತಿಯ ಸದಸ್ಯೆಯಾಗಿದ್ದಾರೆ. ಅಲ್ಲದೆ, 16ನೇ ಹಣಕಾಸು ಆಯೋಗದ ಸಲಹಾ ಮಂಡಳಿಯ ಸಂಚಾಲಕಿ ಕೂಡ ಆಗಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಅಮೆರಿಕದ ಮೇರಿಲ್ಯಾಡ್ ವಿ.ವಿಯಿಂದ ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪಡೆದಿದ್ದಾರೆ.

ಕೇಂದ್ರೀಯ ಭಂಡಾರಕ್ಕೆ 5 ಲಕ್ಷ ಟನ್ ಗೋಧಿ ಹಂಚಿಕೆ

ನವದೆಹಲಿ (ಪಿಟಿಐ): 2023ರ ನವೆಂಬರ್ 6ರಿಂದ ಪ್ರಸಕ್ತ ವರ್ಷದ ಜನವರಿವರೆಗೆ 'ಭಾರತ್ ಬ್ರ್ಯಾಂಡ್' ಅಡಿ ಕೇಂದ್ರೀಯ ಭಂಡಾರಕ್ಕೆ 5 ಲಕ್ಷ ಟನ್ ಗೋಧಿ ಹಂಚಿಕೆ ಮಾಡಲಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ಬುಧವಾರ ಲೋಕಸಭೆಗೆ ತಿಳಿಸಿದ್ದಾರೆ.

ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಕೇಂದ್ರೀಯ ಭಂಡಾರಕ್ಕೆ ಇಷ್ಟು ಪ್ರಮಾಣದ ಗೋಧಿ ನೀಡಲಾಗಿದೆ. ಈ ಏಜೆನ್ಸಿಯು ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಗೋಧಿ ಹಿಟ್ಟನ್ನು ಮಾರಾಟ ಮಾಡಿದೆ ಎಂದು ತಿಳಿಸಿದ್ದಾರೆ.

4 ಕೋಟಿ ಗೋಧಿ ಹಿಟ್ಟಿನ ಚೀಲಗಳನ್ನು (ಪ್ರತಿ ಚೀಲ 10 ಕೆ.ಜಿ) ಮಾರಾಟ ಮಾಡುವ ಗುರಿ ಹೊಂದಲಾಗಿತ್ತು. ಆದರೆ, 9 ಲಕ್ಷ ಚೀಲವಷ್ಟೇ ಮಾರಾಟವಾಗಿದೆ ಎಂದು ತಿಳಿಸಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಹೂಡಿಕೆದಾರರ ಸಂಪತ್ತು ₹3.54 ಲಕ್ಷ ಕೋಟಿ ವೃದ್ಧಿ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಹಾಗೂ ಆಟೊ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಬುಧವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಚೇತರಿಕೆ ಕಂಡಿವೆ.

ಭಾರತದ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿ ಸುಂಕ ಹೇರಿಕೆಗೆ ಮುಂದಾಗಿದ್ದಾರೆ. ಇದರ ಬಿಸಿ ತಟ್ಟಲಿರುವ ಬೆನ್ನಲ್ಲೇ ಷೇರು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ ಎಂದು ತಜ್ಞರು ಹೇಳಿದ್ದಾರೆ.

ಮಾರ್ಚ್‌ನಲ್ಲಿ ದೇಶದ ತಯಾರಿಕಾ ವಲಯದ ಬೆಳವಣಿಗೆಯು ಏರಿಕೆ ದಾಖಲಿಸಿದೆ. ಇದು ಮಾರುಕಟ್ಟೆಯು ಚೇತರಿಕೆ ಕಾಣಲು ನೆರವಾಗಿದೆ ಎಂದು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 592 ಅಂಶ ಏರಿಕೆ ಕಂಡು 76,716 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 166 ಅಂಶ ಹೆಚ್ಚಳ ಕಂಡು 23,332 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹3.54 ಲಕ್ಷ ಕೋಟಿ ವೃದ್ಧಿಯಾಗಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ, ಟೈಟನ್, ಇಂಡಸ್ ಇಂಡ್ ಬ್ಯಾಂಕ್, ಮಾರುತಿ, ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಭಾರ್ತಿ ಏರ್‌ಟೆಲ್ ಮತ್ತು ಎಚ್‌ಡಿಎಫ್‌ಸಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ನೆಸ್ಲೆ, ಪವರ್ ಗ್ರಿಡ್, ಅಲ್ಟ್ರಾಟೆಕ್ ಸಿಮೆಂಟ್, ಬಜಾಜ್ ಫಿನ್‌ಸರ್ವ್, ಎಲ್ ಆ್ಯಂಡ್ ಟಿ ಕಂಪನಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬೆಳ್ಳಿ ಧಾರಣೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆಯು ಸ್ಥಿರವಾಗಿದ್ದರೆ, ಬೆಳ್ಳಿ ದರವು ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99 ಪರಿಶುದ್ಧತೆ) ಬೆಲೆ ₹94,150 ಆಗಿದ್ದರೆ, ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರ ₹93,700 ಆಗಿದೆ. ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1 ಸಾವಿರ ಇಳಿಕೆಯಾಗಿದ್ದು, ₹1,01,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಹಾಸನ ಹಾಲು ಒಕ್ಕೂಟಕ್ಕೆ ₹9 ಕೋಟಿ ನಷ್ಟ'

ಪ್ರಜಾವಾಣಿ ವಾರ್ತೆ

ಎಚ್‌.ಡಿ. ರೇವಣ್ಣ

ಹಾಸನ: 'ಹಾಲಿನ ಖರೀದಿ ದರವನ್ನು ₹4 ಹೆಚ್ಚಿಸುವುದರಿಂದ ಹಾಸನ ಹಾಲು ಒಕ್ಕೂಟಕ್ಕೆ ನಿತ್ಯ ₹36 ಲಕ್ಷದಂತೆ ತಿಂಗಳಿಗೆ ₹9 ಕೋಟಿ ನಷ್ಟ ಉಂಟಾಗಲಿದೆ' ಎಂದು ಹಾಸನ ಹಾಲು ಒಕ್ಕೂಟದ ಅಧ್ಯಕ್ಷ, ಶಾಸಕ ಎಚ್.ಡಿ. ರೇವಣ್ಣ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಒಕ್ಕೂಟಕ್ಕೆ ಆಗುವ ನಷ್ಟದ ಕುರಿತು ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಚಿವರು ಹಾಗೂ ಕೆಎಂಎಫ್‌ಗೆ 2 ಬಾರಿ ಪತ್ರ ಬರೆದಿದ್ದೆ. ಆದರೂ ದರ ಹೆಚ್ಚಿಸಲಾಗಿದೆ. ಒಕ್ಕೂಟ ನಷ್ಟ ಅನುಭವಿಸಿದರೆ, ಅದಕ್ಕೆ ಸರ್ಕಾರ, ಕೆಎಂಎಫ್ ನೇರ ಹೊಣೆ' ಎಂದು ದೂರಿದರು.

'ದರ ಹೆಚ್ಚಿಸುವಂತೆ ಒಕ್ಕೂಟಕ್ಕೆ ಪತ್ರ ಬಂದಿದ್ದು, ಮುಖ್ಯಮಂತ್ರಿ ಆದೇಶವನ್ನು ನಾವು ಪಾಲಿಸಬೇಕಾಗುತ್ತದೆ' ಎಂದರು.

ವಿನಿಮಯ ದರ

$ ಡಾಲರ್	85.52
£ ಪೌಂಡ್	110.43
€ ಯುರೊ	92.28
¥ ಯೆನ್ (100ಕ್ಕೆ)	57

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1325 (1305)
ಸೂರ್ಯಕಾಂತಿ (ರಿಫೈನ್ಡ್)	₹1420 (1405)
ಪಾಮೋಲಿನ್	₹1360 (1350)

ಭಾರತ–ನೇಪಾಳ 10 ಒಪ್ಪಂದಕ್ಕೆ ಸಹಿ

ಕಠ್ಮಂಡು (ಪಿಟಿಐ): ಶಿಕ್ಷಣ, ಆರೋಗ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ 'ಸಮುದಾಯ ಅಭಿವೃದ್ಧಿ ಯೋಜನೆ'ಗಳನ್ನು ಜಾರಿ ಮಾಡಲು ಭಾರತವು ನೇಪಾಳಕ್ಕೆ ₹62.5 ಕೋಟಿ ಆರ್ಥಿಕ ನೆರವು ನೀಡಲಿದೆ. ಈ ಸಂಬಂಧ ಎರಡೂ ದೇಶಗಳು 10 ಒಪ್ಪಂದಗಳಿಗೆ ಸಹಿ ಹಾಕಿವೆ.

ಭಾರತದ ರಾಯಭಾರ ಕಚೇರಿಯು ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದ್ದು, 'ನೇಪಾಳದಲ್ಲಿ ಮೂರು ಶಾಲೆಗಳು, ಒಂದು ಮಠ, ಒಂದು ಇ-ಗ್ರಂಥಾಲಯ, ಎರಡು ಆಸ್ಪತ್ರೆಗಳನ್ನು ನಿರ್ಮಿಸಲು ಭಾರತ ನೆರವು ನೀಡುತ್ತಿದೆ' ಎಂದು ಹೇಳಿದೆ.

ಸಮುದಾಯ ಅಭಿವೃದ್ಧಿ ಯೋಜನೆಯಡಿ ಭಾರತವು ನೇಪಾಳದಲ್ಲಿ ಈವರೆಗೂ 573 ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಇವುಗಳಲ್ಲಿ 495 ಯೋಜನೆಗಳು ಪೂರ್ಣಗೊಂಡಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

ಜಾಬ್! ಜಾಬ್!! ಜಾಬ್!!! ಹೌಸ್ ಕೀಪಿಂಗ್ ಸಿಬ್ಬಂದಿ ಮತ್ತು ಸೂಪರ್‌ವೈಸರ್‌ಗಳು ಬೆಂಗಳೂರಿನ ಕಲ್ಯಾಣನಗರ ದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೆ ತುರ್ತಾಗಿ ಬೇಕಾಗಿದ್ದಾರೆ. ಸಂಬಳ : ಸಿಬ್ಬಂದಿಗೆ ರೂ.19300/-, ಸೂಪರ್‌ವೈಸರ್ಗೆ ರೂ. 23000/- ವಯಸ್ಸು : 18 ವರ್ಷದಿಂದ 39 ವರ್ಷಗಳವರೆಗೆ 9945779607, 9112959375, 9108946691

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

Cook

ಯುವಕ, ಯುವತಿಯರಿಗೆ ಹೋಟೆಲ್ ಕೆಲಸದಲ್ಲಿ ಅಡಿಗೆ ಮಾಡಲು ಮತ್ತು ಹೆಲ್ಪರ್ ಕೆಲಸ ಖಾಲಿ ಇದೆ. ಸಂಬಳ : 25,000 ರಿಂದ 30,000 ಸಾವಿರವರೆಗೆ.ಶೇಷಾದ್ರಿಪುರಂ, ಬೆಂಗಳೂರು. Ph: 9019626612

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 19.04.2025,15.05.2025 20.06.2025 7ದಿನಗಳು ನೈಮಿಷಾರಣ್ಯ,ಅಯೋಧ್ಯೆ,ಕಾಶಿ ಗಯಾ,ದೇವಘರ್(ಜಾರ್ಖಂಡ್). 01.05.2025 20.05.2025,01.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ)ಅಯೋಧ್ಯೆ 14.05.2025,28.05.2025 12ದಿನಗಳು ಆದಿಕೈಲಾಸ ಓಂಪರ್ವತ,ಪಾತಾಳ ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ. 27.04.2025 19.05.2025 12/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 25.04.2025,05.04.2025 0605.2025 7ದಿನಗಳು. ಪ್ರತಿವಾರ 1).ಊಟಿ, ಕೊಡೈಕೆನಾಲ್,ಪಳನಿ,ತಿರಪ್ಪೂರು 4ದಿನಗಳು. 2) 5ದಿನಗಳ ರಾಮೇಶ್ವರ ನವಗ್ರಹ,ಮದುರೈ ಕುಂಭಕೋಣಂ,ತಂಜಾವೂರು, ಇತರೆ.9743351212 9206979202 9606032154

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6 ದಿನಗಳು.23.04.2025 ರಾಮೇಶ್ವರಂ ಕನ್ಯಾಕುಮಾರಿ ಮಧುರೈ ಇತ್ಯಾದಿ 9000. 09.05.2025 ನವಗ್ರಹಮಂದಿರಗಳು ತಂಜಾವೂರು ಕುಂಬಕೋಣಂ ಇತ್ಯಾದಿ 18ಕ್ಷೇತ್ರಗಳು 6800. 9448390735, 9449721678

9ದಿನಗಳ ಕಾಶಿ ಅಯೋಧ್ಯ ಪ್ರಯಾಗ್‌ರಾಜ್. 11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಬಾಲಿ. 7 ದಿನಗಳ ಲೇಲಡಾಕ್ 11 ದಿನಗಳ ವಿಯೆಟ್ನಾಂ,ಕಾಂಬೋಡಿಯ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900099252 9900080793

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯಾ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

★ಶ್ರೇಯಸ್ ಟೂರ್ಸ್★ 06.04.2025,27.04.2025 18.05.2024 12/15/21ದಿನ ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025.25.04.2025 25.5.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಚಲಿಂಗ್ 14.05.2025 12ದಿನಗಳು ಆದಿಕೈಲಾಸಓಂಪರ್ವತ್ ನೈನಿತಾಲ್,ಭೀಮ್‌ತಾಲ್ ಜಾಗೇಶ್ವರ,ಪಾತಾಳೇಶ್ವರ. 9743351212 9206979202

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಕ್ಕಾಗಿ

BOOK YOUR JOB ADS IN PRAJAVANI ALL KARNATAKA ON WEDNESDAY + SUNDAY

@ 2244/-* FOR 15 WORDS

www.dhclassifieds.com

BOOK NOW

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9886213331

*Conditions apply

ಮಾಂಡಲೆಯಲ್ಲಿ ಬುಧವಾರವೂ ಎನ್‌ಡಿಆರ್‌ಎಫ್‌ನಿಂದ ಕಾರ್ಯಾಚರಣೆ ನಡೆಯಿತು — ಪಿಟಿಐ ಚಿತ್ರ

ಭೂಕಂಪ: ಮೃತರ ಸಂಖ್ಯೆ 2,886ಕ್ಕೆ ಏರಿಕೆ

ಸಗಾಯಂಗ್ (ರಾಯಿಟರ್ಸ್/ಎಎಫ್‌ಪಿ): ಮ್ಯಾನ್ಮಾರ್‌ನಲ್ಲಿ ಕಳೆದ ವಾರ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 2,886ಕ್ಕೆ ಏರಿದೆ.

ಗಾಯಾಳುಗಳ ಸಂಖ್ಯೆ 4,639ಕ್ಕೆ ಏರಿದ್ದು, 373 ಮಂದಿ ನಾಪತ್ತೆಯಾಗಿದ್ದಾರೆ ಎಂದು ಬುಧವಾರ ದೂರದರ್ಶನ ವರದಿ ಮಾಡಿದೆ. ಭೂಕಂಪದಲ್ಲಿ ಬದುಕುಳಿದವರು, ನಿರಾಶ್ರಿತರಾದವರು ನೆರವಿಗಾಗಿ ಮೊರೆ ಹೋಗುತ್ತಿರುವುದು ಕಂಡುಬರುತ್ತಿದೆ.

ಸೇನಾಡಳಿತದ ವಿರುದ್ಧ ಸಂಘರ್ಷಕ್ಕೆ ಇಳಿದಿದ್ದ ಬಂಡುಕೋರರ ಪ್ರಮುಖ ಸಶಸ್ತ್ರ ಗುಂಪುಗಳು ಯುದ್ಧದಿಂದ ತಾತ್ಕಾಲಿಕವಾಗಿ ಹಿಂದೆ ಸರಿದಿವೆ.

ಸಾವಿನ ಸಂಖ್ಯೆ ಹೆಚ್ಚುತ್ತಿರುವುದು ಹಾಗೂ ದೇಶವು ಬಿಕ್ಕಟ್ಟನ್ನು ಎದುರಿಸುತ್ತಿರುವ ಹೊತ್ತಲ್ಲೇ ಆಂತರಿಕ ಸಂಘರ್ಷಕ್ಕೆ ಇತಿಶ್ರೀ ಹೇಳುವಂತೆ ಸೇನಾಡಳಿತದ ಮೇಲೆ ಒತ್ತಡ ಹೆಚ್ಚಿದೆ.

ಎರಡು ದಿನ ಪ್ರಧಾನಿ ಮೋದಿ ಥಾಯ್ಲೆಂಡ್ ಪ್ರವಾಸ

ಬ್ಯಾಂಕಾಕ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಗುರುವಾರ ಥಾಯ್ಲೆಂಡ್‌ಗೆ ಬಂದಿಳಿಯಲಿದ್ದಾರೆ. 'ಬಂಗಾಳ ಕೊಲ್ಲಿ ಬಹುವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಸಂಘಟನೆ' (ಬಿಐಎಂಎಸ್‌ಟಿಇಸಿ) ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಇದೇ ವೇಳೆ ಥಾಯ್ಲೆಂಡ್‌ನ ಪ್ರಧಾನಿ ಪೆಟೊಂಗ್‌ತಾರ್ನ್ ಶಿನೊವಾರ್ಥ್ ಹಾಗೂ ರಾಜ ಮಹಾ ವಾಜಿರಲೊಂಗ್ ಕೋರ್ನ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಲಿದ್ದಾರೆ. ಥಾಯ್ಲೆಂಡ್‌ನಲ್ಲಿರುವ ಭಾರತೀಯರು ಮೋದಿ ಅವರಿಗೆ ಸ್ವಾಗತ ಕೋರಲಿದ್ದಾರೆ. ಮೋದಿ ಅವರು ಶುಕ್ರವಾರ ಬೆಳಿಗ್ಗೆ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

ಥಾಯ್ಲೆಂಡ್ ಸೇರಿದಂತೆ ಭಾರತ, ಬಾಂಗ್ಲಾದೇಶ, ಶ್ರೀಲಂಕಾ, ನೇಪಾಳ, ಮ್ಯಾನ್ಮಾರ್ ಹಾಗೂ ಭೂತಾನ್ ದೇಶಗಳ ನಾಯಕರು ಶೃಂಗಸಭೆಯಲ್ಲಿ ಭಾಗವಹಿಸಲಿವೆ. ಥಾಯ್ಲೆಂಡ್ ನೇತೃತ್ವದಲ್ಲಿ ಈ ಸಭೆ ನಡೆಯಲಿದೆ. ಸಭೆಯು 'ಬ್ಯಾಂಕಾಕ್ ವಿಷನ್ 2030' ಅನ್ನು ಅನುಮೋದಿಸಲಿದೆ ಎಂದು ನಿರೀಕ್ಷಿಸಲಾಗಿದೆ.

ಪ್ರಾಧ್ಯಾಪಕರ ಬಡ್ತಿಯಲ್ಲಿ ಅಕ್ರಮದ ಆರೋಪ

ಒಂದನೇ ಪುಟದಿಂದ...

2010ರ ನಿಯಮ ಬಳಕೆ ಏಕೆ?: 2018ರ ನಿಯಮದಂತೆ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ಪಡೆಯಲು ಪಿಎಚ್.ಡಿ. ಪಡೆದಿರಬೇಕು. ಅದಲ್ಲದೆ, ಯುಜಿಸಿಯಿಂದ ಅನುಮೋದಿತವಾದ ಪತ್ರಿಕೆಗಳಲ್ಲಿ ಪ್ರಕಟವಾದ 10 ಲೇಖನಗಳನ್ನು ಐಎಸ್‌ಎಸ್‌ಎನ್ (ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಸೀರಿಯಲ್ ನಂಬರ್) ಅಥವಾ ಐಎಸ್‌ಬಿಎನ್ ಸಂಖ್ಯೆ (ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಬುಕ್ ನಂಬರ್) ಸಹಿತ ಸಲ್ಲಿಸಬೇಕು. ಅಲ್ಲದೇ, ಸಹ ಪ್ರಾಧ್ಯಾಪಕರಾಗಿ ಮೂರು ವರ್ಷ ಕೆಲಸ ಮಾಡಿದ್ದಾಗ ಕಡ್ಡಾಯವಾಗಿ ಮೂರು ಲೇಖನಗಳನ್ನು ಪ್ರಕಟಿಸಿರಬೇಕು.

2010ರ ನಿಯಮದ ಪ್ರಕಾರ ಐದು ಲೇಖನಗಳು ಪ್ರಕಟವಾಗಿದ್ದರೆ ಸಾಕು. ಸಹ ಪ್ರಾಧ್ಯಾಪಕರಾಗಿ ಕೆಲಸ ಮಾಡುವಾಗ ಕಡ್ಡಾಯವಾಗಿ ಮೂರು ಲೇಖನ ಪ್ರಕಟವಾಗಿರಬೇಕು ಎಂಬ ಷರತ್ತು ಇಲ್ಲ. ಹಾಗಾಗಿ, 2021ರಲ್ಲಿ 2018ರ ಯುಜಿಸಿ ನಿಯಮದ ಅನ್ವಯ ಸಹ ಪ್ರಾಧ್ಯಾಪಕರಾಗಿ ಬಡ್ತಿ ಪಡೆದ ಬಹುತೇಕರು ನಿಗದಿತ ಸಂಖ್ಯೆಯ ಲೇಖನ ಪ್ರಕಟಿಸದ ಕಾರಣ ನಿಯಮಕ್ಕೆ ವಿರುದ್ಧವಾಗಿ 2010ರ ನಿಯಮದ ಅನ್ವಯ ಅರ್ಜಿ ಸಲ್ಲಿಸಿದ್ದಾರೆ. ಅಂತಹ ಅರ್ಜಿಗಳನ್ನು ಮಾನ್ಯ ಮಾಡಿರುವ ಕಾಲೇಜು ಶಿಕ್ಷಣ ಇಲಾಖೆಯು ಅವರನ್ನು ಬಡ್ತಿಗೆ ಪರಿಗಣಿಸಿದೆ.

ಲೋಕಸಭೆ: ವಕ್ಫ್ ಕೋಲಾಹಲ

ಒಂದನೇ ಪುಟದಿಂದ...

ವಕ್ಫ್ (ತಿದ್ದುಪಡಿ) ಮಸೂದೆ –2025ರ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಅವರು, 'ಬಿಜೆಪಿಯು ದೇಶವನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ಬಯಕೆ ಹೊಂದಿದೆ. ಅಲ್ಪಸಂಖ್ಯಾತರನ್ನು ನಾಶಮಾಡುವ ಸಂಘಪರಿವಾರದ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುವುದು ಬಿಜೆಪಿಯ ಉದ್ದೇಶ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯ ಆಡಳಿತದ ಅವಧಿಯಲ್ಲಿ ಹಲವು ಕಾನೂನುಗಳು ಜಾರಿಗೆ ಬಂದಿವೆ. ಆದರೆ ಬಿಜೆಪಿಯು, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯನ್ನು ನೀಡುವ, ನಿರುದ್ಯೋಗಿ ಯುವಕರ ಸಮಸ್ಯೆಗಳನ್ನು ಪರಿಹರಿಸುವ ಕಾನೂನನ್ನು ಜಾರಿಗೆ ತಂದಿಲ್ಲ ಎಂದು ವೇಣುಗೋಪಾಲ್ ಹೇಳಿದರು. 'ಯಾವ ಮಸೂದೆಗೆ ಆದ್ಯತೆ ದೊರೆತಿದೆ ಎಂಬುದನ್ನುಗಮನಿಸಬಹುದು. ಅವರಿಗೆ ಇರುವುದು ಒಂದೇ ಕಾರ್ಯಸೂಚಿ. ಅದು ಧರ್ಮದ ಹೆಸರಿನಲ್ಲಿ ಭಾರತ ಮಾತೆಯನ್ನು ವಿಭಜಿಸುವುದು' ಎಂದು ದೂರಿದರು.

ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರರ ನೇಮಕಕ್ಕೆ ಅವಕಾಶ ಕಲ್ಪಿಸಿರುವುದು ತಾರತಮ್ಯದ ಸ್ಪಷ್ಟ ನಿದರ್ಶನ ಎಂದು ಹೇಳಿದರು.

ಮಸೂದೆಯ ಪ್ರತಿಯನ್ನು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರು ಲೋಕಸಭೆಯಲ್ಲಿ ಹರಿದು ಸಾಂಕೇತಿಕವಾಗಿ ಪ್ರತಿಭಟನೆ ದಾಖಲಿಸಿದರು.

ಈ ಮಸೂದೆಯು ದೇಶದ ಸಂವಿಧಾನದ ಮೂಲ ಸ್ವರೂಪದ ಮೇಲಿನ ಹಲ್ಲೆಯಂತೆ ಇದೆ. ಇದು ದೇಶದ ಒಕ್ಕೂಟ ವ್ಯವಸ್ಥೆಯ ಮೇಲಿನ ಆಕ್ರಮಣವೂ ಹೌದು. ಸಂವಿಧಾನವನ್ನು ದುರ್ಬಲಗೊಳಿಸುವ, ಅಲ್ಪಸಂಖ್ಯಾತ ಸಮುದಾಯವನ್ನು ಅವಹೇಳನ ಮಾಡುವ, ಸಮಾಜವನ್ನು ಒಡೆಯುವ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಕಿತ್ತುಕೊಳ್ಳುವ ನಾಲ್ಕು ಪ್ರಮುಖ ಉದ್ದೇಶಗಳನ್ನು ಇದು ಹೊಂದಿದೆ ಎಂದು ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೊಯಿ ಹೇಳಿದರು.

ವ್ಯಕ್ತಿಯೊಬ್ಬ ವಕ್ಫ್‌ಗೆ ದಾನ ಮಾಡಬೇಕು ಎಂದಾದರೆ ಆತ ಕನಿಷ್ಠ ಐದು ವರ್ಷಗಳಿಂದ ಇಸ್ಲಾಂ ಧರ್ಮವನ್ನು ಪಾಲಿಸುತ್ತಿರಬೇಕು ಎಂದು ಮಸೂದೆಯಲ್ಲಿ ಹೇಳಿರುವ ಅಂಶವನ್ನು ಉಲ್ಲೇಖಿಸಿದ ಗೊಗೊಯಿ, 'ಅಲ್ಪಸಂಖ್ಯಾತರು ಇಂದು ಪ್ರಮಾಣಪತ್ರ ಹಿಡಿದು ತಮ್ಮ ಧಾರ್ಮಿಕ ಅಸ್ಮಿತೆಯನ್ನು ಸಾಬೀತು ಮಾಡಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದಾರೆ. ನಾಳೆ ಇತರ ಧಾರ್ಮಿಕ ನಂಬಿಕೆಗಳ ಜನರೂ ಇದೇ ರೀತಿ ಮಾಡಬೇಕಾಗುತ್ತದೆಯೇ' ಎಂದು ಪ್ರಶ್ನಿಸಿದರು.

'ಮಹಾಕುಂಭಮೇಳದ ಸಂದರ್ಭದಲ್ಲಿ ಮೃತಪಟ್ಟ ಅಥವಾ ಕಣ್ಮರೆಯಾದ ಹಿಂದೂಗಳನ್ನು ಗುರುತಿಸುವ ವಿಚಾರವನ್ನು ಮರೆಮಾಚುವ ಉದ್ದೇಶದಿಂದ ಬಿಜೆಪಿಯು, ಮುಸ್ಲಿಮರ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆರೋಪಿಸಿದರು.

ಕೆಲವು ತಿದ್ದುಪಡಿಗಳು

ಬುಡಕಟ್ಟು ಸಮುದಾಯಗಳ ಆಸ್ತಿ ಹಾಗೂ ಸಂರಕ್ಷಿತ ಸ್ಮಾರಕಗಳನ್ನು ವಕ್ಫ್ ಆಸ್ತಿ ಎಂದು ಘೋಷಿಸಲು ಅವಕಾಶ ಇಲ್ಲದ ರೀತಿಯಲ್ಲಿ ಮಸೂದೆಗೆ ತಿದ್ದುಪಡಿ ತರಲಾಗಿದೆ. ಹೊಸ ಕಾನೂನು ಜಾರಿಗೆ ಬಂದ ನಂತರದಲ್ಲಿ, ನಿಗದಿತ ಆರು ತಿಂಗಳಲ್ಲಿ ವಕ್ಫ್ ಆಸ್ತಿಗಳನ್ನು ಅಧಿಕೃತ ಪೋರ್ಟಲ್‌ನಲ್ಲಿ ನೋಂದಾಯಿಸಲು ಹೆಚ್ಚುವರಿಯಾಗಿ ಆರು ತಿಂಗಳನ್ನು ಮಾತ್ರ ವಕ್ಫ್ ನ್ಯಾಯಮಂಡಳಿಯು ನೀಡುತ್ತದೆ ಎಂಬ ತಿದ್ದುಪಡಿಯನ್ನು ಕೂಡ ತರಲಾಗಿದೆ. ಆದರೆ, ಹೀಗೆ ಹೆಚ್ಚುವರಿ ಅವಧಿ ಪಡೆಯುವ ಮೊದಲು ಮುತವಲ್ಲಿಯು, ನಿಗದಿತ ಆರು ತಿಂಗಳಲ್ಲಿ ನೋಂದಣಿ ಮಾಡಿಸಲು ಆಗದೆ ಇದ್ದುದಕ್ಕೆ ಕಾರಣ ತಿಳಿಸಬೇಕು.

'ಮಸೂದೆ ವಿರುದ್ಧ ಕೋರ್ಟ್‌ಗೆ ಮೊರೆ'

ಒಂದನೇ ಪುಟದಿಂದ...

'ಆತ್ಮಸಾಕ್ಷಿಯುಳ್ಳ ನಾಗರಿಕರೆಲ್ಲರೂ ಈ ಕರಾಳ ಮಸೂದೆಯನ್ನು ವಿರೋಧಿಸಬೇಕು. ಈ ಮಸೂದೆ ವಿರುದ್ಧ ದೇಶವ್ಯಾಪಿ ಪ್ರತಿಭಟನೆ ನಡೆಸಲು ಎಐಎಂಪಿಎಲ್‌ಬಿ ಕಟಿಬದ್ಧವಾಗಿದೆ' ಎಂದರು. 'ಮಂಡಳಿಯ ಸದಸ್ಯರು ರೈತರ ಆಂದೋಲನದ ಮಾದರಿಯಲ್ಲಿ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲಿದ್ದಾರೆ. ಈ ಕರಾಳ ಕಾನೂನನ್ನು ಕೊನೆಗೊಳಿಸುವುದು ನಮ್ಮ ಗುರಿ ಯಾಗಿದೆ' ಎಂದು ಎಐಎಂಪಿಎಲ್‌ಬಿ ವಕ್ತಾರ ಮೊಹಮ್ಮದ್ ಅಲಿ ಮೊಹ್ಸಿನ್ ಹೇಳಿದರು.

ಕರ್ನಾಟಕದ ವಿಚಾರ: ಬಿಜೆಪಿ–ಕಾಂಗ್ರೆಸ್ ಜಟಾಪಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ರಾಜಕೀಯ ನಾಯಕರು ಸಾವಿರಾರು ಕೋಟಿ ರೂಪಾಯಿ ಮೌಲ್ಯದ ವಕ್ಫ್ ಆಸ್ತಿಗಳನ್ನು ಅತಿಕ್ರಮಿಸಿ ಕೊಂಡಿದ್ದಾರೆ ಎಂಬ ವಿಚಾರವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ಲೋಕಸಭೆಯಲ್ಲಿ ಬುಧವಾರ ಆರೋಪ–ಪ್ರತ್ಯಾರೋಪ ನಡೆಯಿತು.

ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಚರ್ಚೆಯಲ್ಲಿ ಭಾಗವಹಿಸಿದ ಬಿಜೆಪಿಯ ಅನುರಾಗ್ ಸಿಂಗ್ ಠಾಕೂರ್, ಕರ್ನಾಟಕದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ವಕ್ಫ್ ಕಾನೂನುಗಳ ಮೂಲಕ ವರ್ಷಕ್ಕೆ ₹440 ಕೋಟಿ ವರಮಾನ ಗಳಿಸುತ್ತಿದೆ ಎಂದರು.

'ಅವರ ಪಕ್ಷದ ನಾಯಕರ ಹೆಸರು ವಕ್ಫ್ ಹಗರಣದಲ್ಲಿ ಉಲ್ಲೇಖವಾಗಿದೆ' ಎಂದು ಠಾಕೂರ್ ಹೇಳಿದರು. ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್, 'ಠಾಕೂರ್ ಅವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ, ನಮ್ಮ ಪಕ್ಷದ ಮುಖ್ಯಸ್ಥರ ಮೇಲೆ ವಾಗ್ದಾಳಿ ನಡೆಸಿದ್ದಾರೆ. ಅವರು ಜಾತಿವಾದ ತೋರಿಸುತ್ತಿದ್ದಾರೆ' ಎಂದರು.

ಇದಕ್ಕೆ ತಿರುಗೇಟು ನೀಡಿದ ಅನುರಾಗ್, 'ನಾನು ಯಾವುದೇ ಜಾತಿಯ ಹೆಸರು ಉಲ್ಲೇಖಿಸಿಲ್ಲ. ಆದರೆ ನೀವು ನಿಮ್ಮ ನಿಜವಾದ ಬಣ್ಣ ತೋರಿಸಿದ್ದೀರಿ. ನಿಮಗೆ ಪಾರದರ್ಶಕತೆ ಬೇಕಿಲ್ಲ. ಏಕೆಂದರೆ ನೀವು ವಕ್ಫ್ ಆಸ್ತಿಗಳನ್ನು ದುರ್ಬಳಕೆ ಮಾಡಿಕೊಂಡಿದ್ದೀರಿ' ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೂಡ ಕರ್ನಾಟಕದ ಬಗ್ಗೆ ಉಲ್ಲೇಖಿಸಿದರು. ಕಲಬುರಗಿ ಮತ್ತು ವಿಜಯಪುರದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ವಕ್ಫ್ ಆಸ್ತಿಗಳನ್ನು ಅತಿಕ್ರಮಣ ಮಾಡಿಕೊಳ್ಳಲಾಗಿದೆ ಎಂದರು. ರಾಜ್ಯದಲ್ಲಿ ಬೆಲೆಬಾಳುವ ಆಸ್ತಿಯನ್ನು ಆಯ್ದ ಕೆಲವರು ಅತಿಕ್ರಮಿಸಿ ಕೊಂಡಿದ್ದಾರೆ ಎಂದು ವರದಿಗಳು ಹೇಳುತ್ತವೆ ಎಂದೂ ಶಾ ವಿವರಿಸಿದರು.

ಪಕ್ಷಾಂತರ ಮಾಡಿದರೂ ಉಪಚುನಾವಣೆ ನಡೆಯದು ಎಂಬ ಹೇಳಿಕೆಗೆ ತರಾಟೆ

ತೆಲಂಗಾಣ ಸಿ.ಎಂ ಮಾತಿಗೆ 'ಸುಪ್ರೀಂ' ಕಿಡಿ

ನವದೆಹಲಿ (ಪಿಟಿಐ): 'ಬಿಆರ್‌ಎಸ್ ಪಕ್ಷದ ಶಾಸಕರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದರೂ ಅವರ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯುವುದಿಲ್ಲ' ಎಂದು ತೆಲಂಗಾಣ ಮುಖ್ಯಮಂತ್ರಿ ಹೇಳಿಕೆ ನೀಡಿದ್ದಾರೆ ಎನ್ನಲಾದ ಮಾತಿಗೆ ಸುಪ್ರೀಂ ಕೋರ್ಟ್ ತೀವ್ರ ತರಾಟೆ ತೆಗೆದುಕೊಂಡಿದೆ.

'ಮುಖ್ಯಮಂತ್ರಿ ಅವರು ಈ ಮಾತನ್ನು ಸದನದಲ್ಲಿಯೇ ಹೇಳಿದ್ದಲ್ಲಿ, ಅದು ಸಂವಿಧಾನದ 10ನೇ ಪರಿಚ್ಛೇದದ ಅಣಕವಾಗಿದೆ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠ ಕಟುವಾಗಿ ಹೇಳಿತು.

ವಿಧಾನಸಭೆ ಸದಸ್ಯರು ಪಕ್ಷಾಂತರ ಮಾಡಿದಲ್ಲಿ ಶಾಸಕ ಸ್ಥಾನದಿಂದ ಅವರನ್ನು ಅನರ್ಹಗೊಳಿಸುವ ನಿಯಮಗಳನ್ನು ಈ ಪರಿಚ್ಛೇದವು ಒಳಗೊಂಡಿದೆ.

ತೆಲಂಗಾಣದ ಮುಖ್ಯಮಂತ್ರಿ ಎ. ರೇವಂತರೆಡ್ಡಿ ಅವರು ಮಾರ್ಚ್ 26ರಂದು ವಿಧಾನಸಭೆಯಲ್ಲಿ ಈ ಮಾತು ಆಡಿದ್ದಾರೆ ಎಂದು ಬಿಆರ್‌ಎಸ್ ಮುಖಂಡರ ಪರ ವಕೀಲ ಪೀಠದ ಗಮನಕ್ಕೆ ತಂದರು. ಮುಖ್ಯಮಂತ್ರಿ ಮಾತಿಗೆ ನ್ಯಾಯಮೂರ್ತಿ ಬಿ.ಆರ್. ಗವಾಯಿ ಆಕ್ಷೇಪ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಸಂವಿಧಾನದ 10ನೇ ಪರಿಚ್ಛೇದದ ಅಣಕ
- ಸದನದಲ್ಲಿ ಆಡುವ ಮಾತಿಗೆ ಪಾವಿತ್ರ್ಯ

'ರಾಮ್‌ಲೀಲಾ ಮೈದಾನದಲ್ಲಿ ನಿಂತು ಏನೋ ಹೇಳುವುದಕ್ಕೂ, ಸದನದಲ್ಲಿ ಆಡುವ ಮಾತುಗಳಿಗೂ ವ್ಯತ್ಯಾಸವಿದೆ. ರಾಜಕಾರಣಿ ಸದನದಲ್ಲಿ ಆಡುವ ಮಾತಿಗೆ ಪಾವಿತ್ರ್ಯ ಇರುತ್ತದೆ' ಎಂದು ನ್ಯಾಯಮೂರ್ತಿ ಒಂದು ಹಂತದಲ್ಲಿ ಕಟುವಾಗಿ ಹೇಳಿದರು.

'ಸಚಿವರು ಸದನದಲ್ಲಿ ಆಡಿರುವ ಮಾತುಗಳನ್ನು ಆಧರಿಸಿ ಒಟ್ಟು ಪರಿಸ್ಥಿತಿಯನ್ನು ವ್ಯಾಖ್ಯಾನಿಸಿರುವುದಕ್ಕೆ ಸಂಬಂಧಿಸಿದ ತೀರ್ಪುಗಳೂ ಇವೆ' ಎಂದು ನ್ಯಾಯಮೂರ್ತಿ ಅವರ ವಕೀಲರ ಗಮನಕ್ಕೆ ತಂದರು.

ಕಾಂಗ್ರೆಸ್ ಪಕ್ಷಕ್ಕೆ ಪಕ್ಷಾಂತರ ಮಾಡಿರುವ ಬಿಆರ್‌ಎಸ್ ಶಾಸಕರಿಗೆ ನೋಟಿಸ್ ಜಾರಿ ಮಾಡಲು ಸ್ಪೀಕರ್ ವಿಳಂಬ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಅರ್ಜಿಯ ವೇಳೆ ಸುಪ್ರೀಂ ಕೋರ್ಟ್ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

'ಸ್ಪೀಕರ್ ಅವರೇ.. ನಿಮ್ಮ ಮೂಲಕ ಈ ಸದಸ್ಯರಿಗೆ ಉಪ ಚುನಾವಣೆ ಕುರಿತು ಆತಂಕ ಪಡುವ ಅಗತ್ಯವಿಲ್ಲ ಎಂದು ನಾನು ಭರವಸೆ ನೀಡುತ್ತೇನೆ. ಬಿಆರ್‌ಎಸ್ ಶಾಸಕರು ಪಕ್ಷ ಬದಲಿಸಿದರೂ ಉಪ ಚುನಾವಣೆ ನಡೆಯದು ಎಂದು ಮುಖ್ಯಮಂತ್ರಿ ರೇವಂತ ರೆಡ್ಡಿ ಸದನದಲ್ಲಿ ಹೇಳಿದ್ದಾರೆ' ಎಂದು ಬಿಆರ್‌ಎಸ್ ನಾಯಕ ಪಡಿ ಕೌಶಿಕ್ ರೆಡ್ಡಿ ವಕೀಲ ಸುಂದರಂ ಅವರು ಪೀಠದ ಗಮನಕ್ಕೆ ತಂದರು.

ಸ್ಪೀಕರ್ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಮಧ್ಯಪ್ರವೇಶಿಸಿ, 'ಸುಪ್ರೀಂ ಕೋರ್ಟ್ ಮುಂದೆ ಈಗ ವಿಚಾರಣೆಯಲ್ಲಿ ಇರುವುದು ವಿಧಾನಸಭೆಯ ನಡಾವಳಿಯಲ್ಲ' ಎಂದು ಹೇಳಿದರು.

'ನಾನು ಇಲ್ಲಿ ಸಿ.ಎಂ ಅವರನ್ನು ಪ್ರತಿನಿಧಿಸುತ್ತಿಲ್ಲ' ಎಂದೂ ರೋಹಟಗಿ ಹೇಳಿದರು. ಆಗ ನ್ಯಾಯಮೂರ್ತಿ ಗವಾಯಿ ಅವರು, 'ರೋಹಟಗಿ ಅವರೇ ಒಮ್ಮೆ ನೀವು ಸಿ.ಎಂ ಅವರನ್ನೂ ಪ್ರತಿನಿಧಿಸಿದ್ದೀರಿ. ಅವರಿಗೆ ಎಚ್ಚರಿಸಿ. ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡುವುದನ್ನು ನಾವು ನಿಧಾನ ಮಾಡುತ್ತಿದ್ದೇವೆ ಎಂಬುದರ ಅರಿವು ನಮಗಿದೆ' ಎಂದು ಹೇಳಿದರು.

'ಸ್ಪೀಕರ್ ಕ್ರಮ ಕೈಗೊಳ್ಳದಿದ್ದರೆ, ಕೋರ್ಟ್ ಕೈಗೊಳ್ಳಲಿದೆ...'

ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ್ದ ಬಿಆರ್‌ಎಸ್ ಶಾಸಕರ ಅನರ್ಹತೆ ಕೋರಿದ್ದ ಅರ್ಜಿಗೆ ಸಂಬಂಧಿಸಿ ನೋಟಿಸ್ ಜಾರಿ ಮಾಡಲು 10 ತಿಂಗಳು ತೆಗೆದುಕೊಂಡ ತೆಲಂಗಾಣ ವಿಧಾನಸಭೆ ಸ್ಪೀಕರ್ ಅವರ ನಡೆಗೆ 'ಸುಪ್ರೀಂ' ತರಾಟೆ ತೆಗೆದುಕೊಂಡಿತು.

'ಸ್ಪೀಕರ್ ಅವರು ಕ್ರಮ ಕೈಗೊಳ್ಳುವುದೇ ಇಲ್ಲ ಎಂದಾದರೆ, ಈ ದೇಶದ ಕೋರ್ಟ್ ಕ್ರಮ ಕೈಗೊಳ್ಳಲಿದೆ. ಕೋರ್ಟ್‌ಗೆ ಈ ಸಂಬಂಧ ಅಧಿಕಾರವಷ್ಟೇ ಅಲ್ಲ, ದೇಶದ ಸಂವಿಧಾನವನ್ನು ರಕ್ಷಿಸುವ ಕರ್ತವ್ಯವೂ ಇದೆ' ಎಂದು ಸುಪ್ರೀಂ ಕೋರ್ಟ್ ಚಾಟಿ ಬೀಸಿತು.

ಸ್ಪೀಕರ್ ಪರ ವಕೀಲ ಮುಕುಲ್ ರೋಹಟಗಿ ಅವರು, 'ಶಾಸಕರ ಅನರ್ಹತೆ ಕೋರಲಾಗಿದ್ದ ಮೊದಲ ಅರ್ಜಿ 2024ರ ಮಾರ್ಚ್ 18ರಲ್ಲಿ ಸಲ್ಲಿಸಿದ್ದರು. ನಂತರ ಕ್ರಮವಾಗಿ ಏಪ್ರಿಲ್ 2, 8ರಂದು ಎರಡು ಅರ್ಜಿಗಳು ಸಲ್ಲಿಕೆಯಾಗಿವೆ' ಎಂದು ತಿಳಿಸಿದರು.

ಆದರೂ ಮೊದಲ ನೋಟಿಸ್ ಜಾರಿ ಏಕೆ ವಿಳಂಬವಾಯಿತು ಎಂದು ಕೋರ್ಟ್ ಪ್ರಶ್ನಿಸಿದಾಗ, 'ಈ ಸಂಬಂಧಿತ ಅರ್ಜಿ ಹೈಕೋರ್ಟ್ ವಿಚಾರಣೆಯಲ್ಲಿತ್ತು. ಹೀಗಾಗಿ, ಅನರ್ಹತೆ ಅರ್ಜಿಗೆ ಸಂಬಂಧಿಸಿ ನೋಟಿಸ್ ಜಾರಿ ಮಾಡಿರಲಿಲ್ಲ' ಎಂದು ಮುಕುಲ್ ರೋಹಟಗಿ ತಿಳಿಸಿದರು.

'ಹಾಗಿದ್ದರೆ, ಹೈಕೋರ್ಟ್‌ನ ಮುಂದೆ ವಿಚಾರಣೆ ಬಾಕಿ ಇದ್ದಾಗಲೇ ಸ್ಪೀಕರ್ ಏಕೆ ನೋಟಿಸ್ ನೀಡಿದರು. ಇದಕ್ಕಾಗಿ ನಾವು ನ್ಯಾಯಾಂಗ ನಿಂದನೆ ನೋಟಿಸ್ ನೀಡಬಹುದೇ' ಎಂದು ನ್ಯಾಯಮೂರ್ತಿ ಗವಾಯಿ ಪ್ರಶ್ನಿಸಿದರು. ವಿಚಾರಣೆ ಏ.3ರಂದು ಮುಂದುವರಿಯಲಿದೆ.

ಕಚ್ಚತೀವು ದ್ವೀಪ ಮರಳಿ ಪಡೆಯಿರಿ ತಮಿಳುನಾಡು

ಚೆನ್ನೈ (ಪಿಟಿಐ): 'ಶ್ರೀಲಂಕಾಕ್ಕೆ ಬಿಟ್ಟು ಕೊಟ್ಟಿರುವ ಕಚ್ಚತೀವು ದ್ವೀಪವನ್ನು ಭಾರತ ಸರ್ಕಾರವು ಮರಳಿ ಪಡೆದು ಕೊಳ್ಳಬೇಕು' ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸುವ ನಿರ್ಣಯವನ್ನು ಸರ್ವಾನುಮತದಿಂದ ತಮಿಳುನಾಡು ವಿಧಾನಸಭೆ ಬುಧವಾರ ಅಂಗೀಕರಿಸಿತು.

'ರಾಜ್ಯದ ಮೀನುಗಾರರು ಶ್ರೀಲಂಕಾ ನೌಕಾಪಡೆಯಿಂದ ಹಿಂಸೆ ಅನುಭವಿಸುತ್ತಿದ್ದಾರೆ. ಕಚ್ಚತೀವು ದ್ವೀಪವನ್ನು ಭಾರತವು ಮರಳಿ ಪಡೆದುಕೊಳ್ಳುವುದರಿಂದ ಮಾತ್ರವೇ ನಮ್ಮ ಮೀನುಗಾರರಿಗೆ ರಕ್ಷಣೆ ಸಿಗಲು ಸಾಧ್ಯ. ಇದೊಂದೇ ಪರಿಹಾರ ಇರುವುದು' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ವಿಧಾನಸಭೆಗೆ ತಿಳಿಸಿದರು.

ಕಾಂಗ್ರೆಸ್, ಬಿಜೆಪಿ ಹಾಗೂ ಎಐಎಡಿಎಂಕೆ ಪಕ್ಷಗಳೂ ಈ ನಿರ್ಣಯವನ್ನು ಬೆಂಬಲಿಸಿದವು.

ಕಾಮ್ರಾ ಕಾರ್ಯಕ್ರಮದಲ್ಲಿ ಭಾಗಿ ಬ್ಯಾಂಕ್ ಉದ್ಯೋಗಿಗೆ ಸಮನ್ಸ್

ಮುಂಬೈ (ಪಿಟಿಐ): ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಕುರಿತು ಅಪಹಾಸ್ಯ ಮಾಡಿ ಹಾಡು ಹಾಡಿದ್ದಾರೆ ಎನ್ನಲಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬ್ಯಾಂಕ್ ಉದ್ಯೋಗಿಯೊಬ್ಬರಿಗೆ ಸಾಕ್ಷಿಯಾಗಿ ವಿಚಾರಣೆಗೆ ಹಾಜರಾಗಲು ಮುಂಬೈ ಪೊಲೀಸರು ಸಮನ್ಸ್ ನೀಡಿದ್ದಾರೆ.

ಕಾಮ್ರಾ ಅವರ ವಿರುದ್ಧ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. 'ಕಾರ್ಯಕ್ರಮದಲ್ಲಿ ಭಾಗವಹಿಸಿದ ಯಾರಿಗೂ ಸಮನ್ಸ್ ನೀಡಲಾಗಿಲ್ಲ' ಎಂದು ಪೊಲೀಸರು ಮಂಗಳವಾರ ತಿಳಿಸಿದ್ದರು.

ಸಮನ್ಸ್ ನೀಡುವುದಕ್ಕೂ ಮೊದಲು ಬ್ಯಾಂಕ್ ಉದ್ಯೋಗಿಗೆ ಕರೆ ಮಾಡಿದ್ದ ಪೊಲೀಸರು, ತಕ್ಷಣ ಠಾಣೆಗೆ ಬರುವಂತೆ ತಿಳಿಸಿದ್ದರು. ಏಪ್ರಿಲ್ 6ರವರೆಗೆ ಪ್ರವಾಸದ ಮೇಲೆ ಬೇರೆಡೆ ಪ್ರಯಾಣಿಸಿದ್ದ ಉದ್ಯೋಗಿಯು ತಮ್ಮ ಪ್ರವಾಸವನ್ನು ಅರ್ಧಕ್ಕೆ ನಿಲ್ಲಿಸಿ, ತಕ್ಷಣವೇ ಮುಂಬೈಗೆ ಹಿಂತಿರುಗಿದರು. ನಂತರ, ಮತ್ತೊಮ್ಮೆ ಉದ್ಯೋಗಿಯನ್ನು ಸಂಪರ್ಕಿಸಿದ್ದ ಪೊಲೀಸರು, 'ತಕ್ಷಣ ಬರುವ ಅಗತ್ಯವಿಲ್ಲ' ಎಂದಿದ್ದಾರೆ.

> ನನ್ನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕಾಗಿ ನಿಮಗಾದ (ಬ್ಯಾಂಕ್ ಉದ್ಯೋಗಿ) ತೊಂದರೆಗೆ ಕ್ಷಮೆ ಕೋರುತ್ತೇನೆ. ನೀವು ಮುಂದಿನ ಬಾರಿ ಭಾರತದಲ್ಲಿ ಎಲ್ಲಿಯಾದರೂ ಪ್ರವಾಸ ಮಾಡಬೇಕೆಂದು ನಿರ್ಧರಿಸಿದರೆ, ನನಗೆ ಇ–ಮೇಲ್ ಮಾಡಿ
>
> **ಕುನಾಲ್ ಕಾಮ್ರಾ**
> ಹಾಸ್ಯ ಕಲಾವಿದ

ಮೂರನೇ ಸಮನ್ಸ್: ಏಪ್ರಿಲ್ 5ಕ್ಕೆ ವಿಚಾರಣೆಗೆ ಹಾಜರಾಗುವಂತೆ ಕುನಾಲ್ ಕಾಮ್ರಾ ಅವರಿಗೆ ಮುಂಬೈ ಪೊಲೀಸರು ಮೂರನೇ ಬಾರಿಗೆ ಬುಧವಾರ ಸಮನ್ಸ್ ಜಾರಿ ಮಾಡಿದರು.

ಮಾಸಿಕ ₹8 ಸಾವಿರ ಸಂಬಳ ಪಡೆಯುವ ಕಾರ್ಮಿಕ

₹4 ಕೋಟಿ ತೆರಿಗೆ ಪಾವತಿಗೆ ನೋಟಿಸ್

ಅಲೀಗಢ (ಪಿಟಿಐ): ಇವರು ಕರಣ್ ಕುಮಾರ್ (34). ಕಟ್ಟಡ ಕಾರ್ಮಿಕ. ಇವರ ತಿಂಗಳ ಸಂಬಳ ₹15 ಸಾವಿರ. ₹33.88 ಕೋಟಿ ತೆರಿಗೆ ಬಾಕಿ ಇದೆ ಎಂದು ಹೇಳಿ ಇವರಿಗೆ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿದೆ.

ಮೋಹಿತ್ ಕುಮಾರ್ ಅವರು ಸಾರಿಗೆ ಕಂಪನಿಯೊಂದರಲ್ಲಿ ಸಣ್ಣ–ಪುಟ್ಟ ಕೆಲಸ ಮಾಡುವವರು. ಇವರ ತಿಂಗಳ ಸಂಬಳ ₹8,500. ಆದರೆ, ₹3.87 ಕೋಟಿ ತೆರಿಗೆ ಬಾಕಿ ಇದೆ ಎಂದು ಇಲಾಖೆ ನೋಟಿಸ್ ನೀಡಿದೆ.

ರಯೀಸ್ ಅಹಮ್ಮದ್ ಅವರು ಜ್ಯೂಸ್ ಅಂಗಡಿ ಇಟ್ಟುಕೊಂಡಿದ್ದಾರೆ. ದಿನಕ್ಕೆ ₹500ರಿಂದ ₹600 ವ್ಯಾಪಾರವಾಗುತ್ತದೆ. ₹7.79 ಕೋಟಿ ತೆರಿಗೆ ಬಾಕಿ ಇದೆ ಎಂದು ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿದೆ.

ಮಾರ್ಚ್ ತಿಂಗಳೊಂದರಲ್ಲಿಯೇ ಮೂವರಿಗೂ ನೋಟಿಸ್ ನೀಡಲಾಗಿದೆ. ನೋಟಿಸ್ ನೋಡಿ ಮೂವರು ಆತಂಕಗೊಂಡಿದ್ದಾರೆ. ತಿಂಗಳಿಗೆ ಇಷ್ಟು ಸಂಬಳ ಬರುವವರು ಆದಾಯ ತೆರಿಗೆ ಪಾವತಿ ಮಾಡಬೇಕಿಲ್ಲ.

ಆಧಾರ್ ಕಾರ್ಡ್ ಸಂಖ್ಯೆ ಅಥವಾ ಪ್ಯಾನ್ ಕಾರ್ಡ್ ಸಂಖ್ಯೆಗಳಂಥ ವೈಯಕ್ತಿಕ ದಾಖಲೆಗಳ ಮಾಹಿತಿ ಸೋರಿಕೆಯಿಂದಾಗಿ ಇಂಥ ಪ್ರಕರಣಗಳ ನಡೆಯುತ್ತಿವೆ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ.

ಮೂವರೂ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಹೇಗಾಯಿತು ಕಳವು?

ದೆಹಲಿಯ ಮಹಾವೀರ್ ಎಂಟರ್‌ಪ್ರೈಸಸ್ ಎನ್ನುವ ಕಂಪನಿಯು ಕಟ್ಟಡ ಕಾರ್ಮಿಕ ಕರಣ್ ಅವರ ಆಧಾರ್ ಮತ್ತು ಪ್ಯಾನ್‌ಕಾರ್ಡ್ ಸಂಖ್ಯೆಯನ್ನು ಬಳಸಿಕೊಂಡು, ಅವರ ಹೆಸರಿನಲ್ಲಿ ಪೆಟ್ರೋಲಿಯಂ ಉತ್ಪನ್ನ ಹಾಗೂ ಉಕ್ಕು ಮಾರಾಟದಲ್ಲಿ ಹಣಕಾಸಿನ ವ್ಯವಹಾರ ಮಾಡಿದೆ.

ಎಂ.ಕೆ. ಟ್ರೇಡರ್ಸ್ ಎನ್ನುವ ಕಂಪನಿ ಕೂಡ ಮೋಹಿತ್ ಅವರ ಆಧಾರ್ ಕಾರ್ಡ್ ಬಳಸಿಕೊಂಡು ಹಣಕಾಸಿನ ವ್ಯವಹಾರ ಮಾಡುತ್ತಿತ್ತು. ಮೋಹಿತ್ ಅವರು ತಾವು ಕೆಲಸ ಮಾಡುವ ಕಂಪನಿಯ ಮಾಲೀಕರಿಗೆ ಈ ವಿಷಯ ತಿಳಿಸಿದ್ದಾರೆ. ಮಾಲೀಕರು ಜಿಎಸ್‌ಟಿ ವಕೀಲರ ಬಳಿ ಮೋಹಿತ್ ಅವರನ್ನು ಕರೆದುಕೊಂಡು ಹೋದರು. ಈ ಬಳಿಕ ಈ ಎಲ್ಲ ಮಾಹಿತಿ ತಿಳಿಯಿತು. ಆದಾಯ ತೆರಿಗೆ ಇಲಾಖೆ ಡಿಜಿಟಲ್ ದಾಖಲೆಗಳ ಪ್ರಕಾರ, ಎಂ.ಕೆ. ಟ್ರೇಡರ್ಸ್ ಕಂಪನಿಯು 2020ರಿಂದ ವ್ಯವಹಾರ ನಡೆಸುತ್ತಿದೆ.

ಅಮಿತ್ ಎನ್ನುವವರಿಗೂ ಇಂಥದ್ದೇ ಅನುಭವವಾಗಿದೆ. ದೆಹಲಿಯಲ್ಲಿ ಉದ್ಯೋಗ ನಿಮಿತ್ತ 2020ರಲ್ಲಿ ಕಂಪನಿಯೊಂದಕ್ಕೆ ಆಧಾರ್ ಕಾರ್ಡ್ ಸಮೇತ ಕೆಲವು ವೈಯಕ್ತಿಕ ಮಾಹಿತಿಗಳನ್ನು ನೀಡಿದ್ದಾರೆ. 'ಇಲ್ಲಿ ತಮ್ಮ ವಿವರಗಳು ಕಳವಾಗಿವೆ' ಎನ್ನುತ್ತಾರೆ ಅವರು.

ಸಂಕ್ಷಿಪ್ತ ಸುದ್ದಿ

ಸಂಧಾನ ಸಭೆ ಮೂರು ಷರತ್ತು ವಿಧಿಸಿದ ಕುಕಿ

ಇಂಫಾಲ್ (ಪಿಟಿಐ): ಸಂಘರ್ಷ ಪೀಡಿತ ಮಣಿಪುರದಲ್ಲಿ ಶಾಂತಿಯುತ ವಾತಾವರಣ ಪುನರ್‌ಸ್ಥಾಪಿಸಲು ಕೇಂದ್ರ ಗೃಹ ಸಚಿವಾಲಯವು ಏ.5ರಂದು ಕರೆದಿರುವ ಸಂಧಾನ ಸಭೆಗೂ ಮುನ್ನ, ಕುಕಿ ಸಮುದಾಯವು ಮೂರು ಷರತ್ತುಗಳನ್ನು ವಿಧಿಸಿದೆ.

ಕುಕಿ ಸಮುದಾಯದ ಪ್ರಾಬಲ್ಯವಿರುವ ಪ್ರದೇಶಕ್ಕೆ ಮೈತೇಯಿ ಸಮುದಾಯದವರು ಹಾಗೂ ಮೈತೇಯಿ ಸಮುದಾಯದ ಪ್ರಾಬಲ್ಯವಿರುವ ಪ್ರದೇಶಕ್ಕೆ ಕುಕಿ ಸಮುದಾಯದವರು ಪ್ರವೇಶಿಸುವಂತಿಲ್ಲ. ಸಂಧಾನ ಮಾತುಕತೆಯು ಯಶಸ್ವಿಯಾಗಬೇಕಿದ್ದಲ್ಲಿ ಕನಿಷ್ಠ ಆರು ತಿಂಗಳು ಸಂಘರ್ಷ ನಡೆಯದಂತೆ ನೋಡಿಕೊಳ್ಳಬೇಕು. ಕದನ ವಿರಾಮದ ಅವಧಿಯಲ್ಲಿ, ಎರಡೂ ಸಮುದಾಯಗಳ ನಡುವೆ ಔಪಚಾರಿಕ ಹಾಗೂ ಅರ್ಥಪೂರ್ಣ ಮಾತುಕತೆಗಳು ನಡೆಯಬೇಕು. ಇವು ಕುಕಿ ಸಮುದಾಯವು ವಿಧಿಸಿರುವ ಮೂರು ಷರತ್ತುಗಳು.

ಕಾಂಗ್‌ಪೋಕ್‌ಪಿ ಜಿಲ್ಲೆಯಲ್ಲಿ ಮಂಗಳವಾರ ನಡೆದ ಕುಕಿ ಸಮುದಾಯದ ಸಮಾಲೋಚನಾ ಸಭೆಯಲ್ಲಿ, ಪೂರ್ವ ಷರತ್ತು ವಿಧಿಸುವ ತೀರ್ಮಾನಕ್ಕೆ ಬರಲಾಯಿತು ಎಂದು ಕುಕಿ ಜೋ ಮಂಡಳಿಯ (ಕೆಜಡ್‌ಸಿ) ಅಧ್ಯಕ್ಷ ಹೆನ್ಲಿಯಾಂತಂಗ್ ತಂಗ್ಲೆಟ್ ತಿಳಿಸಿದರು.

ಅಮೆರಿಕ ಪ್ರಜೆ ಬಂಧನ

ಪೋರ್ಟ್ ಬ್ಲೇರ್ (ಪಿಟಿಐ): ದಕ್ಷಿಣ ಅಂಡಮಾನ್‌ನ ತರ್ಮುಗ್ಲಿ ದ್ವೀಪದಲ್ಲಿ ಬುಡಕಟ್ಟು ಜನರಿರುವ ನಿಷೇಧಿತ ಮೀಸಲು ಪ್ರದೇಶಕ್ಕೆ ಭೇಟಿ ನೀಡಿದ ಆರೋಪದ ಮೇಲೆ ಅಮೆರಿಕದ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ.

ಮಾರ್ಚ್ 27ರಂದು ಪೋರ್ಟ್ ಬ್ಲೇರ್‌ಗೆ ಭೇಟಿ ನೀಡಿದ್ದ ಮಿಖೈಲೊ ವಿಕ್ಟೊರ್ವಿಚ್ ಪಾಲಿಯಕೋವ್‌ನನ್ನು (24) ಮಾರ್ಚ್ 31ರಂದು ಬಂಧಿಸಲಾಗಿದೆ.

'ನಿಷೇಧಿತ ಪ್ರದೇಶಕ್ಕೆ ಭೇಟಿ ನೀಡುವ ಅವರ ಉದ್ದೇಶದ ಬಗ್ಗೆ ತನಿಖೆ ನಡೆದಿದೆ. ದ್ವೀಪದಲ್ಲಿ ಎಲ್ಲೆಲ್ಲಿಗೆ ಭೇಟಿ ನೀಡಿದ್ದಾರೆ ಎಂಬ ಬಗ್ಗೆಯೂ ಮಾಹಿತಿ ಸಂಗ್ರಹಿಸುತ್ತಿದ್ದೇವೆ. 2024ರಲ್ಲಿ ಎರಡು ಬಾರಿ ದ್ವೀಪ ಸಮೂಹಕ್ಕೆ ಭೇಟಿ ನೀಡಿದ್ದಾರೆ ಎಂಬುದು ಗೊತ್ತಾಗಿದೆ' ಎಂದು ಡಿಜಿಪಿ ಧಾಲೀವಾಲ್ ತಿಳಿಸಿದ್ದಾರೆ.

ನ್ಯಾ. ದಿನೇಶ್ ವರ್ಗ ವಕೀಲರ ವಿರೋಧ

ಕೋಲ್ಕತ್ತ (ಪಿಟಿಐ): ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಕಲ್ಕತ್ತ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದ್ದನ್ನು ಇಲ್ಲಿನ ವಕೀಲರ ಸಂಘಗಳು ವಿರೋಧಿಸಿವೆ. ನ್ಯಾಯಮೂರ್ತಿಯ ಪ್ರಮಾಣ ವಚನ ಕಾರ್ಯಕ್ರಮ ಬಹಿಷ್ಕರಿಸುವುದಾಗಿ ಮುಖ್ಯ ನ್ಯಾಯಮೂರ್ತಿಗೆ ತಿಳಿಸಿವೆ.

'ದೇಶದಲ್ಲಿಯೇ ಅತ್ಯಂತ ಹಳೆಯ ನ್ಯಾಯಾಲಯ ಇದಾಗಿದೆ. ಈ ಹೈಕೋರ್ಟ್‌ಗೆ ಪ್ರಶ್ನಾರ್ಹ ವ್ಯಕ್ತಿತ್ವ ಇರುವ ಮತ್ತು ಅತ್ಯಂತ ಕಡಿಮೆ ಅವಧಿಯಲ್ಲಿ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸಿದ ವ್ಯಕ್ತಿಯೊಬ್ಬರು ನ್ಯಾಯಮೂರ್ತಿಯಾಗಿ ಬರುವುದು ಸ್ವೀಕಾರಾರ್ಹವಲ್ಲ' ಎಂದಿದ್ದಾರೆ.

ನ್ಯಾಯಮೂರ್ತಿ ದಿನೇಶ್ ನಿರ್ವಹಿಸುವ ಯಾವ ವಿಚಾರಣೆಯಲ್ಲಿಯೂ ನಾವು ಭಾಗವಹಿಸುವುದಿಲ್ಲ ಎಂದಿರುವ ವಕೀಲರು, 'ಹೆಚ್ಚುವರಿ ಸಾಲಿಸಿಟರಲ್ ಜನರಲ್ ಹಾಗೂ ಅಡ್ವೊಕೇಟ್ ಜನರಲ್ ಅವರು ಕೂಡ ವಾದ ಮಂಡಿಸಬಾರದು' ಎಂದು ಮನವಿ ಮಾಡಿದ್ದಾರೆ.

ಊಟಿ, ಕೊಡೈಕೆನಾಲ್‌ನಲ್ಲಿ ಇ–ಪಾಸ್

ಹೊಸ ವ್ಯವಸ್ಥೆಯನ್ನು ವಿರೋಧಿಸಿ ಅಂಗಡಿಗಳ ಬಂದ್; ಪರದಾಡಿದ ಪ್ರವಾಸಿಗರು

ಪ್ರಜಾವಾಣಿ ವಾರ್ತೆ

ಚೆನ್ನೈ: ಪ್ರವಾಸಿ ವಾಹನಗಳ ಸಂಖ್ಯೆ ನಿಯಂತ್ರಿಸುವ ಹೊಸ 'ಇ– ಪಾಸ್' ವ್ಯವಸ್ಥೆಯು ಪ್ರವಾಸಿ ಪಟ್ಟಣಗಳಾದ ಊಟಿ ಮತ್ತು ಕೊಡೈಕೆನಾಲ್‌ನಲ್ಲಿ ಮೊದಲ ಬಾರಿಗೆ ಜಾರಿಗೆ ಬಂದಿದೆ.

ಪ್ರಾಕೃತಿಕ ಸುಂದರ ತಾಣ ನೀಲಗಿರಿ ಜಿಲ್ಲೆಯೊಳಗೆ ವಾರದ ದಿನಗಳಲ್ಲಿ ಆರು ಸಾವಿರ ವಾಹನಗಳಿಗೆ ಮಾತ್ರ ಪ್ರವೇಶ ಸಿಗಲಿದೆ. ವಾರಾಂತ್ಯದಲ್ಲಿ ಈ ಸಂಖ್ಯೆ ಎಂಟು ಸಾವಿರಕ್ಕೆ ಮಿತಿಗೊಳಿಸಲಾಗಿದೆ.

ಹೊಸ ವ್ಯವಸ್ಥೆಯು ಜೂನ್ 30ರವರೆಗೆ ಜಾರಿಯಲ್ಲಿರಲಿದೆ. ಮದ್ರಾಸ್ ಹೈಕೋರ್ಟ್ ಆದೇಶದಂತೆ ಜಾರಿಗೆ ತರಲಾದ ಈ ವ್ಯವಸ್ಥೆ ವಿರೋಧಿಸಿ, ನೀಲಗಿರಿ ಜಿಲ್ಲೆಗಳಲ್ಲಿ ವ್ಯಾಪಾರಿಗಳು ಅಂಗಡಿಮುಂಗಟ್ಟುಗಳನ್ನು ಬುಧವಾರ ಮುಚ್ಚಿದ್ದರು.

ಈ ಎರಡು ಪಟ್ಟಣಗಳು, ಕಳೆದ ಕೆಲವು ವರ್ಷಗಳಲ್ಲಿ, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಭಾರಿ ಸಂಖ್ಯೆಯಲ್ಲಿ ಭೇಟಿ ನೀಡಿದ್ದ ಪ್ರವಾಸಿಗರ ದಟ್ಟಣೆಯಿಂದ ನಲುಗಿದ್ದವು. ಪ್ರವಾಸಿ ತಾಣಗಳ ಪರಿಸರದ ಮೇಲೆ ಇದು ಗಂಭೀರ ಪರಿಣಾಮ ಬೀರಿತ್ತು.

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಊಟಿಯಲ್ಲಿ ಇ– ಪಾಸ್ ವ್ಯವಸ್ಥೆ ವಿರೋಧಿಸಿ ವ್ಯಾಪಾರಿಗಳು ಬುಧವಾರ ಅಂಗಡಿಗಳನ್ನು ಮುಚ್ಚಿದ್ದರು. ಆಟೊಗಳು ಮತ್ತು ಪ್ರವಾಸಿ ಟ್ಯಾಕ್ಸಿಗಳು ರಸ್ತೆಗಿಳಿಯಲಿಲ್ಲ. ಇದರಿಂದ ಪ್ರವಾಸಿಗರು ಸಮಸ್ಯೆ ಎದುರಿಸಿದರು ಪಿಟಿಐ ಚಿತ್ರ

ಊಟಿಗೆ 2024ರ ಏಪ್ರಿಲ್‌ನಲ್ಲಿ ಪ್ರವಾಸಿಗರು ಭಾರಿ ಸಂಖ್ಯೆಯಲ್ಲಿ ಭೇಟಿ ನೀಡಿದ್ದು, ವಾರಾಂತ್ಯದಲ್ಲಿ ಸುಮಾರು 20 ಸಾವಿರ ವಾಹನಗಳು ಪ್ರವೇಶಿಸಿದ್ದವು. ಇದರಿಂದಾಗಿ ವಾಹನಗಳ ಸಂಖ್ಯೆಯ ಮೇಲೆ ನಿಗಾ ಇಡಲು 'ಇ-ಪಾಸ್' ವ್ಯವಸ್ಥೆ ಪರಿಚಯಿಸುವಂತೆ ಹೈಕೋರ್ಟ್ ಆದೇಶಿಸಿತ್ತು.

ಹವಾಮಾನ ಬದಲಾವಣೆಯ ಪರಿಣಾಮಗಳು ಊಟಿಯಲ್ಲಿ ಈಗಾಗಲೇ ಕಾಣಬರುತ್ತಿವೆ. 2024ರ ಜನವರಿಯಲ್ಲಿ ಶೂನ್ಯ ತಾಪಮಾನ ದಾಖಲಾಗಿತ್ತು. ಬೇಸಿಗೆಯಲ್ಲಿ ತಾಪಮಾನವು 29 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಇದು 1951ರ ನಂತರದಲ್ಲಿ ದಾಖಲಾದ ಅತಿ ಹೆಚ್ಚಿನ ಉಷ್ಣಾಂಶವೆನಿಸಿದೆ.

ಕೊಡೈಕೆನಾಲ್ ಮತ್ತು ಊಟಿಯಲ್ಲಿನ ವಾಹನ ಸಂಚಾರ ಸಾಮರ್ಥ್ಯದ ಬಗ್ಗೆ ವಿಸ್ತೃತ ಅಧ್ಯಯನ ನಡೆಸಿ ಸಂಚಾರ ನಿರ್ವಹಣೆಗೆ ಸೂಕ್ತ ಶಿಫಾರಸು ಮಾಡಲು ರಾಜ್ಯ ಸರ್ಕಾರವು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮದ್ರಾಸ್ (ಐಐಟಿ-ಎಂ) ಮತ್ತು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (ಐಐಎಂ-ಬಿ) ನೆರವು ಪಡೆಯುತ್ತಿದೆ.

2,500 ಕೆ.ಜಿ ಮಾದಕ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ

ಮುಂಬೈ: ಹಿಂದೂ ಮಹಾಸಾಗರದಲ್ಲಿ ಬೃಹತ್ ಕಾರ್ಯಾಚರಣೆ ನಡೆಸಿದ ಭಾರತೀಯ ನೌಕಾಪಡೆಯ 'ಐಎನ್‌ಎಸ್ ತರ್ಕಶ್' ಯುದ್ಧ ನೌಕೆಯು 2,500 ಕೆ.ಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದೆ.

'ಪಶ್ಚಿಮ ಹಿಂದೂ ಮಹಾಸಾಗರದಲ್ಲಿ ಮಾರ್ಚ್ 31ರಂದು ಮಾದಕವಸ್ತುಗಳನ್ನು ಜಪ್ತಿ ಮಾಡಲಾಯಿತು' ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಇತ್ತೀಚೆಗೆ ನಡೆದ ಅತಿ ದೊಡ್ಡ ಪ್ರಮಾಣದ ಜಪ್ತಿ ಇದಾಗಿದೆ.

ಅನುಮಾನಾಸ್ಪದ ನೌಕೆಗಳ ಚಲನ ವಲನಗಳ ಬಗ್ಗೆ ನೌಕಾಪಡೆಯ ಪಿ81 ಯುದ್ಧವಿಮಾನವು ಗಸ್ತು ತಿರುಗುತ್ತಿದ್ದ 'ಐಎನ್‌ಎಸ್ ತರ್ಕಶ್' ನೌಕೆಗೆ ಮಾಹಿತಿ ನೀಡಿತ್ತು. ತಕ್ಷಣ ಕಾರ್ಯಾಚರಣೆ ಆರಂಭಿಸಿದ 'ತರ್ಕಶ್' ಅನುಮಾನಾಸ್ಪದ ನೌಕೆಗಳ ಪರಿಶೀಲನೆ ನಡೆಸಿತು. ತನ್ನ ಹೆಲಿಕಾಪ್ಟರ್ ಮೂಲಕ ಅನುಮಾನಾಸ್ಪದ ನೌಕೆಯೊಂದನ್ನು ಪತ್ತೆ ಹಚ್ಚಿತು. ನೌಕಾಪಡೆಯ ಕಮಾಂಡೊಗಳು ಮತ್ತು ವಿಶೇಷ ತಂಡ ಆ ನೌಕೆಯಲ್ಲಿ ಶೋಧ ನಡೆಸಿದಾಗ 2386 ಕೆ.ಜಿ ಹಾಶಿಶ್ ಮತ್ತು 121 ಕೆ.ಜಿ ಹೆರಾಯಿನ್ ಸೇರಿದಂತೆ 2500 ಕೆ.ಜಿಗೂ ಅಧಿಕ ಪ್ರಮಾಣದ ಮಾದಕವಸ್ತುಗಳು ಪತ್ತೆಯಾಗಿವೆ.

ಮಾದಕ ವಸ್ತುಗಳನ್ನು ಸಾಗಿಸುತ್ತಿದ್ದ ನೌಕೆಯೊಂದನ್ನು ಭಾರತೀಯ ನೌಕಾಪಡೆಯು ವಶಪಡಿಸಿಕೊಂಡಿತು

ಜಾತಿ ತಾರತಮ್ಯ: ದೇವಸ್ಥಾನದ ನೌಕರ ರಾಜೀನಾಮೆ

ತಿರುವನಂತಪುರ: ಕೇರಳದ ಇರಿಂಜಲಕುಡದಲ್ಲಿರುವ ಶ್ರೀ ಕೂಡಲ್ಮಾಣಿಕ್ಯಂ ದೇವಾಲಯದ 'ಕಳಕಮ್' (ಹೂವಿನ ಹಾರ ತಯಾರಿಕೆ ಮತ್ತು ಸಂಬಂಧಿತ ಕೆಲಸಗಳು) ಹುದ್ದೆಗೆ ನೇಮಕಗೊಂಡ ನಂತರ ಎದುರಿಸಿದ ಜಾತಿ ತಾರತಮ್ಯದಿಂದಾಗಿ ಹಿಂದೂ-ಎಳವ ಸಮುದಾಯದ ಯುವ ನೌಕರರೊಬ್ಬರು ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ತಿರುವನಂತಪುರಂ ಮೂಲದ ಬಿ.ಎ. ಬಾಲು ರಾಜೀನಾಮೆ ನೀಡಲು ವೈಯಕ್ತಿಕ ಸಮಸ್ಯೆ ಕಾರಣವೆಂದು ಉಲ್ಲೇಖಿಸಿದ್ದರೂ ದೇವಾಲಯದ ತಂತ್ರಿಗಳು ಜಾತಿ ತಾರತಮ್ಯ ಮಾಡಿದ್ದಾರೆಂಬ ಆರೋಪವೇ ಇದಕ್ಕೆ ಕಾರಣ ಎಂದು ಹೇಳಲಾಗಿದೆ.

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು

Fax : 0862232272
Commissioner : 08262-232272
Help Line : 08262-232222, E-Mail Id: comm_ckg@yahoo.com
Website: www.chickmagalurcity.gov.in

ಸಂಖ್ಯೆ:ಸಿಎಂಸಿ/ಸಿಕೆಎಂ/ಎಸ್.ಎಫ್.ಸಿ ವಿಶೇಷ/ಸಿ.ಆರ್/68/2024–25 ದಿನಾಂಕ: 29.03.2025.

ಇ–ಪ್ರೊಕ್ಯೂರ್‌ಮೆಂಟ್ ಮರುಟೆಂಡರ್ ಪ್ರಕಟಣೆ

2024–25ನೇ ಎಸ್.ಎಫ್.ಸಿ ವಿಶೇಷ ಅನುದಾನ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಷರತ್ತುಗಳಿಗೊಳಪಟ್ಟು ಇ–ಪ್ರೊಕ್ಯೂಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ

ಕ್ರ.ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮೀಸಲಾತಿ	ಇ.ಎಂ.ಡಿ (ರೂಗಳಲ್ಲಿ)
1	DMA/2024-25/RD/WORK_INDENT37906	95.25	ಸಾಮಾನ್ಯ	1,61,500/–
2	DMA/2024-25/RD/WORK_INDENT37907	99.55	ಎಸ್.ಟಿ	84,400/–
3	DMA/2024-25/RD/WORK_INDENT37908	95.55	ಪ್ರವರ್ಗ–2ಎ	81,000/-
4	DMA/2024-25/RD/WORK_INDENT37909	93.60	ಎಸ್.ಸಿ	79,300/-
5	DMA/2024-25/RD/WORK_INDENT37910	93.25	ಪ್ರವರ್ಗ–1ಎ	79,000/-
6	DMA/2024-25/RD/WORK_INDENT37912	70.65	ಸಾಮಾನ್ಯ	1.19.600/-
7	DMA/2024-25/RD/WORK_INDENT37913	86.80	ಸಾಮಾನ್ಯ	1,47,000/-
8	DMA/2024-25/RD/WORK_INDENT37914	94.85	ಸಾಮಾನ್ಯ	1,61,000/-
9	DMA/2024-25/RD/WORK INDENT37915	94.45	ಸಾಮಾನ್ಯ	1,60,000/-
10	DMA/2024-25/RD/WORK_INDENT37917	85.55	ಸಾಮಾನ್ಯ	1,45,000/-
11	DMA/2024-25/RD/WORK_INDENT37918	90.50	ಎಸ್.ಸಿ.	76,700/-

ಟೆಂಡರ್ ಫಾರಂ ಬೆಲೆ– ಇ–ಪ್ರೊಕ್ಯೂರ್‌ಮೆಂಟ್‌ನಂತೆ ಕಾಲಾವಧಿ–06 ತಿಂಗಳು ಮಳೆಗಾಲ ಹೊರತು ಪಡಿಸಿ

1. ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15–04–2025 ರ 17.00** ಗಂಟೆಯವರೆಗೆ. 2. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.04.2025 ರ 17.30 ಗಂಟೆಗೆ** 3. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 17–04–2025 ರ 17.30 ಗಂಟೆಗೆ** ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಗಮನಿಸಬಹುದಾಗಿದೆ.

ಸಹಿ/ (ಶ್ರೀಮತಿ ಸುಜಾತ ಶಿವಕುಮಾರ್) ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– (ಶ್ರೀಮತಿ ಅನು ಮಧುಕರ್) ಉಪಾಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/– (ಶ್ರೀ ಬಿ.ಸಿ.ಬಸವರಾಜು ಕೆ.ಎಂ.ಎ.ಎಸ್) ಪೌರಾಯುಕ್ತರು ನಗರಸಭೆ, ಚಿಕ್ಕಮಗಳೂರು

ನಾಗರಬಾವಿಯಲ್ಲಿ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಹೊಸ ಮಳಿಗೆ ಆರಂಭ

ಬೆಂಗಳೂರು: ಹೆಸರಾಂತ ಚಿನ್ನಾಭರಣ ಮಾರಾಟ ಸಂಸ್ಥೆ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಇತ್ತೀಚೆಗೆ ನಗರದ ನಾಗರಬಾವಿ 80 ಅಡಿ ಮುಖ್ಯ ರಸ್ತೆ, 2ನೇ ಹಂತದಲ್ಲಿ ನೂತನ ಶೋರೂಮ್ ಅನ್ನು ತೆರೆದಿದೆ.

ಮಲಬಾರ್ ಸಮೂಹದ ಈ ಸುಸಜ್ಜಿತ ಮಳಿಗೆಯು ವ್ಯಾಪಕ ಶ್ರೇಣಿಯಲ್ಲಿ ಆಭರಣ ವಿನ್ಯಾಸಗಳು ಮತ್ತು ಸಂಗ್ರಹಗಳನ್ನು ಹೊಂದಿದೆ. ಚಿನ್ನ, ವಜ್ರ, ಪ್ಲಾಟಿನಂ ಹಾಗೂ ಜೆಮ್‌ಸ್ಟೋನ್ ಆಭರಣಗಳ ಸಂಗ್ರಹ ಗ್ರಾಹಕರ ಅಭಿರುಚಿ ಮತ್ತು ಕಾಲಮಾನಕ್ಕೆ ತಕ್ಕಂತಿವೆ. ಈ ಭಾಗದ ಗ್ರಾಹಕರಿಗೆ ಅಭೂತಪೂರ್ವ ಶಾಪಿಂಗ್ ಅನುಭವ ನೀಡಲಿದೆ.

ಖ್ಯಾತ ಅಭಿನೇತ್ರಿ ರಚಿತಾ ರಾಮ್ ಅವರು ಬೆಂಗಳೂರಿನ ಈ ಮಳಿಗೆಯನ್ನು ಉದ್ಘಾಟಿಸಿದ್ದು, ಇದು ಉದ್ಯಾನನಗರದ 21ನೇ ಮಳಿಗೆ ಹಾಗೂ ಕರ್ನಾಟಕದ 41ನೇ ಶೋರೂಮ್ ಎಂಬ ಖ್ಯಾತಿ ಪಡೆದಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನೂತನ ಮಳಿಗೆ ಉದ್ಘಾಟನೆ ಬಗ್ಗೆ ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಅವರು ಮಾತನಾಡಿ, 'ಬೆಂಗಳೂರಿನ ಜನತೆಗೆ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಪಾರಂಪರಿಕ ಹಾಗೂ ನವ್ಯ ಆಭರಣಗಳನ್ನು ಪರಿಚಯಿಸುತ್ತಿರುವುದಕ್ಕೆ ಸಂತೋಷವಾಗುತ್ತಿದೆ. ಇದು ನಗರದ ಶ್ರೀಮಂತ ಸಂಸ್ಕೃತಿ ಮತ್ತು ಕರಕುಶಲತೆಯ ಸಂಪ್ರದಾಯವನ್ನು ಹಿಮ್ಮಡಿಗೊಳಿಸುತ್ತದೆ. ವಿಶ್ವ ದರ್ಜೆಯ ಶಾಪಿಂಗ್ ಅನುಭವ ನೀಡುವ ನಮ್ಮ ಧ್ಯೇಯದ ವಿಸ್ತರಣೆಯ ಹೆಜ್ಜೆಯಾಗಿದೆ. ಇಲ್ಲಿನ ಜನರಿಂದ ಆತ್ಮೀಯ ಸ್ವಾಗತ ದೊರೆಯುತ್ತಿರುವುದು ಹಾಗೂ ನಿರಂತರ ಬೆಂಬಲ ನೀಡುತ್ತಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ' ಎಂದರು.

ಚಿತ್ರನಟಿ ರಚಿತಾ ರಾಮ್ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಮಳಿಗೆಯನ್ನು ಉದ್ಘಾಟಿಸಿದರು. ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು, ಸಂಸ್ಥೆಯ ಹಿರಿಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಭಾರತ, ಮಧ್ಯಪ್ರಾಚ್ಯ, ಯುಎಸ್‌ಎ, ಯುಕೆ, ಕೆನಡಾ ಮತ್ತು ಆಸ್ಟ್ರೇಲಿಯಾ ಸೇರಿದಂತೆ ವಿಶ್ವದ 13 ದೇಶಗಳಲ್ಲಿ 375ಕ್ಕೂ ಅಧಿಕ ಶೋರೂಂಗಳನ್ನು ಹೊಂದಿರುವ ಮಲಬಾರ್ ಗೋಲ್ಡ್ ಆಕರ್ಷಕ ಮತ್ತು ಗುಣಮಟ್ಟದ ಚಿನ್ನಾಭರಣಗಳಿಗೆ ಹಾಗೂ ಗ್ರಾಹಕ ಕೇಂದ್ರಿತ ವಿಧಾನಗಳಿಗೆ ಖ್ಯಾತಿ ಪಡೆದಿದೆ. 22 ಸಾವಿರಕ್ಕೂ ಸಿಬ್ಬಂದಿ, 26 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಪಂಚದಾದ್ಯಂತ ಒಂದೂವರೆ ಕೋಟಿಗೂ ಅಧಿಕ ಗ್ರಾಹಕರಿಗೆ ತನ್ನ ಸೇವೆ ನೀಡುತ್ತಲಿದೆ.

ಏ.6 ರವರೆಗೆ ಕೊಡುಗೆ ಮಾರಾಟ: ಹೊಸ ಶೋರೂಮ್ ಆರಂಭದ ಪ್ರಯುಕ್ತ ಮಲಬಾರ್ ಸಂಸ್ಥೆ ಗ್ರಾಹಕರು ಖರೀದಿಸುವ ಚಿನ್ನದ ತೂಕ್ಕೆ ಸಮನಾಗಿ ಉಚಿತ ಬೆಳ್ಳಿಯ ಕೊಡುಗೆ ನೀಡಲಿದೆ. ಈ ಕೊಡುಗೆ ಮಾರಾಟ ಏ.6 ರವರೆಗೆ ಲಭ್ಯವಿದ್ದು ಷರತ್ತುಗಳು ಮತ್ತು ನಿಯಮಗಳಿಗೆ ಒಳಪಟ್ಟಿರುತ್ತದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಮಲಬಾರ್ ಸಂಸ್ಥೆ ಭರವಸೆಗಳು

- ಆಭರಣಗಳ ಆಯ್ಕೆಗೆ ಮಾರ್ಗದರ್ಶನ ನೀಡುವ ತರಬೇತಿ ಹೊಂದಿದ ತಂಡದ ಸೌಲಭ್ಯ
- ಗ್ರಾಹಕರಿಗೆ ತೃಪ್ತಿ ತರುವ ಶಾಪಿಂಗ್ ಅನುಭವ ನೀಡಲು ಬದ್ಧ
- ಪ್ರತಿ ಆಭರಣದಲ್ಲೂ ಬೆಲೆ ವಿವರದ ಮೂಲಕ ಪಾರದರ್ಶಕತೆ
- ಜೀವಿತಾವಧಿಯ ಉಚಿತ ನಿರ್ವಹಣಾ ಸೇವೆಗಳ ಮಾಹಿತಿ
- ಹಳೆಯ ಚಿನ್ನ, ವಜ್ರಗಳಿಗೆ ಶೇ 100ರಷ್ಟು ವಿನಿಮಯ ಮೌಲ್ಯದ ಖಾತರಿ
- ಎಲ್ಲ ಆಭರಣಗಳು 100% ಎಚ್‌ಯುಐಡಿ ಪಾಲನೆ ಖಚಿತತೆ
- ಪ್ರತಿ ಆಭರಣ 28 ಹಂತದ ಗುಣಮಟ್ಟ ಪರೀಕ್ಷೆಗೆ ಒಳಪಡಿಸುವಿಕೆ
- ಪ್ರತಿ ಆಭರಣಕ್ಕೂ 1 ವರ್ಷದ ಉಚಿತ ವಿಮಾ ಸೌಲಭ್ಯ
- ಅಧಿಕೃತ ಮೂಲಗಳಿಂದ ಚಿನ್ನ ಖರೀದಿ ಭರವಸೆ

ಇದರ ಜತೆ ಸಂಸ್ಥೆ ಆಭರಣಗಳ ಮೇಲೆ ವಿಸ್ತರಿತ ಕವರೇಜ್ ಮತ್ತು ವಾರಂಟಿ ಅವಕಾಶವನ್ನೂ ಕಲ್ಪಿಸುತ್ತಲಿದೆ. ಅಲ್ಲದೆ, ಮಲಬಾರ್ ಗ್ರೂಪ್ ತನ್ನ ಲಾಭದ ಶೇ.5 ರಷ್ಟು ಹಣವನ್ನು ಸಿಎಸ್‌ಆರ್ ಉಪಕ್ರಮದಡಿ ಆರೋಗ್ಯ, ವಸತಿ, ಶಿಕ್ಷಣ, ಪರಿಸರ, ಸುಸ್ಥಿರತೆ, ಹಸಿವು ನಿರ್ಮೂಲನೆ ಹಾಗೂ ಮಹಿಳಾ ಸಬಲೀಕರಣದಂತಹ ಕಾರ್ಯಕ್ರಮಗಳಿಗೆ ವಿನಿಯೋಗ ಮಾಡುತ್ತಲಿದೆ.

ಲಿಯಾಮ್ ಲಿವಿಂಗ್‌ಸ್ಟೋನ್ ಅರ್ಧಶತಕ • ತವರಿನಂಗಳದಲ್ಲಿ ಎಡವಿದ ಆರ್‌ಸಿಬಿ • ಗುಜರಾತ್‌ಗೆ 8 ವಿಕೆಟ್ ಜಯ

ಸಿರಾಜ್ ಬಿರುಗಾಳಿ; ಬಟ್ಲರ್ ಸಿಡಿಲಬ್ಬರ

• ಗಿರೀಶ ದೊಡ್ಡಮನಿ

ಜೋಸ್ ಬಟ್ಲರ್

ಬೆಂಗಳೂರು: ವೇಗಿ ಮೊಹಮ್ಮದ್ ಸಿರಾಜ್ ಅವರ ಪಾಲಿಗೆ ಚಿನ್ನಸ್ವಾಮಿ ಕ್ರೀಡಾಂಗಣವು 'ಅದೃಷ್ಟದ ತಾಣ' ಎಂಬುದು ಮತ್ತೊಮ್ಮೆ ಸಾಬೀತಾಯಿತು. ಆದರೆ ಈ ಸಲ ಅವರ ' ಬಿರುಗಾಳಿ'ಗೆ ನಲುಗಿದ್ದು ಮಾತ್ರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ. 2018ರಿಂದ 2024ರವರೆಗೆ ಆರ್‌ಸಿಬಿಯ ಬೌಲಿಂಗ್ ಸಾರಥ್ಯ ವಹಿಸಿದ್ದ ಸಿರಾಜ್ ಎದುರಾಳಿ ತಂಡಗಳಿಗೆ ದುಃಸ್ವಪ್ನವಾದ ಉದಾಹರಣೆಗಳು ಬಹಳಷ್ಟಿವೆ. ಆದರೆ, ಈ ವರ್ಷ ಆರ್‌ಸಿಬಿಯಿಂದ ರಿಲೀಸ್ ಆಗಿ ₹12.25 ಕೋಟಿಗೆ ಗುಜರಾತ್ ಟೈಟನ್ಸ್ ಸೇರಿರುವ ಸಿರಾಜ್ (19ಕ್ಕೆ3) ದಾಳಿ ರಂಗೇರಿತು. ಬುಧವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ 8 ವಿಕೆಟ್‌ಗಳಿಂದ ಪರಾಭವ ಗೊಳ್ಳಲು ಸಿರಾಜ್ ಆಟ ಕಾರಣವಾಯಿತು.

ಅಷ್ಟೇ ಅಲ್ಲ; ಲಯ ಕಂಡುಕೊಂಡ ಬ್ಯಾಟರ್ ಜೋಸ್ ಬಟ್ಲರ್ (73; 39ಎಸೆತ) ಅಬ್ಬರದ ಬ್ಯಾಟಿಂಗ್ ಬಲದಿಂದ ಗುಜರಾತ್ ತಂಡಕ್ಕೆ ಜಯದ ಹಾದಿ ಸುಲಭವಾಯಿತು. ಕ್ರೀಡಾಂಗಣದಲ್ಲಿ ಸೇರಿದ್ದ 25 ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿಗೆ ನಿರಾಸೆ ಕಾಡಿತು.

ಟೂರ್ನಿಯ ಕಳೆದೆರಡೂ ಪಂದ್ಯಗಳಲ್ಲಿ ಗೆದ್ದು ಅಂಕಪಟ್ಟಿಯ ಅಗ್ರಸ್ಥಾನದಲ್ಲಿದ್ದ ರಜತ್ ಪಾಟೀದಾರ್ ಬಳಗವು ತವರಿನಲ್ಲಿ ಆಡಿದ ಮೊದಲ ಹಣಾಹಣಿಯಲ್ಲಿ ಸೋತಿತು. ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕಿಳಿಯಿತು. ಅಗ್ರಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು. ಚೆಂದದ ಅರ್ಧಶತಕ ಗಳಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ (54; 40ಎಸೆತ) ಮತ್ತು ಜಿತೇಶ್ (33; 21ಎಸೆತ) ಅವರಿಬ್ಬರೂ 5ನೇ ವಿಕೆಟ್ ಜೊತೆಯಾಟದಲ್ಲಿ 52 (38ಎಸೆತ) ರನ್ ಸೇರಿಸದೇ ಹೋಗಿದ್ದರೆ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಸಾಧ್ಯತೆ ಇತ್ತು. ಲಿವಿಂಗ್‌ಸ್ಟೋನ್, ಜಿತೇಶ್ ಅವರಲ್ಲದೇ ಕೆಳಕ್ರಮಾಂಕದಲ್ಲಿ ಮಿಂಚಿದ ಟಿಮ್ ಡೇವಿಡ್ ಅವರ ಕಾಣಿಕೆಯಿಂದಾಗಿ ಆರ್‌ಸಿಬಿ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 169 ರನ್ ಸೇರಿಸಿತು. ಈ ಗೌರವಾರ್ಹ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಆತಿಥೇಯ ಬೌಲರ್‌ಗಳು ವಿಫಲರಾದರು. ಗುಜರಾತ್ 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಸಾಯಿ ಸುದರ್ಶನ್ ಕೇವಲ 1 ರನ್ ಅಂತರದಿಂದ ಅರ್ಧಶತಕ ಕೈತಪ್ಪಿಸಿಕೊಂಡರು.

ಸಿರಾಜ್ ಮಿಂಚು; ಸ್ಟೋನ್ ಆಸರೆ: ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಗುಜರಾತ್ ಟೈಟನ್ಸ್ ತಂಡವು ಪವರ್‌ಪ್ಲೇನಲ್ಲಿಯೇ ತನ್ನ ಶಕ್ತಿಪ್ರದರ್ಶನ ಮಾಡಿತು. ಕೇವಲ 38 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ಆರ್‌ಸಿಬಿ ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತು. ಟೈಟನ್ಸ್ ವೇಗದ ಜೋಡಿ ಸಿರಾಜ್ ಮತ್ತು ಅರ್ಷದ್ ಖಾನ್ ನೀಡಿದ ಪೆಟ್ಟಿನಿಂದಾಗಿ ವಿರಾಟ್ ಕೊಹ್ಲಿ (7 ರನ್), ಫಿಲ್ ಸಾಲ್ಟ್ (14 ರನ್) ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ (4 ರನ್) ಪೆವಿಲಿಯನ್‌ಗೆ ಮರಳಿದರು. ಹಸಿರು ಗರಿಕೆಗಳಿದ್ದ ಪಿಚ್‌ನಲ್ಲಿ ತಾಳ್ಮೆ ತಪ್ಪಿದ ಬ್ಯಾಟರ್‌ಗಳು ದಂಡ ತೆತ್ತರು.

ನಾಯಕ ರಜತ್ ಪಾಟೀದಾರ್ ಅವರೂ ಇಶಾಂತ್ ಶರ್ಮಾ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆತಿಥೇಯರು ಮೂರಂಕಿ ಮೊತ್ತ ಮುಟ್ಟುವರೇ ಎಂಬ ಸಂಶಯ ಆವರಿಸಿದ ಹೊತ್ತಿನಲ್ಲಿ ಲಿವಿಂಗ್‌ಸ್ಟೋನ್ ಕ್ರೀಸ್‌ಗೆ ಬಂದರು.

ಲಿವಿಂಗ್‌ಸ್ಟೋನ್ 9 ರನ್ ಗಳಿಸಿದ್ದ ಸಂದರ್ಭದಲ್ಲಿ ಬೌಂಡರಿಲೈನ್‌ನಲ್ಲಿದ್ದ ರಾಹುಲ್ ತೆವಾತಿಯಾ ಬಿಟ್ಟ ಕ್ಯಾಚ್ ತುಟ್ಟಿಯಾಯಿತು. ಅದರ ನಂತರ ಐದು ಭರ್ಜರಿ ಸಿಕ್ಸರ್‌ಗಳನ್ನು ಎತ್ತಿದ ಲಿವಿಂಗ್‌ಸ್ಟೋನ್ ತಮ್ಮ ತಂಡಕ್ಕೆ ಆಸರೆಯಾದರು.

ಜಿತೇಶ್ ಕೂಡ 5 ಬೌಂಡರಿ ಮತ್ತು 1 ಸಿಕ್ಸರ್ ಸಿಡಿಸಿದರು. ಇಬ್ಬರ ಆಟದಿಂದಾಗಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮದ ಹೊನಲು ಹರಿಯಿತು.

ತಂಡದ ಮೊತ್ತ 100 ದಾಟುವ ಮುನ್ನ ಜಿತೇಶ್ ಔಟಾದರು. ಕೃಣಾಲ್ ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಲಿಯಾಮ್ ಜೊತೆಗೂಡಿದ ಟಿಮ್ ಡೇವಿಡ್ (32; 18ಎ) ರನ್ ಗಳಿಕೆಯ ವೇಗ ಹೆಚ್ಚಿಸಿದರು.

19ನೇ ಓವರ್‌ನಲ್ಲಿ ಲಿಯಾಮ್ ವಿಕೆಟ್ ಗಳಿಸಿದ ಸಿರಾಜ್ ಮಿಂಚಿದರು. ಆದರೆ ಪ್ರಸಿದ್ಧ ಕೃಷ್ಣ ಹಾಕಿದ ಕೊನೆಯ ಓವರ್‌ನಲ್ಲಿ ಎರಡು ಬೌಂಡರಿ ಮತ್ತು ಸಿಕ್ಸರ್ ಸಹಿತ 16 ರನ್ ಸೂರೆ ಮಾಡಿದ ಡೇವಿಡ್ ಮಿಂಚಿದರು. ಕೊನೆಯಲ್ಲಿ ಯಾರ್ಕರ್‌ಗೆ ಬೌಲ್ಡ್ ಆದರು.

3 ವಿಕೆಟ್

ವಿಕೆಟ್ ಪಡೆದ ಸಂಭ್ರಮದಲ್ಲಿ ಮೊಹಮ್ಮದ್ ಸಿರಾಜ್ ಚಿತ್ರ:ಕೃಷ್ಣಕುಮಾರ್ ಪಿ.ಎಸ್.

ಸಿರಾಜ್–ಕೊಹ್ಲಿ ಮುಖಾಮುಖಿ

ಬಹಳಷ್ಟು ಕುತೂಹಲ ಕೆರಳಿಸಿದ ವಿರಾಟ್ ಕೊಹ್ಲಿ ಮತ್ತು ಮೊಹಮ್ಮದ್ ಸಿರಾಜ್ ಮುಖಾಮುಖಿ ನಡೆದಿದ್ದು ಕೇವಲ ಎರಡು ಎಸೆತಗಳಲ್ಲಿ ಮಾತ್ರ.

ಇನಿಂಗ್ಸ್‌ನ ಮೊದಲ ಓವರ್ ಬೌಲ್ ಮಾಡಿದ ಸಿರಾಜ್ ಅವರ ಪ್ರಥಮ ಎಸೆತದಲ್ಲಿ ಫಿಲ್ ಸಾಲ್ಟ್ ಅವರು ಒಂದು ರನ್ ಗಳಿಸಿದರು. ಕ್ರೀಸ್‌ಗೆ ಬಂದ ಕೊಹ್ಲಿ ಬ್ಯಾಟಿಂಗ್‌ಗೆ ಅಣಿಯಾದರು. ರನ್ ಅಪ್ ತೆಗೆದುಕೊಂಡು ಬಂದ ಸಿರಾಜ್ ಅರ್ಧಕ್ಕೆ ನಿಲ್ಲಿಸಿದರು. ಮತ್ತೆ ಬೌಲಿಂಗ್ ಆರಂಭಿಸಿದರು. ಆ ಎಸೆತವನ್ನು ಎಕ್ಸಟ್ರಾ ಕವರ್‌ಗೆ ಬೌಂಡರಿಗಟ್ಟಿದ ವಿರಾಟ್ ತಮ್ಮ ಖಾತೆ ತೆರೆದರು. ಸಿರಾಜ್ ಹಾಕಿದ ನಂತರದ ಎಸೆತದಲ್ಲಿ ವಿರಾಟ್ ಒಂದು ರನ್ ಪಡೆದರು. ಆದರೆ ಎರಡನೇ ಓವರ್‌ನಲ್ಲಿ ಅರ್ಷದ್ ಖಾನ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಪ್ರಸಿದ್ಧ ಕೃಷ್ಣಗೆ ಕ್ಯಾಚ್ ಆದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 8ಕ್ಕೆ169 (20 ಓವರುಗಳಲ್ಲಿ)
ಸಾಲ್ಟ್ ಬಿ ಸಿರಾಜ್ 14 (13ಎ, 4x1, 6x1)
ಕೊಹ್ಲಿ ಸಿ ಪ್ರಸಿದ್ಧ ಬಿ ಅರ್ಷದ್ 7 (6ಎ, 4x1)
ಪಡಿಕ್ಕಲ್ ಬಿ ಸಿರಾಜ್ 4 (3ಎ, 4x1)
ಪಾಟೀದಾರ್ ಎಲ್‌ಬಿಡಬ್ಲ್ಯು ಬಿ ಇಶಾಂತ್ 12 (12ಎ, 4x2)
ಲಿವಿಂಗ್‌ಸ್ಟೋನ್ ಸಿ ಬಟ್ಲರ್ ಬಿ ಸಿರಾಜ್ 54 (40ಎ, 4x1, 6x5)
ಜಿತೇಶ್ ಸಿ ತೆವಾಟಿಯಾ ಬಿ ಸಾಯಿ ಕಿಶೋರ್ 33 (21ಎ, 4x5, 6x1)
ಕೃಣಾಲ್ ಸಿ ಮತ್ತು ಬಿ ಸಾಯಿ ಕಿಶೋರ್ 5 (5ಎ, 4x1)
ಟಿಮ್ ಡೇವಿಡ್ ಬಿ ಪ್ರಸಿದ್ಧ 32 (18ಎ, 4x3, 6x2)
ಭುವನೇಶ್ವರ್ ಔಟಾಗದೇ 1 (2ಎ)
ಇತರೆ: 7 (ಲೆಗ್‌ಬೈ 4, ವೈಡ್ 3)
ವಿಕೆಟ್ ಪತನ: 1–8 (ವಿರಾಟ್ ಕೊಹ್ಲಿ, 1.4), 2–13 (ದೇವದತ್ತ ಪಡಿಕ್ಕಲ್, 2.2), 3–35 (ಫಿಲಿಪ್ ಸಾಲ್ಟ್, 4.4), 5–94 (ಜಿತೇಶ್ ಶರ್ಮಾ, 12.4), 6–104 (ಕೃಣಾಲ್ ಪಾಂಡ್ಯ, 12.4), 7–150 (ಲಿಯಾಮ್ ಲಿವಿಂಗ್‌ಸ್ಟೋನ್, 18.2), 8–169 (ಟಿಮ್ ಡೇವಿಡ್, 19.6).
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–19–3; ಅರ್ಷದ್ ಖಾನ್ 2–0–17–1; ಪ್ರಸಿದ್ಧ ಕೃಷ್ಣ 4–0–26–1; ಇಶಾಂತ್ ಶರ್ಮಾ 2–0–27–1; ರವಿಶ್ರೀನಿವಾಸನ್ ಸಾಯಿಕಿಶೋರ್ 4–0–22–2; ರಶೀದ್ ಖಾನ್ 4–0–54–0.

ಗುಜರಾತ್ ಟೈಟನ್ಸ್ 2ಕ್ಕೆ 170 (17.5 ಓವರ್‌ಗಳಲ್ಲಿ)
ಸಾಯಿ ಸಿ ಶರ್ಮಾ ಬಿ ಹ್ಯಾಜಲ್‌ವುಡ್ 49 (36ಎ, 4x7, 6x1)
ಶುಭಮನ್ ಸಿ ಲಿವಿಂಗ್‌ಸ್ಟೋನ್ ಬಿ ಕುಮಾರ್ 14 (14ಎ, 4x1, 6x1)
ಜೋಸ್ ಬಟ್ಲರ್ ಔಟಾಗದೇ 73 (39ಎ, 4x5, 6x6)
ರುದರ್‌ಫೋರ್ಡ್ ಔಟಾಗದೇ 30 (18ಎ, 4x1,6x3)
ಇತರೆ: 4 (ಲೆಗ್ ಬೈ 3, ವೈಡ್ 1)
ವಿಕೆಟ್ ಪತನ: 1–32 (ಶುಭಮನ್ ಗಿಲ್, 4.4), 2–107 (ಸಾಯಿ ಸುದರ್ಶನ್, 12.3)
ಬೌಲಿಂಗ್: ಭುವನೇಶ್ವರ ಕುಮಾರ್ 4–0–23–1, ಜೋಶ್ ಹ್ಯಾಜಲ್‌ವುಡ್ 3.5–0–43–1, ಯಶ್ ದಯಾಳ್ 3–0–20–0, ರಾಸಿಖ್ ಸಲಾಂ 3–0–35–0, ಕೃಣಾಲ್ ಪಾಂಡ್ಯ 3–0–34–0, ಲಿವಿಂಗ್‌ಸ್ಟೋನ್ 1–0–12–0.
ಪಂದ್ಯದ ಆಟಗಾರ: ಮೊಹಮ್ಮದ್ ಸಿರಾಜ್

ಫಲಿತಾಂಶ: ಗುಜರಾತ್ ಟೈಟನ್ಸ್ ತಂಡಕ್ಕೆ 8 ವಿಕೆಟ್ ಜಯ

ಸೇಡು ತೀರಿಸಿಕೊಳ್ಳುವ ಛಲದಲ್ಲಿ ಸನ್‌ರೈಸರ್ಸ್



ಅಜಿಂಕ್ಯ



ಕಮಿನ್ಸ್

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರನ್ನರ್ಸ್ ಅಪ್ ಸನ್‌ರೈಸರ್ಸ್ ಹೈದರಾಬಾದ್ ಗುರುವಾರ ಮುಖಾಮುಖಿಯಾಗಲಿವೆ. ಹೋದ ವರ್ಷದ ಫೈನಲ್‌ನಲ್ಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಸನ್‌ರೈಸರ್ಸ್ ಇದೆ.

ಈ ಟೂರ್ನಿಯಲ್ಲಿ ಉಭಯ ತಂಡಗಳೂ ಇದುವರೆಗೆ ಮೂರು ಪಂದ್ಯಗಳನ್ನು ಆಡಿವೆ. ತಲಾ ಎರಡರಲ್ಲಿ ಗೆದ್ದು, ಒಂದರಲ್ಲಿ ಸೋತಿವೆ. ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿಯೇ ಅಜಿಂಕ್ಯ ರಹಾನೆ ನಾಯಕತ್ವದ ಕೋಲ್ಕತ್ತ ತಂಡವು ತವರಿನಲ್ಲಿಯೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೋತಿತ್ತು. ನಂತರದ ಪಂದ್ಯದಲ್ಲಿ ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಗೆದ್ದಿತ್ತು. ಮೂರನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಎದುರು ವಾಂಖೆಡೆಯಲ್ಲಿ ಸೋತಿತ್ತು. ಈಗ ಮತ್ತೆ ತವರಿಗೆ ಮರಳಿರುವ ರಹಾನೆ ಬಳಗವು ಗೆಲುವಿನ ವಿಶ್ವಾಸದಲ್ಲಿದೆ.

ಕೆಕೆಆರ್ ತಂಡವು ನುರಿತ ಸ್ಪಿನ್ನರ್‌ಗಳಾದ ಸುನೀಲ್ ನಾರಾಯಣ್, ಮೊಯಿನ್ ಅಲಿ ಮತ್ತು ವರುಣ್ ಚಕ್ರವರ್ತಿ ಅವರ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಆದ್ದರಿಂದ ಈಡನ್ ಗಾರ್ಡನ್‌ನಲ್ಲಿ ಸ್ಪಿನ್ ಸ್ನೇಹಿ ಪಿಚ್ ಸಿದ್ಧಗೊಳಿಸುವ ಒತ್ತಡ ಬಂಗಾಳ ಕ್ರಿಕೆಟ್ ಸಂಸ್ಥೆಯ ಮೇಲೆ ಇದೆ. ಪಿಚ್ ಕ್ಯುರೇಟರ್ ಸುಜನ್ ಮುಖರ್ಜಿ ಅವರು ತವರಿನ ತಂಡದ ಬೇಡಿಕೆಗೆ ಸ್ಪಂದಿಸುವ ನಿರೀಕ್ಷೆ ಇದೆ.

ಪಿಚ್ ವಿಷಯದಾಚೆ ನೋಡಿದರೆ; ಕೆಕೆಆರ್ ತಂಡ ಸಂಯೋಜನೆಯೂ ಚರ್ಚೆಗೆ ಗ್ರಾಸವಾಗಿದೆ. ಮೆಗಾ ಹರಾಜಿಗಿಂತ ಮುಂಚೆ ಕೋಲ್ಕತ್ತ ತಂಡವು ನಾಯಕ ಶ್ರೇಯಸ್ ಅಯ್ಯರ್ (ಈಗ ಪಂಜಾಬ್ ಕಿಂಗ್ಸ್), ನಿತೀಶ್ ರಾಣಾ (ರಾಜಸ್ಥಾನ ರಾಯಲ್ಸ್), ಫಿಲ್ ಸಾಲ್ಟ್ (ಆರ್‌ಸಿಬಿ) ಮತ್ತು ಮಿಚೆಲ್ ಸ್ಟಾರ್ಕ್ (ಡಿ.ಸಿ) ಅವರನ್ನು ರಿಲೀಸ್ ಮಾಡಿತ್ತು. ಕಳೆದ 10 ದಿನಗಳಲ್ಲಿ ಅವರೆಲ್ಲರೂ ತಾವು ಸೇರ್ಪಡೆಯಾಗಿರುವ ತಂಡಗಳಿಗೆ ಉತ್ತಮ ಕಾಣಿಕೆ ನೀಡಿದ್ದಾರೆ.

ಸ್ಟಾರ್ಕ್ ಅವರನ್ನು ಬಿಡುಗಡೆ ಮಾಡಿದ್ದರಿಂದ ಕೆಕೆಆರ್ ವೇಗದ ಬೌಲಿಂಗ್ ವಿಭಾಗ ಸ್ವಲ್ಪ ಕಳೆಗುಂದಿದೆ. ಅವರು ಈಚೆಗೆ ಹೈದರಾಬಾದ್ ಎದುರಿನ ಪಂದ್ಯದಲ್ಲಿ 5 ವಿಕೆಟ್ ಗಳಿಸಿ ಡೆಲ್ಲಿ ಕ್ಯಾಪಿಟಲ್ಸ್ ಜಯಕ್ಕೆ ಕಾರಣರಾಗಿದ್ದರು. ಕೋಲ್ಕತ್ತ ತಂಡದಲ್ಲಿ ಸ್ಥಾನ ಪಡೆದಿರುವ ಆಸ್ಟ್ರೇಲಿಯಾದ ವೇಗಿ ಸ್ಪೆನ್ಸರ್ ಜಾನ್ಸನ್ ಅವರು ವೈಫಲ್ಯ ಅನುಭವಿಸಿದ್ದಾರೆ. ಎನ್ರಿಚ್ ನಾಕಿಯಾ ಅವರು ಬೆನ್ನುನೋವಿನಿಂದಾಗಿ ತಂಡದಿಂದ ಹೊರಗುಳಿದಿದ್ದಾರೆ.

ಇನ್ನು ಹೈದರಾಬಾದ್ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಟೂರ್ನಿಯ ಮೊದಲ ಪಂದ್ಯದಲ್ಲಿ ಸಿಕ್ಸರ್, ಬೌಂಡರಿಗಳ ಮಳೆ ಸುರಿಸಿದ್ದ ತಂಡವು ನಂತರದ ಎರಡೂ ಹಣಾಹಣಿಗಳಲ್ಲಿ ಲಖನೌ ಎದುರು 190 ಮತ್ತು ಡೆಲ್ಲಿ ಎದುರು 163 ರನ್ ಗಳಿಸಿತ್ತು. ನಾಯಕ ಮತ್ತು ವೇಗಿ ಪ್ಯಾಟ್ ಕಮಿನ್ಸ್ ಅವರೀಗ ತಮ್ಮ ಬ್ಯಾಟರ್‌ಗಳ ಜೊತೆಗೆ ಬೌಲಿಂಗ್ ಪಡೆಯನ್ನೂ ಚುರುಕುಗೊಳಿಸುವತ್ತ ಶ್ರಮಿಸಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಪಿಬಿಕೆಎಸ್	2	2	0	4	1.485
2	ಡಿಸಿ	2	2	0	4	1.320
3	ಆರ್‌ಸಿಬಿ	3	2	1	4	1.149
4	ಜಿಟಿ	3	2	1	4	0.807
5	ಎಂಐ	3	1	2	2	0.309
6	ಎಲ್‌ಎಸ್‌ಜಿ	3	1	2	2	-0.150
7	ಸಿಎಸ್‌ಕೆ	3	1	2	2	-0.771
8	ಎಸ್‌ಆರ್‌ಎಚ್	3	1	2	2	-0.871
9	ಆರ್‌ಆರ್	3	1	2	2	-1.112
10	ಕೆಕೆಆರ್	3	1	2	2	-1.428

‘ನೋಟ್‌ಬುಕ್’ ಸಂಭ್ರಮ: ರಾಠಿಗೆ ದಂಡ

ಲಖನೌ (ಪಿಟಿಐ): ಪಂಜಾಬ್ ಕಿಂಗ್ಸ್‌ನ ಆರಂಭ ಆಟಗಾರ ಪ್ರಿಯಾಂಶ್ ಆರ್ಯ ಅವರ ವಿಕೆಟ್ ಪಡೆದ ಮೇಲೆ ‘ಪತ್ರ ಬರೆದ ಹಾಗೆ’ ಸಂಭ್ರಮಿಸಿದ (ನೋಟ್‌ಬುಲ್ ಸೆಲೆಬ್ರೇಷನ್) ಲಖನೌ ಸೂಪರ್ ಜೈಂಟ್ಸ್ ತಂಡದ ಸ್ಪಿನ್ನರ್ ದಿಗ್ವೇಶ್ ರಾಠಿ ಅವರಿಗೆ ಬಿಸಿಸಿಐ ಪಂದ್ಯ ಸಂಭಾವನೆಯ ಶೇ 25ರಷ್ಟು ದಂಡ ವಿಧಿಸಿ ಬಿಸಿ ಮುಟ್ಟಿಸಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ಕೂಡ ವಿಧಿಸಿದೆ.

ಮಂಗಳವಾರ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದಿಗ್ವೇಶ್ ಈ ರೀತಿ ವರ್ತಿಸಿದ್ದು ಐಪಿಎಲ್ ನೀತಿಸಂಹಿತೆಯ ಉಲ್ಲಂಘನೆ. ಅವರು ಮ್ಯಾಚ್ ರೆಫ್ರಿಯ ತೀರ್ಮಾನ ಒಪ್ಪಿಕೊಂಡಿದ್ದಾರೆ ಎಂದು ಐಪಿಎಲ್ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇನ್ಸ್ಟಾಗ್ರಾಮ್: ಆರ್‌ಸಿಬಿ ದಾಖಲೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಇನ್ಸ್ಟಾಗ್ರಾಮ್ ಸಾಮಾಜಿಕ ಜಾಲತಾಣದಲ್ಲಿ ಅತಿ ಹೆಚ್ಚು ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ಫ್ರ್ಯಾಂಚೈಸಿಯಾಗಿದೆ. ಇನ್ಸ್ಟಾಗ್ರಾಮ್‌ನಲ್ಲಿ ಆರ್‌ಸಿಬಿಯು 1.80 ಕೋಟಿ ಫಾಲೋವರ್ಸ್‌ಗಳನ್ನು ಹೊಂದಿದೆ.

ಈ ಹಾದಿಯಲ್ಲಿ ಆರ್‌ಸಿಬಿಯು ತಲಾ ಐದು ಬಾರಿಯ ಚಾಂಪಿಯನ್ ತಂಡಗಳಾದ ಚೆನ್ನೈ ಸೂಪರ್ ಕಿಂಗ್ಸ್ (1.77 ಕೋಟಿ) ಮತ್ತು ಮುಂಬೈ ಇಂಡಿಯನ್ಸ್ (1.62 ಕೋಟಿ) ತಂಡಗಳನ್ನು ಹಿಂದಿಕ್ಕಿದೆ. ಕಳೆದ 17 ಆವೃತ್ತಿಗಳಲ್ಲಿ ಆರ್‌ಸಿಬಿ ತಂಡವು ಒಂದು ಬಾರಿಯೂ ಚಾಂಪಿಯನ್ ಆಗಿಲ್ಲ.

ಹೋದ ತಿಂಗಳ 23ರಂದು ಆರ್‌ಸಿಬಿ 1.70 ಕೋಟಿ ಫಾಲೋವರ್ಸ್ ಹೊಂದಿತ್ತು. 10 ದಿನಗಳ ಅವಧಿಯಲ್ಲಿ 1.80 ಕೋಟಿಗೆ ಏರಿಕೆಯಾಗಿದೆ.

ಕೀಪಿಂಗ್: ಸಂಜುಗೆ ಎನ್‌ಸಿಎ ಅನುಮತಿ

ಬೆಂಗಳೂರು: ವಿಕೆಟ್ ಕೀಪಿಂಗ್ ಮಾಡಲು ಎನ್‌ಸಿಎನಿಂದ ಅನುಮತಿ ದೊರೆತಿರುವ ಕಾರಣ ಸಂಜು ಸ್ಯಾಮ್ಸನ್ ಅವರು ರಾಜಸ್ಥಾನ ರಾಯಲ್ಸ್ ತಂಡದ ಮುಂದಿನ ಐಪಿಎಲ್ ಪಂದ್ಯಗಳಲ್ಲಿ ನಾಯಕತ್ವ ವಹಿಸುವ ಹಾದಿ ಸುಗಮಗೊಂಡಿದೆ.

ಫೆಬ್ರುವರಿಯಲ್ಲಿ ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯಲ್ಲಿ ಜೋಫ್ರಾ ಆರ್ಚರ್ ಬೌಲಿಂಗ್‌ನಲ್ಲಿ ಬೌನ್ಸರ್ ಬೆರಳಿಗೆ ಬಡಿದ ಕಾರಣ ಅವರ ಬಲ ತೋರುಬೆರಳಿಗೆ ಏಟಾಗಿದ್ದು, ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅವರಿಗೆ ಬ್ಯಾಟ್ ಮಾಡಲು ಅನುಮತಿ ನೀಡಿದ್ದ ಎನ್‌ಸಿಎ, ಕೀಪಿಂಗ್ ಮಾಡದಿರುವಂತೆ ಸಲಹೆ ನೀಡಿತ್ತು. ಹೀಗಾಗಿ ಅವರ ಬದಲು ರಿಯಾನ್ ಪರಾಗ್ ನಾಯಕತ್ವ ವಹಿಸಿದ್ದರು. ಸಂಜು ಇಂಪ್ಯಾಕ್ಟ್ ಪ್ಲೇಯರ್ ಆಗಿ ಬ್ಯಾಟಿಂಗ್ ಮಾಡಿದ್ದರು.

ಬಾಕ್ಸಿಂಗ್: ಸೆಮಿಗೆ ಜಾದುಮಣಿ

ನವದೆಹಲಿ (ಪಿಟಿಐ): ಭಾರತದ ಜಾದುಮಣಿ ಸಿಂಗ್ ಮಂಡೇಂಗ್‌ಬಮ್ ಅವರು ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಕಪ್‌ನ 50 ಕೆ.ಜಿ ವಿಭಾಗದಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸಿದರು. ಆದರೆ, ಭಾರತದ ಇತರ ಮೂವರು ಬಾಕ್ಸರ್‌ಗಳು ಆರಂಭಿಕ ಸುತ್ತಿನಲ್ಲೇ ಹೊರಬಿದ್ದರು.

ಹಾಲಿ ರಾಷ್ಟ್ರೀಯ ಚಾಂಪಿಯನ್ 20 ವರ್ಷ ವಯಸ್ಸಿನ ಜಾದುಮಣಿ ಅವರು ಮಂಗಳವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 3-2 ಅಂತರದಿಂದ ಕಳೆದ ಆವೃತ್ತಿಯ ಬೆಳ್ಳಿ ಪದಕ ವಿಜೇತ ಬ್ರಿಟನ್‌ನ ಎಲಿಸ್ ಟ್ರೋಬ್ರಿಡ್ಜ್ ಅವರನ್ನು ಮಣಿಸಿದರು. ಭಾರತದ ಬಾಕ್ಸರ್ ಸೆಮಿಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಅಸಿಲ್ಬೆಕ್ ಜಲಿಲೋವ್ ಅವರನ್ನು ಎದುರಿಸಲಿದ್ದಾರೆ.

ನರೇಂದರ್ ಬೆರ್ವಾಲ್ (90 + ಕೆ.ಜಿ), ನಿಖಿಲ್ ದುಬೆ (75 ಕೆ.ಜಿ), ಮತ್ತು ಜುಗ್ನೂ (85 ಕೆ.ಜಿ) ನಿರಾಸೆ ಮೂಡಿಸಿದರು. ನರೇಂದರ್ 2–3ರಿಂದ ಕಜಕಿಸ್ತಾನದ ಸಪರ್ಬೆ ಡೇನಿಯಲ್ ವಿರುದ್ಧ ಪರಾಭವಗೊಂಡರು.

ಐಎಸ್‌ಎಲ್: ಸೆಮಿಯ ಮೊದಲ ಲೆಗ್‌ನಲ್ಲಿ 2–0 ಜಯ

ಬಿಎಫ್‌ಸಿಗೆ ಮಣಿದ ಗೋವಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಚಾಂಪಿಯನ್ ಹಾಗೂ ಆತಿಥೇಯ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಬುಧವಾರ ಇಂಡಿಯನ್ ಸೂಪರ್ ಲೀಗ್ ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯದಲ್ಲಿ 2–0 ಗೋಲುಗಳಿಂದ ಗೋವಾ ಎಫ್‌ಸಿ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳ ಮುಂದೆ ಸಾಂಘಿಕ ಆಟ ಪ್ರದರ್ಶಿಸಿದ ಆತಿಥೇಯ ತಂಡವು ಫೈನಲ್‌ಗೆ ಮತ್ತಷ್ಟು ಹತ್ತಿರವಾಯಿತು. ಸುನಿಲ್ ಚೆಟ್ರಿ ಬಳಗವು ಇದೇ ತಂಡದ ವಿರುದ್ಧ ಭಾನುವಾರ ಗೋವಾದಲ್ಲಿ ರಿವರ್ಸ್ ಲೆಗ್ ಪಂದ್ಯವನ್ನು ಆಡಲಿದೆ.

ಐಎಸ್‌ಎಲ್‌ನ ಲೀಗ್ ಹಂತದಲ್ಲಿ ಗೋವಾ ವಿರುದ್ಧ ಬೆಂಗಳೂರು ಎರಡೂ ಪಂದ್ಯಗಳನ್ನು ಸೋತಿತ್ತು. ಈಗ ಆ ಸೋಲಿಗೆ ಸೂಕ್ತ ಸಮಯದಲ್ಲೇ ಸೇಡು ತೀರಿಸಿತು.

ಇದೇ ಕ್ರೀಡಾಂಗಣದಲ್ಲಿ ವಾರದ ಹಿಂದೆ ಪ್ಲೇ ಆಫ್ ಪಂದ್ಯದಲ್ಲಿ 5–0 ಗೋಲುಗಳಿಂದ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿದ್ದ ಬೆಂಗಳೂರು ತಂಡವು ಅದೇ ಆತ್ಮವಿಶ್ವಾಸದಲ್ಲಿ ಆಡಲಿಳಿಯಿತು. ಆರಂಭದಲ್ಲಿ ಉಭಯ ತಂಡಗಳ ನಡುವೆ ಸಮಬಲದ ಹೋರಾಟ ಕಂಡುಬಂತು. 42ನೇ ನಿಮಿಷ ಗೋವಾ ತಂಡದ ಸಂದೇಶ್ ಜಿಂಗಾನ್ ‘ಉಡುಗೊರೆ’ ಗೋಲು ನೀಡಿದ್ದರಿಂದ ವಿರಾಮದ ವೇಳೆಗೆ ಬೆಂಗಳೂರು ತಂಡಕ್ಕೆ 1–0 ಮುನ್ನಡೆ ಲಭಿಸಿತು. ಬೆಂಗಳೂರಿನ ರಯಾನ್ ವಿಲಿಯಮ್ಸ್ ಅವರ ಒತ್ತಡ ತಪ್ಪಿಸಲು ಚೆಂಡನ್ನು ಹೆಡ್ ಮಾಡಿದಾಗ ಅದು ಗೋವಾ ಗೋಲಿನೊಳಗೇ ಹೊಕ್ಕಿತು.

ಬಿಎಫ್‌ಸಿ ತಂಡದ ರೆಯನ್ ಡೇಲ್ ವಿಲಿಯಮ್ಸ್ (ಎಡ) ಮತ್ತು ಗೋವಾ ತಂಡದ ಸಂದೇಶ್ ಜಿಂಗಾನ್ ಚೆಂಡಿಗಾಗಿ ಸೆಣಸಾಟ ನಡೆಸಿದರು. ಚಿತ್ರ: ಬಿ.ಕೆ.ಜನಾರ್ದನ್

ಉತ್ತರಾರ್ಧದಲ್ಲಿ ಎರಡೂ ತಂಡಗಳ ಆಟಗಾರರು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. 51ನೇ ನಿಮಿಷ ನಾಮ್ಗ್ಯಾಲ್ ಭುಟಿಯಾ ಅವರ ಕ್ರಾಸ್‌ನಲ್ಲಿ ಎಡ್ಗರ್ ಮೆಂಡೆಝ್ ಅವರು ಗೋವಾ ತಂಡದ ರಕ್ಷಣಾ ವ್ಯೂಹವನ್ನು ಭೇದಿಸಿ ಚೆಂಡನ್ನು ಅಮೋಘವಾಗಿ ಗುರಿ ಸೇರಿಸಿದರು. ಹೀಗಾಗಿ ಆತಿಥೇಯ ತಂಡಕ್ಕೆ 2–0 ಮುನ್ನಡೆ ಲಭಿಸಿತು. ಅದೇ ಅಂತರವನ್ನು ಕೊನೆಯವರೆಗೆ ಕಾಯ್ದುಕೊಳ್ಳುವಲ್ಲಿ ಬೆಂಗಳೂರು ತಂಡದ ಆಟಗಾರರು ಯಶಸ್ವಿಯಾದರು.

ಬಾಗನ್‌ಗೆ ಜೆಮ್ಶೆಡ್‌ಪುರ ಸವಾಲು

ಜೆಮ್ಶೆಡ್‌ಪುರ (ಪಿಟಿಐ): ಆತಿಥೇಯ ಜೆಮ್ಶೆಡ್‌ಪುರ ತಂಡವು ಮತ್ತೊಂದು ಸೆಮಿಫೈನಲ್‌ನ ಮೊದಲ ಲೆಗ್‌ನ ಪಂದ್ಯದಲ್ಲಿ ಮೋಹನ್ ಬಾಗನ್ ತಂಡವನ್ನು ಗುರುವಾರ ಎದುರಿಸಲಿದೆ. ಇದೇ ತಂಡಗಳ ನಡುವೆ ರಿವರ್ಸ್ ಲೆಗ್ ಪಂದ್ಯ ಇದೇ 7ರಂದು ಕೋಲ್ಕತ್ತ ದಲ್ಲಿ ನಡೆಯಲಿದೆ. ಇದೇ 12ರಂದು ಫೈನಲ್ ಪಂದ್ಯ ನಿಗದಿಯಾಗಿದೆ.

ಗೋವಾ ತಂಡಕ್ಕೆ ಜೈಸ್ವಾಲ್



ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಅವರು ದೇಶಿಯ ಕ್ರಿಕೆಟ್‌ನಲ್ಲಿ ಮುಂಬೈ ತಂಡವನ್ನು ತೊರೆಯಲು ತೀರ್ಮಾನಿಸಿದ್ದಾರೆ. ತಮ್ಮ ನಿರ್ಧಾರಕ್ಕೆ ವೈಯಕ್ತಿಕ ಕಾರಣಗಳನ್ನು ನೀಡಿದ್ದು ಮುಂದಿನ ಸಾಲಿನಿಂದ ಗೋವಾ ತಂಡಕ್ಕೆ ಆಡಲಿದ್ದಾರೆ.

ಈ ಸಂಬಂಧ ಜೈಸ್ವಾಲ್ ಅವರು ಮುಂಬೈ ಕ್ರಿಕೆಟ್ ಸಂಸ್ಥೆಗೆ (ಎಂಸಿಎ) ಮಂಗಳವಾರ ಪತ್ರ ಬರೆದಿದ್ದು, ಮುಂಬೈ ತಂಡ ತ್ಯಜಿಸಲು ಬಯಸಿದ್ದು ಗೋವಾಕ್ಕೆ ಆಡಲು ನಿರ್ಧರಿಸಿರುವುದಾಗಿ ತಿಳಿಸಿದ್ದರು. ಎಂಸಿಎ ಆಡಳಿತ ಮಂಡಳಿ ಇದಕ್ಕೆ ಒಪ್ಪಿಗೆ ನೀಡಿದೆ. 23 ವರ್ಷ ವಯಸ್ಸಿನ ಜೈಸ್ವಾಲ್ ಮುಂದಿನ ಋತುವಿನಿಂದ ಗೋವಾಕ್ಕೆ ಆಡಲಿದ್ದಾರೆ.

‘ನಿಜ, ಇದು ಅಚ್ಚರಿಯ ನಡೆ. ಈ ನಿಲುವಿಗೆ ಬರಬೇಕಾದರೆ ಅವರ ಮನಸ್ಸಿನಲ್ಲೇನೊ ಇರಬಹುದು. ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿ ಪತ್ರ ಬರೆದಿದ್ದು, ಅದಕ್ಕೆ ಅನುಮತಿ ನೀಡಿದ್ದೇವೆ’ ಎಂದು ಎಂಸಿಎ ಅಧಿಕಾರಿಯೊಬ್ಬರು ಬುಧವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ರಾಷ್ಟ್ರೀಯ ತಂಡದ ಪಂದ್ಯ ಇಲ್ಲದಿದ್ದರೆ ಎಲ್ಲ ಆಟಗಾರರು ದೇಶಿ ಕ್ರಿಕೆಟ್‌ನಲ್ಲಿ ಆಡುವುದು ಕಡ್ಡಾಯ ಎಂದು ಬಿಸಿಸಿಐ ನಿರ್ದೇಶನದ ನಂತರ, ಜನವರಿ 23 ರಿಂದ 25ರವರೆಗೆ ನಡೆದ ರಣಜಿ ಟ್ರೋಫಿ ‘ಎ’ ಗುಂಪಿನ ಪಂದ್ಯದಲ್ಲಿ ಅವರು ಮುಂಬೈ ತಂಡದ ಪರ (ಜಮ್ಮು ಮತ್ತು ಕಾಶ್ಮೀರ ವಿರುದ್ಧ) ಕೊನೆಯದಾಗಿ ಆಡಿದ್ದರು.

ಪಾಕ್‌ಗೆ ಸೋಲು: ಕಿವೀಸ್‌ಗೆ ಸರಣಿ

ಹ್ಯಾಮಿಲ್ಟನ್ (ಎಎಫ್‌ಪಿ): ಮಿಚೆಲ್ ಹೇ (ಔಟಾಗದೇ 99; 78ಎ) ಅವರ ಬ್ಯಾಟಿಂಗ್ ಮತ್ತು ಬೆನ್ ಸಿಯರ್ಸ್ (59ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡವು ಬುಧವಾರ ಎರಡನೇ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 84 ರನ್‌ಗಳಿಂದ ಮಣಿಸಿತು.

ಒಂದು ಪಂದ್ಯ ಬಾಕಿ ಇರುವಂತೆ ಆತಿಥೇಯ ತಂಡವು 2–0ಯಿಂದ ಸರಣಿ ಕೈವಶಮಾಡಿಕೊಂಡಿತು. ಮೊದಲ ಪಂದ್ಯವನ್ನು ಆತಿಥೇಯರು 73 ರನ್‌ಗಳಿಂದ ಜಯಿಸಿದ್ದರು.

ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 292 ರನ್ ಗಳಿಸಿತು. ಗುರಿ ಬೆನ್ನತ್ತಿದ ಪಾಕ್ 41.1 ಓವರ್‌ಗಳಲ್ಲಿ 208 ರನ್‌ಗಳಿಸಿ ಹೋರಾಟ ಮುಗಿಸಿತು.

ವಿಂಡೀಸ್, ದ.ಆಫ್ರಿಕಾ ಸರಣಿಗೆ ವೇಳಾಪಟ್ಟಿ ಪ್ರಕಟ

ನವದೆಹಲಿ (ಪಿಟಿಐ):ಪ್ರಸಕ್ತ ಋತುವಿನಲ್ಲಿ ಭಾರತ ತವರಿನಲ್ಲಿ ಆಡಲಿರುವ ನಾಲ್ಕು ಟೆಸ್ಟ್ ಪಂದ್ಯಗಳಿಗೆ ಅಹಮದಾಬಾದ್, ಕೋಲ್ಕತ್ತ, ನವದೆಹಲಿ ಮತ್ತು ಗುವಾಹಟಿ ಆತಿಥ್ಯ ವಹಿಸಲಿವೆ. ಬಿಸಿಸಿಐ ಬುಧವಾರ ಪ್ರವಾಸಿ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ವಿರುದ್ಧದ ವೇಳಾಪಟ್ಟಿಯನ್ನು ಪ್ರಕಟಿಸಿದೆ.

ಅಕ್ಟೋಬರ್‌ನಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ ಎರಡು ಟೆಸ್ಟ್ ಪಂದ್ಯಗಳು ನಡೆಯಲಿವೆ. ಮೊದಲ ಟೆಸ್ಟ್ ಅಹಮದಾಬಾದ್‌ನಲ್ಲಿ (ಅಕ್ಟೋಬರ್ 6 ರಿಂದ) ಮತ್ತು ಎರಡನೇ ಟೆಸ್ಟ್ ಕೋಲ್ಕತ್ತದಲ್ಲಿ (ಅಕ್ಟೋಬರ್ 18ರಿಂದ) ನಡೆಯಲಿದೆ.

ನವೆಂಬರ್– ಡಿಸೆಂಬರ್‌ನಲ್ಲಿ ಪ್ರವಾಸ ಕೈಗೊಳ್ಳಲಿರುವ ದಕ್ಷಿಣ ಆಫ್ರಿಕಾ ತಂಡ ಎರಡು ಟೆಸ್ಟ್, ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ.

ಮೊದಲ ಟೆಸ್ಟ್ ನವದೆಹಲಿಯಲ್ಲಿ (ನ. 18 ರಿಂದ), ಎರಡನೇ ಟೆಸ್ಟ್ ಗುವಾಹಟಿಯಲ್ಲಿ (ನ. 26 ರಿಂದ) ನಡೆಯಲಿದೆ.

ಏಕದಿನ ಸರಣಿ: ಮೊದಲ ಏಕದಿನ ರಾಂಚಿ (ನ.30), ಎರಡನೇ ಏಕದಿನ ರಾಯಪುರ (ಡಿ.3), ಮೂರನೇ ಏಕದಿನ ವಿಶಾಖಪಟ್ಟಣ (ಡಿ.6).

ಟಿ20 ಸರಣಿ: ಮೊದಲ ಟಿ20 ಕಟಕ್ (ಡಿ.6), ಎರಡನೇ ಟಿ20 ಚಂಡೀಗಢ (ಡಿ.6); ಮೂರನೇ ಟಿ20 ಧರ್ಮಶಾಲಾ (ಡಿ.6), ನಾಲ್ಕನೇ ಟಿ20 ಲಖನೌ (ಡಿ.17), ಐದನೇ ಟಿ20 ಅಹಮದಾಬಾದ್ (ಡಿ.19).